ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಸಾಂಪ್ರದಾಯಿಕ ಒಕ್ಕಲುತನ

ಈರಯ್ಯ ಕಿಲ್ಲೇದಾರ



ಸಾಂಪ್ರದಾಯಿಕ ಒಕ್ಕಲುತನ

ಈರಯ್ಯ ಕಿಲ್ಲೇದಾರ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

SAMPRADAYAKA OKKALUTANA

Written by Eraiah Killedara, Published by : Ashoka N. Chalavadi, Administrative Officer, Kannada Pustaka Pradhikara (Kannada Book Authority), Kannada Bhavana, J.C. Road, Bangalore-560 002.

Pages : viii + 84 Price : **30/-**

© : Kannada Pustaka Pradikara

Edition : 2008

Copies : 1000

ಪ್ರಥಮ ಮುದ್ರಣ : 2008

ಗ್ರಂಥ ಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ

ಪ್ರತಿಗಳು : 1000

ಪುಟಗಳು : viii + 84

ಬೆಲೆ : **ರೂ. ೩೦/-**

ಮುಖಪುಟ ವಿನ್ಯಾಸ : ವಿ.ರಾಜ್ (ವಿಶ್ವಾಸ್ ಪ್ರಿಂಟ್ಸ್)

ISBN : 81-7713-239-3

ಪ್ರಕಾಶಕರು :
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೨
ಕರಡು ತಿದ್ದಿದವರು : ಲೇಖಕರು

Printed at :
ವಿಶ್ವಾಸ್ ಪ್ರಿಂಟ್ಸ್
VISHWAS PRINTS
23, 3rd Cross, Nanjamba Agrahara
Chamarajpet, Bangalore - 18
Ph : 26604835

ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು-ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅನುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡು ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾ ದೇವಿಯವರ ಜ್ಞಾನಶಕ್ತಿ ೨ X ೨=೪ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗು ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ಇಂದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲಾ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆ ಯಿಂದ ಆ ಭಾಷೆಯನ್ನ ಹೊರಗಿಡುವುದು;

ಆಡಳಿತ ಶಿಕ್ಷಣ ಸಂಪರ್ಕಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯ ವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಸ್ಥಿತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗು ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ ಬದುಕನ್ನು ರೂಪಿಸುವ ಪ್ರಭುತ್ವ ಹಾಗು ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮುಖೇಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ –

ಹಿಂದಿಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲ ವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನಶೈಲಿ, ಏಕಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೇನಂದರೆ, ಜೀವನ ವೈವಿಧ್ಯತೆಯ ಬಹುಮುಖಿ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗು ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು ; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತುದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದು ಹಾಗು ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗು ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

*   *   *   *   *

ಈರಯ್ಯ ಕಿಲ್ಲೇದಾರ ಅವರು ಕೃಷಿಯನ್ನೇ ನಂಬಿ ಬದುಕುತ್ತಿರುವ ಜೀವ. ಆದರೆ, ಅಧಿಕ ಇಳುವರಿಯ ರಾಸಾಯನಿಕ ಬಳಕೆಯ ಆಧುನಿಕ ಕೃಷಿಗೆ ಜೋತುಬೀಳದೆ, ಸಾಂಪ್ರದಾಯಿಕ ಪದ್ಧತಿಯ ಜೈವಿಕ ಕೃಷಿ ವಿಧಾನವನ್ನು ಅನುಸರಿಸುತ್ತಿರುವವರು. ಪ್ರಯೋಗಗಳ ಮೂಲಕ ಅನುಭವವನ್ನೇ ಜ್ಞಾನವಾಗಿಸಿಕೊಂಡಂತೆ ಕೃಷಿಯ ಕಾಯಕವನ್ನು ಬೆಳೆಸುತ್ತಿದ್ದಾರೆ. ಅವರ ಅನುಭವದ ಸಾರ ಈ ಕೃತಿ. ಇಂಥ ಕೃತಿಯನ್ನು ನೀಡಿದ ಈರಯ್ಯ ಕಿಲ್ಲೇದಾರ ಅವರಿಗೆ ಆತ್ಮೀಯ ಕೃತಜ್ಞತೆಗಳು.

ಪ್ರೊ. ಎಸ್.ಜಿ. ಸಿದ್ದರಾಮಯ್ಯ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಪರಿವಿಡಿ

ಅ.ಸಂ.	ವಿಷಯ	ಪುಟ
೧.	ಕಲಿತದ್ದೆಲ್ಲಾ ಮರೆಯಬೇಕು	೧
೨.	ವಚನ ಸಾಹಿತ್ಯದಲ್ಲಿ ಒಕ್ಕಲುತನದ ಪರಿಭಾಷೆ	೪
೩.	ಅಂಗೈಯಂತೆ ಹೊಲ ಮಾಡಿದರೆ	೧೬
೪.	ಚರಗ-ಜೈವಿಕ ಕೀಟ ಹತೋಟಿ ವಿಧಾನ	೨೦
೫.	ಸೆಗಣಿ ಗೊಬ್ಬರದ ಮಹತ್ವ	೨೩
೬.	ಹಟ್ಟಿ ಹಬ್ಬ	೨೬
೭.	ರೈತರ ನಂಬುಗೆಯ ಮಳೆರಾಯ	೨೮
೮.	ಸ್ವಾವಲಂಬಿ ಕೃಷಿಗೆ ಜವಾರಿ ಬೀಜಗಳು	೩೩
೯.	ಧಾನ್ಯಗಳ ರಕ್ಷಣೆಗೆ ಸುರಕ್ಷಿತ ವಿಧಾನಗಳು	೩೮
೧೦.	ಕೀಟ ಹತೋಟಿಗೆ ಸುಲಭ ಉಪಾಯಗಳು	೪೫
೧೧.	ಸಾಂವಿ--ಖರ್ಚಿಲ್ಲದೆ ಆದಾಯ ತರುವ ಬೆಳೆ	೫೦
೧೨.	ಸಾವಯವ ಕೃಷಿಯ ಸಾಧ್ಯತೆಗಳು	೫೨
೧೩.	ಬಹುಪಯೋಗಿ ಬೇವು	೫೭
೧೪.	ಮಣ್ಣು ಮತ್ತು ನೀರಿನ ರಕ್ಷಣೆಗೆ ತಡೆಗೋಡೆಗಳು	೫೯
೧೫.	ಮಿಶ್ರಬೆಳೆ ಬೇಸಾಯ	೬೧
೧೬.	ಎತ್ತಿನ ಬೇಸಾಯ ಸೂಕ್ತ ಮತ್ತು ಮಿತವ್ಯಯ	೬೪
೧೭.	ಮೇಟಿ ವಿದ್ಯೆ	೬೭
೧೮.	ನುಗ್ಗೆ ತಂದ ಹಿಗ್ಗು	೭೦
೧೯.	ಬದಲಾದ ಒಕ್ಕಲುತನದ ಪರಿಭಾಷೆ	೭೪
೨೦.	ಕಳೆಗಳು ವೈರಿಗಳಲ್ಲ	೭೭
೨೧.	ಅಪ್ಪ ಮಾಡುತ್ತಿದ್ದ ಒಕ್ಕಲುತನ	೮೦

ಕಲಿತದ್ದೆಲ್ಲಾ ಮರೆಯಬೇಕು

೧೯೮೬ ರಲ್ಲಿ ನಮ್ಮೂರಲ್ಲಿ ಕೃಷಿ ವಿಚಾರ ವಿನಿಮಯ ಕೇಂದ್ರವನ್ನು ಸ್ಥಾಪಿಸಿದೆವು. ಆ ಕೇಂದ್ರದ ವತಿಯಿಂದ ನೂರಾರು ಕಾರ್ಯ ಚಟುವಟಿಕೆಗಳನ್ನು ಮಾಡುತ್ತ ಬಂದಿದ್ದೇವೆ. ಗ್ರಾಮೀಣ ಭಾಗದ ಜನರಿಗೆ ವಿಶೇಷವಾಗಿ ರೈತರಿಗೆ ಉಪಯುಕ್ತವಾದ ವಿಚಾರಗಳನ್ನು ತಿಳಿಸಿಕೊಡುವುದು ಮತ್ತು ರೈತರಲ್ಲಿ ವಿಚಾರ ವಿನಿಮಯ ಮಾಡಿಕೊಳ್ಳಲು ಈ ವೇದಿಕೆಯು ಅನುಕೂಲಕರವಾಗಿದೆ. ೧೯೮೬ ರಲ್ಲಿ ಈ ಕೇಂದ್ರದ ಮೂಲಕ ಒಂದು ವಿಶಿಷ್ಟ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. 'ಕೃಷಿ ತಾಪಸಿ' ಎಂದೇ ಹೆಸರಾಗಿರುವ ಪ್ರದೀಪ ತಾಪಸ ಅವರ ಉಪನ್ಯಾಸ ಕೇಳಲು ಕೇವಲ ಎಂಟು ಜನ ರೈತರು ಬಂದಿದ್ದರು. ಅವರು ಬೆಳಿಗ್ಗೆ ೧೧ ಗಂಟೆಯಿಂದ ಸಂಜೆ ೪ ಗಂಟೆಯವರೆಗೆ (ಅರ್ಧ ಗಂಟೆ ಊಟಕ್ಕೆ ಬಿಡುವು) ದೀರ್ಘ ಉಪನ್ಯಾಸ ಮಾಡಿದರು.

ಈ ಲೇಖನ ಬರೆಯಲು ಮುಖ್ಯ ಪ್ರೇರಣೆ ಪ್ರದೀಪ ತಾಪಸ ಅವರ ಉಪನ್ಯಾಸ ಎಂದರೆ ತಪ್ಪಾಗಲಾರದು. ಮೊದಲು ಸಾಂಪ್ರದಾಯಿಕ ಕೃಷಿಯತ್ತ ನಮ್ಮ ಗಮನ ಸೆಳೆದವರು ತಾಪಸ ಅವರು. ನಮ್ಮ ರೈತ ಮಿತ್ರರಿಗೆ ತಾಪಸ ಅವರು ಪ್ರಶ್ನೆ ಮಾಡಿದ್ದು ಹೀಗೆ - 'ನಿಮ್ಮೂರಲ್ಲಿ ಟ್ರ್ಯಾಕ್ಟರುಗಳಿವೆಯೆ? ಕ್ರಿಮಿನಾಶಕ, ಕೀಟ ನಾಶಕ ಸಿಂಪಡಿಸುವ ಸ್ಪ್ರೇ ಪಂಪ್‌ಗಳಿವೆಯೇ?, ರಾಸಾಯನಿಕ ಗೊಬ್ಬರ ಬಳಸುತ್ತೀರಾ?, ಒಕ್ಕುವ ಯಂತ್ರಗಳಿವೆಯೇ' ಎಂದು ಕೇಳಿದಾಗ ಇವೆಲ್ಲ ನಮ್ಮಲ್ಲಿವೆ ಎಂದು ಅಭಿಮಾನದಿಂದ ನಾವೆಲ್ಲ ಹೇಳಿದ್ದೆವು. ಇವರೆಲ್ಲ ಅಭಿಮಾನದಿಂದ ಹೇಳಲು ಕಾರಣವೆಂದರೆ ತಾವೆಲ್ಲ ಪ್ರಗತಿಪರ ರೈತರು, ಆಧುನಿಕ ಪದ್ಧತಿ ಅಳವಡಿಸಿದ ರೈತರು ಎಂಬುದಾಗಿತ್ತು.

'ಯಾವುದೇ ಕೀಟನಾಶಕ ಬಳಸದೆ, ರಾಸಾಯನಿಕ ಗೊಬ್ಬರಗಳನ್ನು ಬಳಸದೆ, ಟ್ರ್ಯಾಕ್ಟರ್ ಇಲ್ಲದೆ, ಒಕ್ಕುವ ಯಂತ್ರಗಳಿಲ್ಲದೆ ನೀವು ಉತ್ಪಾದಿಸುವ ಪ್ರಮಾಣದ ಎರಡು ಪಟ್ಟು ಹೆಚ್ಚು ಉತ್ಪಾದಿಸಲು ಸಾಧ್ಯವಿದೆ ಎಂದು ತಾಪಸ ಅವರು ಹೇಳಿದಾಗ ನಮ್ಮ ಗೆಳೆಯರು ರೈತರು ನಕ್ಕರು.

ಅದ್ಹೇಗೆ ಸಾಧ್ಯ? ಎಂಬ ಕುತೂಹಲ ನಮ್ಮಲ್ಲಿ ಮೂಡಿತು. ಅವರು ಅರವಿಂದಾಶ್ರಮದಲ್ಲಿದ್ದು ನೈಸರ್ಗಿಕ ಕೃಷಿಯನ್ನು ಪ್ರತ್ಯಕ್ಷ ಮಾಡಿದ ಅನುಭವವುಳ್ಳವರು. ಅವರು ಹೇಳಿದ ಸಾವಯವ ಪದ್ಧತಿಯ ಕೃಷಿ ನಮ್ಮ ರೈತರಿಗೆ ಹೊಸತಾದದ್ದು ಅಲ್ಲ.

ಅಳವಡಿಸಲು ಮುಖ್ಯವಾಗಿ ಮನೋಬಲ ಬೇಕು. ಹೆಚ್ಚು ವೆಚ್ಚದಾಯಕ ಅಥವಾ ಶ್ರಮಿಕ ರೈತನಿಗೆ ಅಸಾಧ್ಯವಾದ ತಂತ್ರವನ್ನು ಅವರು ಹೇಳಿರಲಿಲ್ಲ.

ಕೃಷಿಯಲ್ಲಿ ಒಮ್ಮೆಲೆ ಪಾಂಡಿತ್ಯ ಪಡೆಯುವುದು ಸಾಮಾನ್ಯ ಮಾತಲ್ಲ. 'ಇದು ಹೀಗೆ, ಇದೇ ಸತ್ಯ' ಎಂದೂ ಹೇಳಲಾಗದು. ಒಕ್ಕಲುತನ ಸುಧಾರಿಸಿದ ಶಬ್ದವಾಗಿದೆ. 'ಕಮತ' ಎಂದು ಹಿಂದಿನ ಜನರು ಕರೆಯುತ್ತಿದ್ದರು. ಹಸಿರು ಕ್ರಾಂತಿ ಮಾಡಲು ಒಕ್ಕಲುತನದಲ್ಲಿ ಸುಧಾರಣೆ ತರಲು ಆಧುನಿಕ ಕೃಷಿ ಎಂದು ಕರೆದರು. 'ಕಮತ' ಎಂದರೆ 'ಕಮ್ಮಿ ಆಗಿದೆ ತಾ' ಎಂದು ಅರ್ಥವುಳ್ಳದ್ದಾಗಿದೆ. ಬಂಡವಾಳವಾಗಲಿ, ಶ್ರಮವಾಗಲಿ, ಕೂಲಿಕಾರರಾಗಲಿ ಹಾಗೂ ಬಳಸುವ ಒಕ್ಕಲುತನದ ಪರಿಕರಗಳಾಗಲಿ ಎಷ್ಟು ಬಳಸಿದರೂ ಕಡಿಮೆಯೇ ಆಗುತ್ತವೆ. ಕುಲಕಸುಬೆಂದು ಅನಿವಾರ್ಯವಾಗಿ ಜೀವನೋಪಾಯಕ್ಕಾಗಿ ಕೆಲವೇ ಜನರು ದೈವದ ಮೇಲೆ ಭಾರ ಹಾಕಿ ಕೃಷಿ ಮಾಡುತ್ತಿದ್ದಾರೆ.

ಬಹಳ ರೈತರು ಇಂದಿನ ಪರಿಸ್ಥಿತಿ ಒತ್ತಡದ ಮೂಲಕ ಕೃಷಿಯಲ್ಲೂ ವ್ಯಾವಹಾರಿಕ ಪ್ರಜ್ಞೆ ಬೆಳೆಸಿಕೊಂಡಿದ್ದಾರೆ. ಒಂದು ಚೀಲ ಬೆಳೆದ ಹೊಲದಲ್ಲಿ ಹತ್ತು ಚೀಲ ಉತ್ಪನ್ನ ಬರುವಂತಾಗಿದೆ. ನೂರು ರೂಪಾಯಿಗೆ ಮಾರಾಟವಾಗುತ್ತಿದ್ದ ಒಂದು ಕ್ವಿಂಟಾಲ್ ಜೋಳ ಐದುನೂರು ರೂಪಾಯಿಗೆ ಮಾರಾಟವಾಗುತ್ತಿದೆ. ಟ್ರ್ಯಾಕ್ಟರ್‌ಗಳು ಬಂದಿವೆ. ಒಕ್ಕುವ ಯಂತ್ರ ರಾಸಾಯನಿಕ ಗೊಬ್ಬರ ಮತ್ತು ರಾಸಾಯನಿಕ ಕ್ರಿಮಿನಾಶಕ ಔಷಧಿಗಳು, ಹೈಬ್ರಿಡ್ ತಳಿಯ ಬೀಜಗಳು ಹೀಗೆ ಕೃಷಿಯಲ್ಲಿ ಹಲವಾರು ಬದಲಾವಣೆಗಳಾಗಿವೆ. ಆದರೆ ರೈತರ ಪರಿಸ್ಥಿತಿಯಲ್ಲಿ ಪ್ರಗತಿಯಾಗಲಿಲ್ಲ.

ಹಿಂದಿನ ಸಾಂಪ್ರದಾಯಿಕ ಕೃಷಿಯಲ್ಲಿ ರೈತ ಏನೂ ಬಂಡವಾಳ ಹಾಕದೆ ಬೆಳೆ ತೆಗೆಯುತ್ತಿದ್ದ. ಹೊಲದ ಮಣ್ಣು ಕೆಟ್ಟಿರಲಿಲ್ಲ. ವಾತಾವರಣ ವಿಷವಾಗಿರಲಿಲ್ಲ. ಉಣ್ಣುವ ಊಟ ವಿಷಮಿಶ್ರಿತವಾಗಿರಲಿಲ್ಲ. ಜನರ ಆರೋಗ್ಯ ಕೆಟ್ಟಿರಲಿಲ್ಲ. ಮುಖ್ಯವಾಗಿ ಸಾಂಪ್ರದಾಯಿಕ ಕೃಷಿಕನು ನೆಮ್ಮದಿಯನ್ನು ಹೊಂದಿದ್ದ. ಶ್ರಮಜೀವಿಯಾಗಿದ್ದ. ಇಂದಿನ ಯಂತ್ರಗಳಾಗಲಿ ಆಧುನಿಕ ತಂತ್ರವಾಗಲಿ ಆರ್ಥಿಕ ಹೊರೆಯಾಗಿದ್ದು ಇವೆಲ್ಲ ಮಾಡುವ ಕೆಲಸವನ್ನು ಹಿಂದಿನ ರೈತರು ಸಹಜವಾಗಿ ಮಾಡಬಲ್ಲವರಾಗಿದ್ದರು.

ಕೃಷಿಯಲ್ಲಿ ಮುಖ್ಯವಾಗಿ ; ಬಂಡವಾಳ, ರಾಸಾಯನಿಕ ಪರಿಕರಗಳು, ಹೈಬ್ರಿಡ್ ಬೀಜಗಳು, ವಿಷಕಾರಿ ಔಷಧಿಗಳು, ಟ್ರ್ಯಾಕ್ಟರ್ ಮತ್ತು ಒಕ್ಕುವ ಯಂತ್ರಗಳ ಸಹಾಯವಿಲ್ಲದೆ ಕೃಷಿ ಮಾಡಿದ ರೈತರು ನಮ್ಮ ಮುಂದೆ ಇದ್ದಾರೆ. ಇದೆಲ್ಲವನ್ನು ವಿವರಿಸುವುದರ ಉದ್ದೇಶ ಮತ್ತೆ ನಾವು ಸಾಂಪ್ರದಾಯಿಕ ಕೃಷಿಯತ್ತ ಹೊರಳುವುದು ರೈತರಿಗೆ ಅನಿವಾರ್ಯವಾಗಿದೆ ಎಂಬುದೇ ಆಗಿದೆ. ಯಾಕೆ? ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಆಧುನಿಕ ಕೃಷಿಯ ದುಷ್ಪರಿಣಾಮಗಳಾವುವು? ಸಾಂಪ್ರದಾಯಿಕ ವಿಧಾನಗಳು ಎಷ್ಟರಮಟ್ಟಿಗೆ ಪರಿಸರ ಸ್ನೇಹಿಯಾಗಿವೆ ಮತ್ತು ಲಾಭದಾಯಕ ವಿಧಾನಗಳಾಗಿವೆ ಎಂಬುದನ್ನು ಮನಗಾಣ ಬೇಕಾಗಿದೆ.

ಕಲಿತದ್ದೆಲ್ಲಾ ಮರೆಯಬೇಕು :

ಒಮ್ಮೆ ಸ್ವಾಮಿಗಳೊಬ್ಬರು ಪ್ರವಚನ ಮಾಡುವಾಗ 'ನೀವು ಕಲಿತದ್ದೆಲ್ಲಾ ಮರೆಯಬೇಕು' ಎಂದು ಹೇಳುತ್ತಿದ್ದರು. ಆಗ ನಾನು ಪದವೀಧರ. ಕಲಿಯುವುದರಲ್ಲೇ ಆಯುಷ್ಯದ ಕಾಲು ಭಾಗವನ್ನು ವ್ಯರ್ಥ ಕಳೆದವನು. ವ್ಯರ್ಥ ಯಾಕೆಂದರೆ ನನ್ನ ಜೀವನದಲ್ಲಿ ಕಲಿತ ವಿದ್ಯೆ ಜೀವನೋಪಾಯಕ್ಕೆ ಮಾರ್ಗ ಕಲ್ಪಿಸಲು ಕಡಿಮೆ ಒತ್ತು ಕೊಟ್ಟು ಕೇವಲ ಕಾರಕೂನಿಕೆ ಮಾಡುವ ಅರ್ಹತೆ ಪಡೆಯಲು ಪ್ರಮಾಣಪತ್ರ ಪಡೆಯಲು ಇಷ್ಟು ಹಣ, ಇಷ್ಟು ಶ್ರಮ ವ್ಯಯಿಸಬೇಕಾಯಿತಲ್ಲವೆ? ಅಷ್ಟೇ ಅಲ್ಲ ನಿರುದ್ಯೋಗಿ ಎಂಬವರ ಯಾದಿಯಲ್ಲಿ ನಾನೂ ಸೇರಲು ಇಂಥ ಕಸರತ್ತು ಮಾಡಬೇಕೆ? ಎಂಬ ಪ್ರಶ್ನೆಗಳು ಕಾಡಿದ್ದರಿಂದ ನನಗೆ ವ್ಯರ್ಥ ಕಾಲಹರಣವಾಯಿತೆಂಬ ಕೊರಗು. 'ಹೆಂಗ ಮರಿಯೂದರೀ?' ಕಲಿತಂತಹ ಒಂದು ಚಹದ ಚಟ, ಬೀಡಿ, ಸಿಗರೇಟ್, ಶೆರೆ, ಸೇಂದಿ ಕುಡಿಯುವ ಚಟ ಮರೆತು ಬಿಡಲಾಗುವುದಿಲ್ಲ. ಅಂದಾಗ ಕಲಿತದ್ದೆಲ್ಲಾ ಮರಿಯೂದು ಅಷ್ಟು ಸರಳ ಅಲ್ಲ.

ಆಧುನಿಕ ಕೃಷಿಕನು ಆಧುನಿಕತೆಯನ್ನು ಮರೆತು ಸಾಂಪ್ರದಾಯಿಕ 'ಕಮತ' ಮಾಡಬೇಕೆಂದು ಹೇಳುವುದೂ ಅಸಾಧ್ಯ ಎನಿಸೀತು. ಆದರೆ ಇಂದಿನ ಪರಿಸ್ಥಿಯನ್ನು ರೈತರ ಸ್ಥಿತಿಯನ್ನು ಹೊಲದ ಮಣ್ಣಿನ ಸ್ವರೂಪವನ್ನು ಉಣ್ಣುವ ಊಟದಲ್ಲಿ ಬೆರೆತ ವಿಷವನ್ನು ಕುರಿತು ನಮಗೆಲ್ಲ ತಾಪಸ ಅವರು ತಿಳಿಸಿಕೊಟ್ಟಿದ್ದರಿಂದ ಅನಿವಾರ್ಯ ಎನಿಸಿತು. ಮೊದಲು ಸಾಂಪ್ರಾದಾಯಿಕ ವಿಧಾನಗಳಲ್ಲಿರುವ ವೈಜ್ಞಾನಿಕ ಅಂಶಗಳನ್ನೂ ಅವುಗಳ ಮಹತ್ವವನ್ನೂ ಅರಿತು ಅಳವಡಿಸಿಕೊಳ್ಳಬೇಕು. ನಂತರ ಭರವಸೆ ಮೂಡುತ್ತದೆ. ಭರವಸೆ ಮೂಡಿದ ನಂತರ ಸಾಂಪ್ರದಾಯಿಕ ಕೃಷಿಯನ್ನು ಅನುಸರಿಸಲು ಸಾಧ್ಯವಾಗುತ್ತದೆ. ಆಧುನಿಕ ಕೃಷಿ ಕೆಟ್ಟದ್ದು ಎಂದ ಕೂಡಲೇ ಬಿಟ್ಟು ಬಿಡಲು ಆಗದು. ಆಧುನಿಕ ಕೃಷಿ ಪರಿಕರಗಳಿಗೆ ಪರ್ಯಾಯವಾದ ಪರಿಕರಗಳ ಹಾಗೂ ಪರ್ಯಾಯವಾದ ವಿಧಾನಗಳನ್ನು ಪರಿಚಯ ಮಾಡಿಕೊಳ್ಳಬೇಕು. ಇಂತಹ ಸಾಂಪ್ರದಾಯಿಕ ವಿಧಾನಗಳ ಕುರಿತು ಅವರ ಉಪನ್ಯಾಸ ಅವಲೋಕನ ಮಾಡಲು ಹಚ್ಚಿತು.

೧೫ ವರ್ಷಗಳ ಹಿಂದೆ ನಮಗೆ ಅವರು ತಿಳಿಸಿದ ಸಂಗತಿಯನ್ನು ಸರಕಾರ ಈಗ ಗಮನಿಸಿದೆ. ಕೃಷಿ ಇಲಾಖೆಗೆ ಸಾವಯವ ಕೃಷಿಯ ಮಹತ್ವದ ಅರಿವು ಮೂಡಿದೆ. ಕೃಷಿ ವಿಜ್ಞಾನಿಗಳು, ಸಂಶೋಧಕರು ಮಾತ್ರ ಇನ್ನೂ ಆಧುನಿಕ ಕೃಷಿಯನ್ನೇ ಬಡಬಡಿಸುತ್ತಿದ್ದಾರೆ. ಕೃಷಿ ವಿಶ್ವವಿದ್ಯಾಲಯಗಳು ಸಹಿತ ಆಧುನಿಕ ಕೃಷಿಯನ್ನೇ ವಿದ್ಯಾರ್ಥಿಗಳಿಗೆ ಗಿಳಿಪಾಠ ಮಾಡಿಸುತ್ತಿದ್ದಾರೆ. ಏನೇ ಇರಲಿ ರೈತರಲ್ಲಿ ಆಧುನಿಕ ಕೃಷಿ ದುಷ್ಪರಿಣಾಮದ ಅರಿವು ಮೂಡಿದೆ. ಇದೊಂದು ಮಹತ್ವದ ಸಂಗತಿಯಾಗಿದೆ.

*

ವಚನ ಸಾಹಿತ್ಯದಲ್ಲಿ ಒಕ್ಕಲುತನದ ಪರಿಭಾಷೆ

'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಮೇಲು' - ಸರ್ವಜ್ಞ ಕವಿ ಎಲ್ಲ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಮೇಲು ಎಂದು ಹೇಳಿದಂತೆ ಒಕ್ಕಲುತನದ ವೃತ್ತಿ ಎಲ್ಲ ವೃತ್ತಿಗಳಲ್ಲಿ ಶ್ರೇಷ್ಠ ವೃತ್ತಿ ಎನಿಸಿದೆ. ನಮ್ಮ ದೇಶದ ಬಹುಸಂಖ್ಯಾತ ಜನರು ಕೃಷಿಯನ್ನೇ ಮುಖ್ಯ ವೃತ್ತಿಯನ್ನಾಗಿ ಅನುಸರಿಸಿದ್ದಾರೆ. ಹೀಗಾಗಿ ಕೃಷಿಗೆ ಹೆಚ್ಚಿನ ಪ್ರಾಧಾನ್ಯತೆ ದೊರಕಿದೆ. ಇನ್ನುಳಿದ ಉದ್ದಿಮೆಗಳಿಗಿಂತ ಕೃಷಿರಂಗವು ಹೆಚ್ಚಿನ ಸಂಖ್ಯೆಯ ಜನರಿಗೆ ಉದ್ಯೋಗ ಒದಗಿಸಬಲ್ಲದ್ದಾಗಿದೆ. ಉದ್ದಿಮೆಗಳಿಗೆಲ್ಲ ಕಚ್ಚಾಮಾಲು ಪೂರೈಸುವುದು ಕೃಷಿರಂಗವೇ ಆಗಿದೆ. ಅಂತೆಯೇ 'ಮೇಟಿಯಿಂದಲೆ ರಾಟಿ ನಡೆವುದು' ಎಂದು ಸರ್ವಜ್ಞ ಕವಿ ಒಕ್ಕಲುತನದ ಮಹತ್ವವನ್ನು ಕೊಂಡಾಡಿದ್ದಾನೆ. ಒಕ್ಕಲಿಗನೊಕ್ಕಿದಾಗಲೇ ಜಗತ್ತಿಗೆಲ್ಲ ಅನ್ನ. ಅಂತೆಯೇ ರೈತನನ್ನು 'ಅನ್ನದಾತ' ಎಂದು ಕರೆಯುತ್ತಾರೆ. 'ಒಕ್ಕಲಿಗನೊಕ್ಕದಿರೆ ಬಿಕ್ಕುವದು ಜಗವೆಲ್ಲ'. ಸರ್ವಜ್ಞ ಕವಿ ತನ್ನ ಮತ್ತೊಂದು ವಚನದಲ್ಲಿ ರೈತನು ಅನ್ನದಾತ ಎಂಬ ಮಾತನ್ನು ಪುಷ್ಟೀಕರಿಸಿದ್ದಾನೆ.

ಒಕ್ಕಲುತನವು ಜೀವನ ವಿಧಾನ ಆಗಿದೆ. ಒಕ್ಕಲುತನ ಮಾಡುವೆದೆಂದರೆ ಅದು ಉದ್ಯೋಗ ಅಲ್ಲ, ಅದೊಂದು ವೃತ್ತಿ ಅಲ್ಲ, ಅದೊಂದು ಪವಿತ್ರ ಕಾಯಕ ಆಗಿದೆ. ಒಕ್ಕಲುತನ ಒಂದು ಸಂಸ್ಕೃತಿ ಆಗಿದೆ. ಒಬ್ಬ ಸೃಜನಶೀಲ ವ್ಯಕ್ತಿಗಿಂತ ಹೊಲದಲ್ಲಿ ಗಳೆ ಹೊಡೆಯುವ ರೈತ ಶ್ರೇಷ್ಠ ಎನಿಸಿದ್ದಾನೆ. ಗುಡ್ಡ ಗವಿಗಳಲ್ಲಿ ಗಡ್ಡ ಬಿಟ್ಟು ಜಪತಪ ಮತ್ತು ಅನುಷ್ಠಾನ ಮಾಡುವ ಯೋಗಿಗಿಂತ ಶ್ರೇಷ್ಠ ಯೋಗಿ ರೈತನಾಗಿದ್ದಾನೆ. ರಾಷ್ಟ್ರಕವಿ ಕುವೆಂಪು ಅವರು ರೈತನನ್ನು 'ನೇಗಿಲಯೋಗಿ' ಎಂದು ಗೌರವದಿಂದ ಕರೆದಿದ್ದಾರೆ. 'ನೇಗಿಲ ಕುಳದೊಳಗಡಗಿದೆ ಕರ್ಮ, ನೇಗಿಲ ಮೇಲೆ ನಿಂತಿದೆ ಧರ್ಮ' ಎಂದೂ ಕುವೆಂಪು ಅವರು ರೈತನ ನೇಗಿಲು ಕರ್ಮ-ಧರ್ಮಗಳ ಸಂಕೇತ ಎಂದು ಸಾರಿದ್ದಾರೆ. ರೈತರು ಚಳಿ, ಮಳೆ, ಬಿಸಿಲು, ಗಾಳಿ ಎಲ್ಲವನ್ನು ಸಹಿಸಿ ಕಷ್ಟಪಟ್ಟು ದುಡಿಯುತ್ತಾರೆ. ಅಂತೆಯೇ ರೈತರು ಆರೋಗ್ಯವಂತರೂ, ದೃಢಕಾಯರೂ ಆಗಿರುತ್ತಾರೆ. ಉದ್ಯೋಗ ಮಾಡುವಾಗ ಅವನ ಮೈಯಿಂದ ಬೀಳುವ ಬೆವರ ಹನಿ ಮುತ್ತಾಗುತ್ತದೆ. ಅದು ಬೆವರಿನ ಬೆಲೆ. ವ್ಯಕ್ತಿಯ ಆರೋಗ್ಯಕ್ಕೆ ಹಾಗೂ ವಿಕಾಸಕ್ಕೂ ಕಾರಣವಾದ ಒಕ್ಕಲುತನವು ಸಮಾಜದ ಆರೋಗ್ಯಕ್ಕೆ ಹಾಗೂ ವಿಕಾಸಕ್ಕೂ ಕಾರಣವಾಗಿದೆ.

ಹಳ್ಳಿಯ ನೆಲ ಸಾಂಸ್ಕೃತಿಕ ಹಾಗೂ ಜಾನಪದ ಸಂಪತ್ತಿನಿಂದ ಸಮೃದ್ಧವಾಗಿದೆ. ಪ್ರಕೃತಿ ಮಾನವ ಕುಲಕೋಟಿಗೆ ಕೊಟ್ಟಿರುವ ದೇಣಿಗೆಯಾಗಿದೆ. ಈ ದೇಣಿಗೆಯನ್ನು ಉಪೇಕ್ಷೆ ಮಾಡದೆ, ಅನುಚಿತವಾಗಿ ಬಳಸದೆ, ಗೌರವಾದರಗಳಿಂದ ಕಾಣುವ ಹಾಗೂ ಬಳಕೆ ಮಾಡುವ ಪ್ರಕ್ರಿಯೆ ರೈತರ ನಿತ್ಯಜೀವನದಲ್ಲಿ ನಡೆಯುತ್ತಿದೆ. ಇದನ್ನು ರೈತರ ಆರಾಧನೆ, ಹಬ್ಬ, ಹುಣ್ಣಿಮೆ ಮತ್ತು ಆಚರಣೆಗಳಲ್ಲಿ, ಉತ್ಸವಗಳಲ್ಲಿ ಇಂದಿಗೂ ಕಾಣಬಹುದಾಗಿದೆ. ರೈತರದು ಪ್ರಕೃತಿಯೊಡನೆ ಸಾಮರಸ್ಯದ ಬದುಕಾಗಿದೆ. ಈ ಭೂಮಿ, ಗಾಳಿ, ಮಳೆ, ಬೆಳೆ, ಎತ್ತು, ನಿಸರ್ಗ ಎಲ್ಲವೂ ದೇವರ ಸೃಷ್ಟಿಯಾಗಿದೆ. ಇದೆಲ್ಲವನ್ನು ಮಾನವನ ಉಪಜೀವನಕ್ಕೆ ಹಾಗೂ ಎಂಬತ್ನಾಲ್ಕು ಲಕ್ಷ ಜೀವರಾಶಿಗಳಿಗೆ ಬದುಕಲು ದಾನವಾಗಿ ದೇಣಿಗೆಯಾಗಿ ದೇವರು ಕೊಟ್ಟಿದ್ದಾನೆ. ಆದರೆ ಆ ದೇವರು ಕೊಟ್ಟ ದಾನವನುಂಡು ಅನ್ಯರ ಹೊಗಳುವವರು ನಾಯಿಯ ಕುನ್ನಿಯಂತಹವರೆಂದು ಶರಣ ಜೇಡರ ದಾಸಿಮಯ್ಯ ತನ್ನ ವಚನದಲ್ಲಿ ಹೀಗೆ ಹೇಳಿದ್ದಾನೆ.

'ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ,
ಸುಳಿದು ಸೂಸುವ ಗಾಳಿ ನಿಮ್ಮ ದಾನ,
ಎತ್ತು ನಿಮ್ಮ ದಾನ, ಬಿತ್ತು ನಿಮ್ಮ ದಾನ,
ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ,
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳೇನೆಂಬೆ ರಾನಾಥಾ.'

ನಮ್ಮ ಹಳ್ಳಿಗಳಲ್ಲಿ ರೈತ ಮಹಿಳೆಯರು ತಮ್ಮ ದಿನಚರಿಯನ್ನು ಭೂಮಿತಾಯಿಯನ್ನು ನೆನೆದು ಪ್ರಾರ್ಥಿಸುತ್ತ ಪ್ರಾರಂಭಿಸುತ್ತಾರೆ. 'ಬೆಳಗಾಗುತ ಎದ್ದು ಯಾರ್‍ಯಾರ ನೆನೆಯಲಿ, ಎಳ್ಳು ಜೀರಿಗೆ ಬೆಳೆವಂಥ ಭೂಮಿತಾಯಿಯ ಎದ್ದೊಂದುಗಳಿಗೆ ನೆನೆದೇನ'. ಎಲ್ಲ ದೇವತೆಗಳಿಗಿಂತ ಭೂಮಿತಾಯಿ ಶ್ರೇಷ್ಠ ದೇವತೆ ಆಗಿದ್ದಾಳೆ. ಅಂತೆಯೇ ಆ ತಾಯಿಯನ್ನು ಜನಪದ ಕವಿಗಳು ಪ್ರಾರ್ಥಿಸಿದ್ದಾರೆ. ಇನ್ನು ರೈತರು ಕೋಳಿ ಕೂಗುವ ಮೊದಲೇ ಎದ್ದು ಎತ್ತುಗಳ ಮುಖ ನೋಡುತ್ತಾರೆ. ಎತ್ತುಗಳಿಗೆ ಹೊಟ್ಟು ಮೇವು ಹಾಕಿ ಹೊತ್ತೇರುವ ಮೊದಲೇ ಹೊಲಕ್ಕೆ ಹೋಗಿ ಹೊಲವನ್ನು ನೋಡಿ ಬರುತ್ತಾರೆ.

'ಉತ್ತೊಮ್ಮೆ ಹರಗದಲೆ। ಬಿತ್ತೊಮ್ಮೆ ನೋಡದಲೇ।
ಹೊತ್ತೇರಿ ಹೊಲಕ್ಕೆ ಹೋದರೆ ಅವನ।
ನೆತ್ತರ ಸುಡುವ ಸರ್ವಜ್ಞ॥'

ಎಂದು ಸರ್ವಜ್ಞ ಕವಿ ಹೊತ್ತೇರಿ ಹೊಲಕ್ಕೆ ಹೋದವ ರೈತನೇ ಅಲ್ಲ ಎಂದಿದ್ದಾನೆ.

ಉತ್ಪಾದನೆಗೆ ಸಂಬಂಧಿಸಿದ ಉಪಜೀವನಕ್ಕೆ ಯಾವುದೇ ವೃತ್ತಿ, ವ್ಯಾಪಾರ, ವ್ಯವಹಾರ ಮತ್ತು ಉದ್ಯೋಗ ಮಾಡುವ ಸ್ವಾತಂತ್ರ್ಯ ವ್ಯಕ್ತಿಗಿದ್ದೇ ಇದೆ. ಅದು ಮನುಷ್ಯನ

ಹಕ್ಕು ಆಗಿದೆ. ಉದ್ಯೋಗವು ಪುರುಷ ಲಕ್ಷಣ ಎಂಬ ಮಾತಿನಂತೆ ಕಾಯಕವು ವಚನಕಾರರ ನ್ಯಾಯ ಪರಿಕಲ್ಪನೆಯಾಗಿದೆ. 'ಅಸಿಮಸಿ ಕೃಷಿ ಕೃತ್ಯಗಳು ಕಾಯಕ ಎನಿಸಿವೆ'. ಅವು ಕೇವಲ ಜೀವನೋಪಾಯಕ್ಕಾಗಿ ಮಾಡುವ ವೃತ್ತಿಗಳಲ್ಲ. ಬದಲಾಗಿ ಕಟ್ಟುನಿಟ್ಟಿನಿಂದ, ನಿಷ್ಠೆಯಿಂದ, ಶ್ರದ್ಧೆಯಿಂದ ಹಾಗೂ ಭಕ್ತಿಯಿಂದ ಮಾಡುವ ಪವಿತ್ರ ಕಾಯಕಗಳಾಗಿವೆ. ಶರಣರು ಎಲ್ಲ ಕಾಯಕಗಳು ಶ್ರೇಷ್ಠ ಹಾಗೂ ಪವಿತ್ರ ಆಗಿವೆ ಹಾಗೂ ಕಾಯಕಗಳಲ್ಲಿ ಮೇಲು-ಕೀಳು ಇಲ್ಲ. ಕಸಗುಡಿಸುವವನ ಕೆಲಸದಷ್ಟೇ ಶ್ರೇಷ್ಠ ವೃತ್ತಿ ಮಂತ್ರಿಯ ಕೆಲಸವೂ ಆಗಿದೆ ಎಂದು ತಿಳಿಸಿದ್ದಾರೆ. ಉಪಜೀವನಕ್ಕಾಗಿ ಮಾಡುವ ಉದ್ಯೋಗ ವೃತ್ತಿ ಎನಿಸಿದರೆ ನಿಸ್ವಾರ್ಥ ಭಾವನೆಯಿಂದ ನಿಷ್ಠೆಯಿಂದ ಉದ್ಯೋಗದಲ್ಲಿ ತೊಡಗುವುದು 'ಕಾಯಕ' ಎನಿಸುತ್ತದೆ. ಶರಣರ ದೃಷ್ಟಿಯಲ್ಲಿ ಕಾಯಕ ಯೋಗವಾಗಿರುವಂತೆ ಕಾಯಕದ ಪರಿಕರಗಳು ಯೋಗ ಸಾಧನೆಗೆ ಪೂರಕವಾದ, ಪ್ರೇರಕವಾದ ಸಾಧನ ಎನಿಸಿವೆ.

ಒಕ್ಕಲುತನಕ್ಕೆ ಮುಖ್ಯವಾಗಿ ಎತ್ತುಗಳು ಬೇಕು. ಈ ಎತ್ತು ಬಸವಣ್ಣನೇ ಆಗಿದ್ದಾನೆ. ಎತ್ತನ್ನು ಎತ್ತು ಎಂದು ಅನ್ನಲಾಗದು. ಬಸವಣ್ಣ ಬೇರೆ ಅಲ್ಲ, ಎತ್ತು ಬೇರೆ ಅಲ್ಲ; ಶಿವ ಬೇರೆ ಅಲ್ಲ. ಎತ್ತು ಶಿವನ ವಾಹನ ಆಗಿರುವಂತೆ, ಬಸವಣ್ಣ ನಂದಿಯ ಅವತಾರ ಆಗಿದ್ದಾನೆ. ಬಸವಣ್ಣನು ನಂದಿಯ ಅವತಾರ ಎಂದೂ 'ದ್ವಿತೀಯ ಶಂಭು' ಎಂದೂ ಪುರಾಣಗಳಲ್ಲಿ ಹಾಗೂ ಜನಪದ ಕಾವ್ಯಗಳಲ್ಲಿ ಕವಿಗಳು ಬಣ್ಣಿಸಿದ್ದಾರೆ. ಹಾಗೆಂದೇ ಒಕ್ಕಲಿಗರು ಬಸವಣ್ಣನನ್ನು ಎತ್ತುಗಳ ರೂಪದಲ್ಲಿ ಪೂಜಿಸುತ್ತಾರೆ. ಪ್ರತಿ ಸೋಮವಾರ 'ಬಸವಣ್ಣನ ವಾರ' ಎಂದು ಎತ್ತುಗಳನ್ನು ಮೈತೊಳೆದು ಪೂಜಿಸುತ್ತಾರೆ ಮತ್ತು ಆ ದಿವಸ ಎತ್ತುಗಳನ್ನು ಗಳೆ ಹೂಡುವುದಿಲ್ಲ. 'ಉತ್ತಿ ಬಿತ್ತುವ ಮಂತ್ರ, ಬಿತ್ತಿ ಬೆಳೆಯುವ ಮಂತ್ರ। ಸತ್ಯ ಶಿವ ಮಂತ್ರ ನಿನ್ಹೆಸರು। ಬಸವಯ್ಯ ಮರ್ತ್ಯದೊಳು ಮಂತ್ರ ಜೀವನಕೆ'. ಮಹಾತ್ಮಾ ಬಸವೇಶ್ವರರನ್ನು ಜನರು ನಂಬಿದ ಎತ್ತಿನ ರೂಪದ ಪರಿಕಲ್ಪನೆಯ ಮೂಲಕವೇ ನೆನಪಿಸಿಕೊಳ್ಳುತ್ತಾರೆ. ಅಂತೆಯೇ ಬಸವಣ್ಣನ ಹೆಸರು ಜನರಿಗೆ ಮಂತ್ರವಾಗಿದೆ. ಗಳೆ ಹೊಡೆಯುವ, ಬಿತ್ತುವ ಹಾಗೂ ಬಿತ್ತಿ ಬೆಳೆಯುವ ಮಂತ್ರ ಬಸವಣ್ಣನೇ ಆಗಿದ್ದಾನೆ.

ಎತ್ತು ಬಿತ್ತಿತ್ತು ಒಕ್ಕಲಿಗನಿಂದ ಉತ್ತಮರಿಲ್ಲೆಂದು
ಎತ್ತಾಗಿ ಬಿತ್ತಿದ ನಮ್ಮ ಬಸವಣ್ಣ
ಹೊತ್ತು ಹೊರೆದನು ಜಗವನು
ಮತ್ತೆ ಅನ್ಯದೈವವ ನೆನೆಯಲೇಕೋ
ಎತ್ತು ಬಿತ್ತಿತ್ತು ಹಾಲುಹಯನ ಬಸವಣ್ಣನಿಂದಾಯಿತ್ತು.

ಒಕ್ಕಲಿಗರಿಗಿಂತ ಉತ್ತಮರ್ಯಾರಿಲ್ಲ ಎಂದು ಎತ್ತಾಗಿ ಬಸವಣ್ಣ ರೈತರ ಹೊಲದಲ್ಲಿ ಬಿತ್ತಿದ. ಭಾರವನ್ನು ಹೊತ್ತು ಜಗತ್ತನ್ನು ಕಾಪಾಡಿದ. ಎತ್ತಿನಿಂದಲೇ ಹಾಲು ಹೈನ. ಬಸವಣ್ಣ ಏಕದೇವೋಪಾಸನೆ ಬಹಳ ಮುಖ್ಯ ಎಂದು ಪ್ರತಿಪಾದಿಸಿದ್ದಾನೆ. ಅಂತೆಯೇ ಅನ್ಯದೈವದ

ಹಂಗು ಬೇಡ. ಬಸವಣ್ಣನೇ ತಮ್ಮ ಆರಾಧ್ಯದೈವ, ಬಸವಣ್ಣ. ಮಂತ್ರಪುರುಷ ಆಗಿದ್ದಾನೆಂದು ಅವನನ್ನೇ ಒಕ್ಕಲಿಗರು ನೆನೆಯುತ್ತಾರೆ ಮತ್ತು ಪ್ರಾರ್ಥಿಸುತ್ತಾರೆ. 'ಬಸವಣ್ಣ' ಹೊಸ ಮಂತ್ರ ಎಂದು ಒಕ್ಕಲಿಗ ಜಪಿಸುವನು.

ಬಸವಣ್ಣ ನಿನ್ಹೆಸರು ದೆಸೆದೆಸೆಗೆ ಶಿವಮಂತ್ರ
ಹೊಸಮತಕ್ಕೆ ಮಂತ್ರ ನಿತ್ಯದಲಿ। ಒಕ್ಕಲಿಗ
ಹೊಸಮಂತ್ರ ಬಸವ ಜಪಿಸುವರು.

ನಾಡಿನ ಮೂಲೆ ಮೂಲೆಯಿಂದ ಜನರು ಉತ್ಸಾಹದಿಂದ ಕಲ್ಯಾಣ ಪಟ್ಟಣದೆಡೆಗೆ ಆಕರ್ಷಿತರಾಗಿ ಬಂದು ಕೂಡಿದರು. ಸಂಘಟಿತರಾದರು. ಅನುಭವ ಮಂಟಪದಡಿ ನೆಲೆನಿಂತರು. ಪ್ರತಿಯೊಬ್ಬನೂ ತನ್ನ ಪಾಲಿನ ಕೆಲಸ ಮಾಡುತ್ತ, ಅನುಭಾವ ಗೋಷ್ಠಿಯಲ್ಲಿ ಭಾಗವಹಿಸಿ, ತಮ್ಮ ಅನುಮಾನಗಳಿಗೆ ಪರಿಹಾರ ಕಂಡುಕೊಂಡರು. ತಮ್ಮ ಜೀವನ ಪಾವನ ಮಾಡಿಕೊಂಡರು ಹಾಗೂ ಸಂತೋಷದಿಂದ ಜೀವನ ನಡೆಸಿದರು. ಈ ಕೆಳಗಿನ ತ್ರಿಪದಿಯಲ್ಲಿ ಬರುವ ಸೂಡ (ಸಿವುಡು) ಮತ್ತು ಗೂಡು ಬೆಳೆಯನ್ನು ಕೊಯ್ಲು ಮಾಡುವಾಗ ಹಿಡಿ ಹಿಡಿ ದಂಟುಗಳನ್ನು ಕೂಡಿಸಿ ಸಿವುಡು ಕಟ್ಟುತ್ತಾರೆ. ಈ ಸಿವುಡುಗಳು ಶಿವನುಡಿಯ ಸಿವುಡುಗಳು. ಅಲ್ಲಿ ಸೇರಿದ ಜನರೆಲ್ಲ ಶಿವನುಡಿಯನ್ನೇ ಆಡಬಲ್ಲವರು. ನಂತರ ಸಿವುಡುಗಳನ್ನೆಲ್ಲಾ ಒಂದೆಡೆ ಕೂಡಿ ಹಾಕಿ ಪಿರಾಮಿಡ್ ಆಕೃತಿಯಲ್ಲಿ ಗೂಡ ಕಟ್ಟುತ್ತಾರೆ. ಈ ಗೂಡು ಕಾಯಕದ ಪ್ರತಿಫಲ ಎನಿಸಿದೆ. ಆ ಪ್ರತಿಫಲ ಉಂಡು ಲೋಕ ಹಿಗ್ಗಿನಿಂದ ಬದುಕಿತ್ತು.

ಕೂಡಿದರು ಹುರುಪಿನಲಿ ನಾಡ ಬಲ್ಲಿದರೆಲ್ಲ
ಸೂಡ ಕಟ್ಟಿದರು ಶಿವನುಡಿಯ। ಕಾಯಕದ
ಗೂಡಾತು ಲೋಕ ಜನ ಹಿಗ್ಗಿ॥

'ಸುಗ್ಗಿಯಾ ಕಣ ಕೇಳೇ ಸಗ್ಗವದು। ರೈತನಿಗೆ ಹಿಗ್ಗು ಹಾಡುದಕೆ'. ತೆನೆಗಳನ್ನು ಕೊಯ್ದು ಕಣದಲ್ಲಿ ಹರವುತ್ತಾರೆ. ಕಗ್ಗಾಯಿ ಪಕ್ವವಾಗಿ ಹಣ್ಣಾಗಿರುವುದರ ಸಂಕೇತವಿದು. ರೈತರು ಗಳೆ ಹೊಡೆಯುವುದರಿಂದ ಹಿಡಿದು ಒಕ್ಕಿ ರಾಶಿಯನ್ನು ಬಂಡಿಯಲ್ಲಿ ಹೇರಿಕೊಂಡು ಹಗೇವುಗಳಲ್ಲಿ ತುಂಬಿಸುವ ತನಕ ಬಸವಣ್ಣನನ್ನು ಹಿಗ್ಗಿನಿಂದ ಹಾಡಿ ಧನ್ಯತೆ ಪಡೆಯುತ್ತಾರೆ. ಅದನ್ನೇ ಜನಪದ ಕವಿ ಹೀಗೆ ಬಣ್ಣಿಸಿದ್ದಾನೆ.

ಸುಗ್ಗಿಯಲಿ ಒಕ್ಕಲಿಗ ಉಗ್ಗಡಿಸಿ ಹಾಡುವನು
ಕಗ್ಗಾಯಿ ತುಂಬಿ ಹಣ್ಣಾಗಿ। ಕಣ ತುಂಬಿ
ಹಿಗ್ಗುವದು ಲೋಕ ರಸ ಕುಡಿದು॥
ಬಸವ ಹಲಿಹಲಿ ಹಂತಿ ಬಸವ ಹಲಿಹಲಿ ರಾಶಿ
ಬಸವ ಹುಲುಹುಲುಸು ಕಣಕಣಕೆ। ಒಕ್ಕಲಿಗ
ಬಸವ ಹೊಲಗೆಲಸ ಕಡೆತನಕ॥

ಒಕ್ಕಲುತನದಲ್ಲಿ ಬಳಕೆಯಾಗುವ ಉತ್ತು, ಬಿತ್ತು, ಎತ್ತು (ಬಸವಣ್ಣ), ಕಗ್ಗಾಯಿ, ಹಣ್ಣು, ಕಣ, ರಾಶಿ, ಹುಲುಸು, ಹಂತಿ, ಕಣ, ಒಕ್ಕಲಿಗ, ಸೂಡ, ಗೂಡು-ಮೊದಲಾದ ಶಬ್ದಗಳು ಜನಪದ ಕವಿಯ ಈ ತ್ರಿಪದಿಗಳಲ್ಲಿ ಪ್ರಸ್ತಾಪಗೊಂಡಿರುವವು. ಒಕ್ಕಲಿಗರ ದಿನನಿತ್ಯದ ಬದುಕಿನಲ್ಲಿ ಬಳಸುತ್ತಿರುವ ಆಡುಮಾತುಗಳನ್ನು ಜನರ ನಾಲಿಗೆ ಮೇಲೆ ನಲಿದಾಡುವಂತೆ ಜನಪದ ಕವಿಗಳು ಸರಳ ಭಾಷೆಯಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ. ಇಲ್ಲಿ ಬರುವ ಶಬ್ದಗಳು ಒಕ್ಕಲುತನದ ಪರಿಭಾಷೆಗಳೆಂದು ಬೇರೆ ಹೇಳಬೇಕಾಗಿಲ್ಲ.

ಬಸವಣ್ಣ ಕೇವಲ ಶರಣ ಸಮೂಹಕ್ಕೆ ನಾಯಕನಾಗಿರಲಿಲ್ಲ. ಜನರಿಗೆ ಕಾಯಕವನ್ನು ಕಲಿಸುವುದಕ್ಕೆ ನಾಯಕನಾಗಿದ್ದ. ಅದರಂತೆ ಹೊಸಮತದ ಹುಟ್ಟಿಗೆ ಕಾರಣನಾಗಿದ್ದಾನೆ ಮತ್ತು ಒಡೆಯನೂ ಆಗಿದ್ದಾನೆ. ಜೀವನಕ್ಕೆ ಸಕಲ ಜೀವರಾಶಿಗಳ ಲೇಸಿಗೆ ಮುನ್ನುಡಿ ಬರೆದ 'ರಾಯ'ನಾಗಿದ್ದಾನೆ. ಕಾಯಕವು ಶರಣರ ಉಸಿರಾಗಿತ್ತು. ಕಾಯಕದಲ್ಲಿ ಅವರೆಲ್ಲ ತೊಡಗಿದ್ದರಿಂದ ನಾಡು ಹಸಿರಾಯಿತು. ಹಸಿರಿನಿಂದ ಲೋಕದಲ್ಲಿ ಸಿರಿ ಸಂಪತ್ತಾಗಿ ನಾಡು ಸಮೃದ್ಧವಾಯಿತು. ಈ ಕೃಷಿ ಕೆಲಸ ಕಾರ್ಯದಲ್ಲಿ ತೊಡಗುವುದೆಂದರೆ ಶಾರೀರಿಕ ಶ್ರಮ ಆಗುತ್ತದೆ ಹಾಗೂ ಮನಸ್ಸಿಗೆ ಆಯಾಸವಾಗುತ್ತದೆ. ತನುಮನ ಬಳಲಿಸದೆ ಕೃಷಿ ಕೃತ್ಯ ಅಸಾಧ್ಯ. ಅದನ್ನೇ ಬಸವಣ್ಣ ಕೃಷಿ ಕೃತ್ಯ ಹಾಗೂ ಯಾವುದೇ ಕಾಯಕ ಮಾಡಿ ತನ್ನ ಉಪಜೀವನಕ್ಕೆ ಬೇಕಾದಷ್ಟು ಪಡೆದು ಉಳಿದದ್ದನ್ನು ದಾಸೋಹಕ್ಕೆ, ಜಂಗಮಕ್ಕೆ (ಸಮಾಜ ಸೇವೆಗೆ) ಅರ್ಪಿಸಬೇಕು. ಅಂತಹವನು ಪರಮ ಸದ್ಭಕ್ತ. ಅಂತಹವನ ಪಾದವ ತೋರಿಸು ಎಂದು ಕೇಳಿಕೊಂಡಿದ್ದಾನೆ ಈ ವಚನದಲ್ಲಿ-

ಕೃಷ್ಷಿ ಕೃತ್ಯ ಕಾಯಕದಿಂದಾದಡೇನು
ತನುಮನ ಬಳಲಿಸಿ ತಂದು ದಾಸೋಹವ ಮಾಡುವ
ಪರಮ ಸದ್ಭಕ್ತನ ಪಾದವ ತೋರಯ್ಯಾ ಎನಗೆ.
ಅದೆಂತೆನೆ, ಆತನ ತನುಶುದ್ಧ, ಆತನ ಮನಶುದ್ಧ
ಆತನ ನಡೆ ಶುದ್ಧ, ನುಡಿಯೆಲ್ಲವು ಪಾವನವು.
ಆತನಿಗೆ ಉಪದೇಶ ಮಾಡಿದಾತನೇ ಪರಮ ಸದ್ಗುರು
..........ಕೂಡಲಸಂಗಮದೇವಾ.

ಕೃಷಿ ಕೃತ್ಯ ಕಾಯಕದಲ್ಲಿ ತೊಡಗಿರುವವನ ಶರೀರವು ಆತನ ಮನವು ಪರಿಶುದ್ಧ. ಅವನ ಮಾತು ಕೃತಿ ಎಲ್ಲವೂ ಶುದ್ಧ. ಅಂತಹ ವ್ಯಕ್ತಿಗೆ ಉಪದೇಶ ಮಾಡಿದ ಗುರುವು ಶ್ರೇಷ್ಠ ಸದ್ಗುರು ಎನಿಸುತ್ತಾನೆ. ಕಾಯಕಕಷ್ಟಕ್ಕೆ ಹೇವರಿಸುವ ಇಂದಿನ ಜನರು ಶರಣರ ದೃಷ್ಟಿಯಲ್ಲಿ ಯಾವ ಹೊಗಳಿಕೆಗೂ ಅರ್ಹರಲ್ಲ. ಒಕ್ಕಲಿಗರ ಶ್ರಮವನ್ನು ಗೌರವಿಸುವದರ ಮೂಲಕ ಕೃಷಿಯು ಒಕ್ಕಲಿಗರ ಲೌಕಿಕ ಬದುಕಿಗೆ ನೆಮ್ಮದಿ ತಂದುಕೊಡುವುದಲ್ಲದೆ ಆಧ್ಯಾತ್ಮಿಕ ಮುನ್ನಡೆಗೆ ಕಾರಣವಾದ ಬಗೆಯನ್ನು ಶರಣರು ತಮ್ಮ ವಚನದಲ್ಲಿ ಬಿಂಬಿಸಿದ್ದಾನೆ.

‘ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದಡೂ ಮರೆಯಬೇಕು
ಲಿಂಗಪೂಜೆಯಾದರೂ ಮರೆಯಬೇಕು.
ಜಂಗಮ ಮುಂದೆ ನಿಂದಿದ್ದರೂ ಹಂಗು ಹರಿಯಬೇಕು.
ಕಾಯಕವೇ ಕೈಲಾಸವಾದ ಕಾರಣ ಕಾಯಕದೊಳಗು
ಅಮರೇಶ್ವರ ಲಿಂಗವಾಯಿತ್ತಾದರೂ...’

ಆಯ್ದಕ್ಕಿ ಮಾರಯ್ಯ ತನ್ನ ಈ ವಚನದಲ್ಲಿ ಕಾಯಕನಿರತನಾದ ವ್ಯಕ್ತಿಗೆ ಗುರು, ಲಿಂಗ, ಜಂಗಮರು ಮಹತ್ವದವರಲ್ಲ. ಅವರು ಮುಂದೆ ನಿಂತರೂ ಅವರ ಪೂಜೆ, ದರ್ಶನ ಹಾಗೂ ಹಂಗು ಹರಿದು ನಿಷ್ಠೆಯಿಂದ, ಚಿತ್ತಶುದ್ಧಿಯಿಂದ ಕಾಯಕದಲ್ಲಿ ತೊಡಗಬೇಕು. ಅದು ಕೃಷಿ ಒಂದೇ ಅಲ್ಲ, ಯಾವುದೇ ಕಾಯಕ, ಅದರಲ್ಲೇ ಕೈಲಾಸವಿದೆ. ಕೃಷಿಯನ್ನು ಮಾಡಿದರೂ ಮನಸ್ಸುಗೊಟ್ಟು ಮಾಡಬೇಕು. ಹಸನು ಮನಸ್ಸಿನಿಂದ ಹೊಲದಲ್ಲಿ ದುಡಿಯಬೇಕು. ದುಡಿಮೆಯಲ್ಲಿ ದೇವರಿದ್ದಾನೆ. ಕಾಯಕದಲ್ಲಿ ದೇವರಷ್ಟೇ ಅಲ್ಲ, ಕೈಲಾಸವನ್ನು ಕಾಣಬಹುದು. ಕೈಲಾಸ, ದೇವರು ಬೇರೆಡೆ ಇಲ್ಲ. ಕೈಲಾಸ ಬೇರೆ ಲೋಕ ಅಲ್ಲ. ಅವೆಲ್ಲ ಕೃಷಿಯನ್ನು ಮಾಡುವುದರಲ್ಲಿ ಕಾಣುತ್ತವೆ. ಚಿತ್ತಶುದ್ಧಿ ಬಹಳ ಮುಖ್ಯ. ದುಡಿಮೆಯೇ ದುಡ್ಡಿನ ತಾಯಿ ಎಂಬುದನ್ನು ಆಯ್ದಕ್ಕಿ ಲಕ್ಕಮ್ಮ ತನ್ನ ವಚನದಲ್ಲಿ ಸ್ಪಷ್ಟಪಡಿಸಿದ್ದು ಹೀಗೆ. ‘ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್ಭಕ್ತರಿಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿರ್ಪಳು.’

ಈ ಸೃಷ್ಟಿಯೆಲ್ಲವೂ ಬಯಲಿನ ಬೆಳೆಯಾಗಿದೆ. ‘ಬಯಲೆಂಬ ಒಕ್ಕಲಿಗನು ಬಯಲೆಂಬ ಭೂಮಿಯಲ್ಲಿ, ಬಯಲೆಂಬ ಬೀಜವನ್ನು ಬಿತ್ತಿ, ಬಯಲಿನ ಬೆಳೆಯಾದ ಈ ಸಚರಾಚರವನ್ನೆಲ್ಲ ತಲೆದೋರಿಸಿ ಮತ್ತೆ ಅದು ಬಯಲಾಗಿ ಬಯಲಿನಲ್ಲಿಯೇ ಸೇರಿಕೊಳ್ಳುವ’ ಪರಿಯನ್ನು ಅಲ್ಲಮಪ್ರಭು ತನ್ನ ವಚನದಲ್ಲಿ ಚೆನ್ನಾಗಿ ವಿವರಿಸಿದ್ದಾನೆ. ಬಯಲು ಸೃಷ್ಟಿಯ ರಚನೆಯ ಸ್ಥಿತಿ ಹಾಗೂ ಲಯಗಳಲ್ಲಿ ಹೇಗೆ ಮಹತ್ವದ ಪಾತ್ರವಾಗುವುದೋ ಅದರಂತೆ ಒಕ್ಕಲಿಗನು ಭೂಮಿಯಲ್ಲಿ ಬೀಜ ಬಿತ್ತಿ, ಬೆಳೆದು ಅದನ್ನು ಕೊಯ್ದು ಒಕ್ಕುವ ಪ್ರಕ್ರಿಯೆಯನ್ನು ಈ ವಚನದಲ್ಲಿ ಚಿತ್ರಿಸಿದ್ದಾನೆ. ಅಲ್ಲಮಪ್ರಭು ತನ್ನ ಇನ್ನೊಂದು ವಚನದಲ್ಲಿ ತೋಟದ ಬೆಳೆ ಮಾಡಲು ಅನುಸರಿಸಬೇಕಾದ ಕ್ರಮಗಳನ್ನು ಯೋಗಸಾಧನೆಯ ಹಂತಗಳನ್ನು ಉಪಮೆಯ ಮೂಲಕ ಹೀಗೆ ವಿವರಿಸಿದ್ದಾನೆ.

‘ತನುವ ತೋಂಟವ ಮಾಡಿ ಮನವ ಗುದ್ದಲಿ ಮಾಡಿ
ಭ್ರಾಂತಿಯ ಬೇರು ಅಗೆದು ಕಳೆದು ಸಂಸಾರ ವ್ಯಾಮೋಹದ ಹೆಂಟೆಯ ಒಡೆದು
ಬಗಿದು ಪರಬ್ರಹ್ಮದ ಬೀಜವ ಬಿತ್ತಿ ಅಖಂಡ ಮಂಡಳವೆಂಬ ಬಾವಿಯಿಂದ
ಪವನವೇ ರಾಟಾಳ ಮಾಡಿಕೊಂಡು ಸುಷುಮ್ನಾನಾಳದಿಂದ ಉದಕವ ತಿದ್ದಿ
ಪಂಚೇಂದ್ರಿಯಗಳೆಂಬ ಪಶುಗಳು ಹಾಳು ಮಾಡಬಾರದೆಂದು

ಸಮತೆ ಸೈರಣೆಯ ಬೇಲಿಯನಿಕ್ಕಿ ಆವಾಗಲೂ ಈ ತೋಟದಲ್ಲಿ
ಜಾಗರವಿದ್ದು ಸಸಿಯ ಸಲುಹಿದೆ...'

ತೋಟ ಮಾಡಬೇಕಾದರೆ ಕರಿಕೆ ಕಣೆಗಲದ ಬೇರನ್ನು ಗುದ್ದಲಿಯಿಂದ ಅಗಿದು ತೆಗೆಯಬೇಕು. ಗುದ್ದಲಿಯಿಂದ ಅಗೆದಾಗ ಹೆಂಡೆಗಳು ಏಳುತ್ತವೆ. ಆ ಹೆಂಡೆಗಳನ್ನು ಒಡೆದು ಪುಡಿ ಮಾಡಿ ಮಣ್ಣನ್ನು ಮೆತ್ತಗೆ ಮಾಡಬೇಕು. ಅಂತಹ ಹೊಲದಲ್ಲಿ ಬೀಜ ಬಿತ್ತಬೇಕು. ತೋಟದ ಬೆಳೆಗೆ ನೀರಾವರಿ ಅವಶ್ಯ ಬೇಕು. ಅದಕ್ಕೆ ಬಾವಿ ಬೇಕು. ಬಾವಿಯಿಂದ ನೀರನ್ನು ಎತ್ತಿ ಹೊಲಕ್ಕೆ ಹಾಯಿಸಬೇಕು. ಅದಕ್ಕೆ ರಾಟಾಳ ಬೇಕು. ತೋಟಕ್ಕೆ ಇನ್ನೂ ಒಂದು ಅವಶ್ಯಕವಾದದ್ದು ಬೇಲಿ, ಬೇಲಿ ಇಲ್ಲದ ತೋಟದಲ್ಲಿ ದನಗಳು, ಗೂಳಿಗಳು ನುಗ್ಗಿ ತೋಟದ ಬೆಳೆ ತಿಂದು ಹಾಳುಮಾಡುತ್ತವೆ. ಕೇವಲ ಬೇಲಿ ಹಚ್ಚಿದರೆ ಮುಗಿಯಲಿಲ್ಲ. ಕಳ್ಳಕಾಕರಿಂದ, ಮಂಗಗಳಿಂದ ತೋಟವನ್ನು ಹಗಲಿರುಳು ಕಾಯಬೇಕು. ಇದು ರೈತರು ತೋಟವನ್ನು ಮಾಡಿ ತೋಟದ ಬೆಳೆ ರಕ್ಷಿಸುವ ಪರಿಕರಗಳಾವು ಎಂಬುದರ ವಿವರ ಇಲ್ಲಿದೆ. ಶರೀರವೆಂಬ ಹೊಲ, ಇದರಲ್ಲಿ ಭ್ರಾಂತಿಯೆಂಬ ಕರಿಕೆ ತೆಗೆಯಲು ಮನವೆಂಬ ಗುದ್ದಲಿ ಬಳಸಬೇಕು. ಸಂಸಾರ ವ್ಯಾಮೋಹವಳಿದು ಗಾಳಿಯ(ಪ್ರಾಣವಾಯು)ನ್ನೇ ರಾಟಾಳ ಮಾಡಿ ಸುಷುಮ್ನಾ ನಾಡಿಯಿಂದ ನೀರೆತ್ತಬೇಕು. ಪಂಚೇದ್ರಿಯಗಳೆಂಬ ಪಶುಗಳಿಂದ ತನ್ನ ಸಾಧನೆಯನ್ನು ರಕ್ಷಿಸಿ ಬೆಳೆಸಬೇಕು. ಹಗಲಿರುಳು ಜಾಗೃತನಾಗಿ ತೋಟ ಸಲುಹಬೇಕು. ಸಮಬುದ್ಧಿ ಹಾಗೂ ಸಮಾಧಾನದ ಬೇಲಿಯನ್ನು ಹಾಕಬೇಕು.

'ಈಳೆ ನಿಂಬು ಮಾವು ಮಾದಲ ಗಿಡಕ್ಕೆ
ಹುಳಿ ನೀರೆರೆದವರಾರಯ್ಯ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ
ಸಿಹಿ ನೀರೆರೆದವರಾರಯ್ಯಾ?
ಕಳವೆ ರಾಜಾನ್ನ ಶಾಲ್ಯಾನ್ನಕ್ಕೆ
ಓಗರದ ಉದಕವನೆರೆದವರಾರಯ್ಯಾ?
ಮರುಗ ಮಲ್ಲಿಗೆ ಪಚ್ಚೆ ಮಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ...'

ಮಹಾದೇವಿಯಕ್ಕ ಈ ವಚನದಲ್ಲಿ ಕಿತ್ತಳೆ, ಲಿಂಬೆ, ಮಾವು, ಮಾದಲ, ಕಬ್ಬು, ಬಾಳೆ, ಹಲಸು, ನಾರಿವಾಳ, ಕಳವೆ ರಾಜಾನ್ನ ಶಾಲ್ಯಾನ್ನ ಮತ್ತು ಹೂವುಗಳಾದ ಮರುಗ, ಮಲ್ಲಿಗೆ, ಪಚ್ಚೆ, ಮಡಿವಾಳಗಳ ಪ್ರಸ್ತಾಪ ಮಾಡಿದ್ದಾಳೆ. ರೈತರು ಬೆಳೆಯುವ ಈ ಎಲ್ಲ ಬೆಳೆಗಳಲ್ಲಿ ಹುಳಿ, ಸಿಹಿ, ಅನ್ನದ ಮತ್ತು ಪರಿಮಳದ ನೀರನ್ನು ಎರೆದು ಪೋಷಣೆಗೆ ಕಾರಣನಾದವ ಆ ದೇವ ಎಂದು ಹೇಳಿದ್ದಾಳೆ. ನಿಸರ್ಗದಲ್ಲಿರುವ ಪಶು, ಪಕ್ಷಿ, ವನ, ನೆಲ, ಹೊಲ, ಮಣ್ಣು, ನೀರು, ಗಿಡ-ಮರ ಎಲ್ಲವುಗಳಲ್ಲಿಯೂ ಜೀವಂತಿಕೆಯನ್ನು

ಕಾಣುತ್ತಾಳೆ. ಅವುಗಳನ್ನು ಮಾತಾಡಿಸುತ್ತಾಳೆ. ಚೆನ್ನಮಲ್ಲಿಕಾರ್ಜುನನನ್ನು ಕಂಡಿರುವಿರಾ? ಎಂದು ತನ್ನ ಹಲವಾರು ವಚನಗಳಲ್ಲಿ ಕೇಳುತ್ತಾಳೆ. ವನದೊಳಗಿನ ಗಿಡಗಳು ಕಲ್ಪವೃಕ್ಷಗಳು. ಕಲ್ಲುಗಳೆಲ್ಲ ಪರುಷ, ನೆಲವೆಲ್ಲ ಪಾವನ ಹಾಗೂ ಅವಿಮುಕ್ತ ಕ್ಷೇತ್ರ. ನೀರೆಲ್ಲ ನಿರ್ಝರಾಮೃತ ಎಂದು ಭೂಮಿಯ ಮೇಲಿನ ಕಲ್ಲು, ಕಾಡು, ನೀರು ಎಲ್ಲದರಲ್ಲೂ ಪಾವಿತ್ರ್ಯತೆಯನ್ನು, ಘನತೆಯನ್ನು ಕಾಣುತ್ತಾಳೆ. ಅದರಂತೆ ರೈತರೂ ಸಹಿತ ಸಗಣಿ, ಮಣ್ಣು, ನೀರು, ನದಿ, ಭೂಮಿಯನ್ನು ದೇವರಂತೆ ಪೂಜ್ಯಭಾವನೆಯಿಂದ ಕಾಣುತ್ತಾರೆ ಮತ್ತು ಗೌರವದಿಂದ ಭಕ್ತಿಯಿಂದ ಪೂಜಿಸುತ್ತಾರೆ.

ಮಹಾಮನೆಯ ದಾಸೋಹದ ಅಧಿಕಾರಿ ಹಾಗೂ ಬಿಜ್ಜಳ ರಾಜನ ಉಗ್ರಾಣದ ಅಧಿಕಾರಿ ಸೊಡ್ಡಳ ಬಾಚರಸನು ನವಧಾವನ್ಯಗಳಾದ ಜೋಳ, ಗೋಧಿ, ಭತ್ತ, ಕಡಲೆ, ಹೆಸರು, ನವಣೆ, ಬರಗು, ಸಾವೆ ಮತ್ತು ಹಾರಕಗಳ ದಾಸ್ತಾನಿನ ಪಟ್ಟಿಯನ್ನೇ ಕೊಡುತ್ತಾನೆ. ಇವು ರೈತರು ಬೆಳೆಯುವ ಆಹಾರ ಧಾನ್ಯಗಳು ಹಾಗೂ ಬೇಳೆಕಾಳುಗಳಾಗಿವೆ. ಇಲ್ಲಿ ಮತ್ತೊಂದು ಗಮನಿಸಬೇಕಾದ ಸಂಗತಿ ಎಂದರೆ ಜೋಳವು ಹನ್ನೆರಡನೆ ಶತಮಾನದಲ್ಲಿ ಜನರ ಮುಖ್ಯ ಆಹಾರ ಧಾನ್ಯವಾಗಿತ್ತೆಂಬುದು ಜೋಳದ ದಾಸ್ತಾನಿನ ಪ್ರಮಾಣದಿಂದ ಕಂಡುಬರುತ್ತದೆ. 'ಹೊಸ ಜೋಳ ಅರವತ್ತು ಲಕ್ಷ ಖಂಡುಗ, ಶಾಲಿ ಧಾನ್ಯ ಮೂವತ್ತು ಲಕ್ಷ ಖಂಡುಗ, ಹೆಸರು ಮೂವತ್ತಾರು ಲಕ್ಷ ಖಂಡುಗ, ಗೋಧಿ ಹನ್ನೆರಡು ಲಕ್ಷ ಖಂಡುಗ, ನವಣೆ, ಹಾರಕ, ಸಾವೆ, ಬರಗು ದೂಸಿಗಳೆಂಬ ಧಾನ್ಯ ಐವತ್ತು ಲಕ್ಷ ಖಂಡುಗ...' ಎಂದು ಉಗ್ರಾಣದಲ್ಲಿರುವ ಧಾನ್ಯಗಳ ಸಂಗ್ರಹ ತಿಳಿಸುತ್ತಾನೆ. ಅದೂ ಅಲ್ಲದೆ ಸುಗ್ಗಿಯ ಬಗ್ಗೆಯೂ ಪ್ರಸ್ತಾಪಿಸಿದ್ದಾನೆ.

ಕಳೆಗಳು ಬೆಳೆಗಳಿಗಿಂತ ಮೊದಲೇ ಹುಟ್ಟಿ ಬೆಳೆಗಳಿಗಿಂತ ಬೇಗನೆ ಯಾವುದೇ ಆರೈಕೆ ಮಾಡದೆ ಬೆಳೆಯುತ್ತವೆ. ಹೀಗಾಗಿ ಕಳೆ ಕಸಗಳು ಬೆಳೆಗಳನ್ನು ಬೆಳೆಯುದಂತೆ ಕಂಟಕಗಳಾಗಿ ಕಾಡುತ್ತವೆ. ಅದನ್ನೇ ಬಸವಣ್ಣನವರು 'ಬೆಳೆವ ಭೂಮಿಯಲ್ಲಿ ಪ್ರಳಯದ ಕಸ ಹುಟ್ಟಿ ತಿಳಿಯಲೀಯದು ಎಚ್ಚರವಲೀಯದು' ಎಂದು ಕಸಗಳ ಪ್ರಸ್ತಾವ ಮಾಡಿದ್ದಾರೆ. ಆ ಕಳೆ-ಕಸ ತೆಗೆದು ಹೊಲ ಹಸನು ಮಾಡಿದಾಗಲೇ ಬೆಳೆ ಚೆನ್ನಾಗಿ ಬೆಳೆಯುತ್ತದೆ. ಮನುಷ್ಯನ ಸ್ವಭಾವವು ಸಹಿತ ಪಶುವಿನಂತೆ ಹಸಿರನ್ನು ಕಂಡು ವಿಷಯಗಳೆಡೆ ಓಡುತ್ತದೆ. ಆದ್ದರಿಂದ ವಿಷಯರಹಿತನ ಮಾಡಿ ಭಕ್ತಿರಸವ ತಣೆಯೆ ಮೇಯಿಸೆಂದು ತಮ್ಮ ವಚನದಲ್ಲಿ ಬೇಡಿಕೊಂಡಿದ್ದಾರೆ. ಹಸು, ಹಸುರು, ಮೇಯಿಸು ಶಬ್ದಗಳು ದನಗಳನ್ನು ಹಸಿರು ಹುಲ್ಲಿನಿಂದ ಮೇಯಿಸುವ ರೀತಿಯನ್ನು ಪ್ರತಿನಿಧಿಸುತ್ತವೆ.

'ಹಸುವ ಕಾವಲ್ಲಿ ದೆಸೆಯನರಿತು
ಎತ್ತ ಕಾವಲ್ಲಿ ಪೃಥ್ವಿಯನರಿತು

ಕರುವ ಕಟ್ಟುವಲ್ಲಿ ಗೊತ್ತ ಕಂಡು
ಕರು ಕಡಸು ಮತ್ತು ಹಸುವಿನಲ್ಲಿ ಚಿತ್ತದ ವರ್ಣವನರಿಯಬೇಕು'

ಎಂದು ತುರುಗಾಹಿ ರಾಮಣ್ಣ ತನ್ನ ವಚನದಲ್ಲಿ ಹಸು, ಎತ್ತುಗಳನ್ನು ಕಾಯುವಾಗ, ಕರುವನ್ನು ಕಟ್ಟುವಾಗ ಜಾಗ್ರತೆ ಹೇಗೆ ವಹಿಸಬೇಕೆಂದು ಹೇಳಿದ್ದಾನೆ. ಕರು ಕಡಸು, ಎತ್ತು ಹಸುವಿನ ಚಲನವಲನ ಅರಿತು ಜೋಪಾನ ಮಾಡಬೇಕು. ರೈತರ ಉಪಕಸುಬಾದ ಪಶುಸಂಗೋಪನೆ ಬಗ್ಗೆ ಈ ವಚನ ಒಳ್ಳೆ ಉಪಾಯಗಳನ್ನು ತಿಳಿಸುತ್ತದೆ. ಅದರಂತೆ ಚಿತ್ತ, ಬುದ್ಧಿ, ಅಹಂಕಾರ ಮತ್ತು ಮನಸ್ಸುಗಳ ಚಲನವಲನದ ಮೇಲೆ ನಿಯಂತ್ರಣ ಇಟ್ಟುಕೊಂಡು ಆಧ್ಯಾತ್ಮಿಕ ಸಾಧನೆ ಮಾಡಬೇಕೆಂದು ತಿಳಿಸಿದ್ದಾನೆ. 'ತರ್ಕದ ಬೆನ್ನು ಬಾರನೆತ್ತುವೆನೆಂದು' ಬಸವಣ್ಣನವರು ದನಕರುಗಳನ್ನು ಬೆದರಿಸಲು ಉಪಯೋಗಿಸುವ ಬಾರುಕೋಲಿನ ಪ್ರಸ್ತಾಪ ಮಾಡಿದ್ದಾರೆ.

ಮಠ-ಮಂದಿರಗಳಲ್ಲಿ ಸಂಸ್ಕೃತ ಭಾಷೆ ಕಲಿತು ಮಂತ್ರ ಪಠಣ ಮಾಡುತ್ತ ತಾವು ಆಚಾರ್ಯರು, ತಾವು ಯೋಗಿಗಳು, ತಾವು ಶ್ರೇಷ್ಠರೆಂದು ಹೇಳಿಕೊಳ್ಳುತ್ತ ಅಮಾಯಕ ಜನರನ್ನು ಶೋಷಣೆ ಮಾಡುತ್ತಾರೆ. ರೈತರು, ಹುಂಬರು, ಶೂದ್ರರು ಎಂದು ಈ ಶ್ರೇಷ್ಠ ವರ್ಗದ ಜನರು ಅವರನ್ನು ಅವರ ವೃತ್ತಿಯನ್ನು ಕಡೆಗಣಿಸಿದ್ದರು. ಇಂತಹ ವಾತಾವರಣದಲ್ಲಿ ಮುದ್ದಯ್ಯನೆಂಬ ರೈತನು ಒಕ್ಕಲುತನ ಮಾಡಿ ಒಕ್ಕಲಿಗನಾಗಿಯೇ ಆದ್ಯಾತ್ಮಸಾಧನೆ ಮಾಡಿ ಶರಣನಾಗಿದ್ದಾನೆ. ಒಕ್ಕಲುತನದ ಪರಿಕರಗಳೆಲ್ಲವೂ ಯೋಗಸಾಧನೆಯ ಸಾಧನಗಳಾಗಿವೆ. ಮುದ್ದಯ್ಯನ ವಚನದಲ್ಲಿ ಹೊಲ, ನೇಗಿಲು, ಎತ್ತು, ಗಳೆ ಹೊಡೆದು ಹಸನು ಮಾಡುವ, ಬಿತ್ತುವ, ಹದ, ಬೆದೆ, ಖೂರಿಗೆ, ಖೂರಿಗೆಯ ದಿಂಡು, ಕೂರಿಗೆಯ ತಾಳು, ಕೋಲು, ಸೆಡ್ಡಿ ಬಟ್ಟಲು, ಅದನ್ನು ಬಿಗಿಯುವ ಹಗ್ಗ, ಬೀಜ, ಮಳೆ, ಸಸಿ, ಕಳೆ, ಸೆದೆ, ಅಲಬು ಎಂಬ ಕಸ, ಕೊಯ್ಲು, ಕುಡಗೋಲು, ಕುಡಗೋಲಿನ ಹಿಡಿ, ಸಿವುಡು, ಗೂಡು, ಬಣವೆ, ತೆನೆ, ಖಂಡಿ, ಒಕ್ಕುವದು, ಹೊಟ್ಟು ತೂರುವುದು, ರಾಶಿ ಮಾಡುವುದು - ಹೀಗೆ ಒಕ್ಕಲುತನದ ಒಕ್ಕಲು ಮಗನ ಇಡೀ ಹಂಗಾಮಿನ ಪೂರ್ಣ ಚಿತ್ರ ಕಣ್ಮುಂದೆ ಕಟ್ಟಿದಂತೆ ನಿರೂಪಿಸಿದ್ದಾನೆ.

'ಭಕ್ತಿಯೆಂಬ ಪೃಥ್ವಿಯಲ್ಲಿ ಗುರೂಪದೇಶವೆಂಬ ನೇಗಿಲ ಹಿಡಿದು
ಅಂತಃಕರಣ ಚತುಷ್ಟಯ ಎಂಬ ಪಶುವ ಕಟ್ಟಿ
...ಆ ಹೊಲನಂ ಹಸಮಾಡಿ ಬಿತ್ತುವ ಪರಿ ಇನ್ನಾವುದಯ್ಯಾ,
ಎಂದೊಡೆ ನಾದ ಬಿಂದು ಕಲೆ ಮಳೆಗಾಲದ ಹದ ಬೆದೆಯನರಿದು
ಸ್ಥೂಲವೆಂಬ ದಿಂಡಿಗೆ ತ್ರಿದೇವನೆಂಬ ತಾಳನೆಟ್ಟು
ಈಡ ಪಿಂಗಳ ಸುಷುಮ್ನ ನಾಳವೆಂಬ ಕೊಳವೆಗಳ ಚೋದಿಸಿ
ಮೇಲೆ ತ್ರಿಕೂಟ ಸ್ಥಾನವೆಂಬ ಹಗ್ಗವಂ ಸೇದಿ ಕಟ್ಟಿ

ಹಂಸನೆಂಬ ಎತ್ತ ಹೂಡಿ ಪ್ರಣವ ಎಂಬ ಬೀಜವ
ಸರ್ವಶಾಂತಿ ಎಂಬ ಮೇಘ ಸುರಿಯಲ್ಕೆ
ನೀಲಬ್ರಹ್ಮವೆಂಬ ಸಸಿ ಹುಟ್ಟಿತ್ತು ಆ ಸಸಿಯ ಮುಟ್ಟುವ
ಸಪ್ತವರ್ಣದ ಸದೆಯ ಕಳೆದು ಅಷ್ಟವರ್ಣದ ಅಲಬ ಕಿತ್ತು
ದಶವಾಯು ಎಂಬ ಕಸವಂ ಕಿತ್ತು ತೆಗೆದು...
ಆ ಭತ್ತ ಬೆಳೆದು ನಿಂದಿರಲು ಕೊಯ್ದುಂಬ ಪರಿ ಇನ್ನಾವುದೆಂದರೆ
ಇಷ್ಟವೆಂಬ ಹಸ್ತವಂ ಪಿಡಿದು ಜನನದ ನಿಲುವು ಕೊಯ್ದು ಮರಣದ ಸಿವುಡಂ
ಕಟ್ಟಿ ಆಕಾಶವೆಂಬ ಬಣವೆಯನೊಟ್ಟಿ ಉಣ್ಮಣಿಯೆಂಬ ತೆನೆಯಂ ತರಿದು
ಮನೋರಥವೆಂಬ ಬಂಡಿಯಲ್ಲಿ ಹೇರಿ
ಒಕ್ಕಿ.... ಪಾಪದ ಹೊಟ್ಟು ತೂರಿ... ಯಮರಾಜನೆಂಬ ಅರಸನಿಗೆ ಕೋರನಿಕ್ಕದೆ
...ಸುಖಿಯಾಗಿಪ್ಪ ಒಕ್ಕಲು ಮಗನ ತೋರಿ ಬದುಕಿಸಯ್ಯ
ಕಾಮಭೀಮ ಜೀವದೊಡೆಯ ಪ್ರಭುವೇ ನಿಮ್ಮ ಧರ್ಮ ನಿಮ್ಮ ಧರ್ಮ'

ಮುದ್ದಯ್ಯನ ಪ್ರಕಾರ ಕೃಷಿಯು ಒಂದು ಯೋಗ. ಒಕ್ಕಲುತನದಲ್ಲಿ ತೊಡಗುವೆಂದರೆ ತಪಸ್ಸು ಮಾಡುವುದಾಗಿದೆ. ಈ ವಚನದಲ್ಲಿ ಬರುವ ಒಕ್ಕಲುತನದ ಪರಿಕರಗಳೆಲ್ಲ ಆಧ್ಯಾತ್ಮಿಕ ಸಾಧನೆಯ ಸಾಧನಗಳಾಗಿ, ಜನನ-ಮರಣಗಳ ಚಕ್ರದಿಂದ ಪಾರಾಗಿ ಆಧ್ಯಾತ್ಮಿಕ ಸುಖ ಪಡುವ ರೈತನು ನಿಜವಾಗಿಯೂ ಯೋಗಿಯೇ ಆಗಿದ್ದಾನೆ. ಅಂತಹ ಒಕ್ಕಲು ಮಗನನ್ನು ತೋರಿ ಬದುಕಿಸೆಂದು ಬೇಡಿಕೊಂಡಿದ್ದಾನೆ.

'ಅಂಗವೇ ಭೂಮಿಯಾಗಿ ಲಿಂಗವೇ ಬೆಳೆಯಾಗಿ, ವಿಶ್ವಾಸವೆಂಬ ಬಿತ್ತ ಬಲಿದು ಉಂಡು ಸುಖವಾಗಿರಬೇಕೆಂದ ಕಾಮಭೀಮ ಜೀವದೊಡೆಯ' ಈ ವಚನದಲ್ಲಿ ಲಿಂಗಾಂಗ ಸಾಮರಸ್ಯಕ್ಕೆ ವಿಶ್ವಾಸ, ನಿಷ್ಠೆ ಎಂಬ ಉತ್ತಮ ಬೀಜ ಹುಟ್ಟಿ, ಸಸಿಯಾಗಿ ಬೆಳೆದು, ಬಲಿತು ಫಲ ಬಿಡಬೇಕು. ಆಗ ಲಿಂಗಾಂಗ ಸಮರಸ ಸುಖ ಸಾಧ್ಯವಾಗುವುದೆಂದು ಭೂಮಿ-ಬೆಳೆ-ಬೀಜಗಳ ಉಪಮೆಗಳ ಮೂಲಕ ಸ್ಪಷ್ಟಪಡಿಸಿದ್ದಾನೆ. ಇನ್ನೊಂದು ವಚನದಲ್ಲಿ ಒಕ್ಕಲು-ಒಡೆಯ, ಊಳಿಗಮಾನ್ಯ ಪದ್ಧತಿ, ಹಟ್ಟಿ, ಕೊಟ್ಟಿಗೆಗಳ ಪ್ರಸ್ತಾಪವಿದೆ. ಒಕ್ಕಲಿಗನ ಗುಡಿಸಲಿಗೆ ನಿಜವಾದ ಒಡೆಯ ಅರಸನಲ್ಲ, ಆ ದೇವರೆ ಒಡೆಯನಾಗಿದ್ದಾನೆ. ಹೆಚ್ಚಿಗೆ ಗೇಣಿ ಬೇಡಿದರೆ ಕೊಡಲಾರೆ. ಬೇಕಾದರೆ ಬಂಧನದಲ್ಲಿರಲು ತಯ್ಯಾರಾಗಿರುವೆ ಎಂದು ಹೇಳುವುದರ ಮೂಲಕ ಗೇಣಿ ಪಡೆದ ರೈತನನ್ನು ಮಾಲಕ (ಭೂಮಾಲಿಕ) ಶೋಷಣೆ ಮಾಡುವ ವ್ಯವಸ್ಥೆಯ ಪರಿಚಯ ಇಲ್ಲಿದೆ.

'ಶಿಷ್ಯನೆಂಬ ಧರೆಯ ಮೇಲೆ ಗುರು ಎಂಬ ಬೀಜವ ಬಿತ್ತಿ
ಅರಿವೆಂಬ ಗೊಬ್ಬರವಿಕ್ಕಿ ಜ್ಞಾನವೆಂಬ ಉದಕನೆರೆಯಲಿಕೆ
ಲಿಂಗವೆಂಬ ಆಕಾರ ಮೊಳೆದೋರಿತ್ತು ಕಾಣಿರೇ

ಜಂಗಮವೆಂಬ ಸಸಿ ಬಲಿದು ವೃಕ್ಷ ಪಲ್ಲವಿಸಿತ್ತು
ಪರಮಜ್ಞಾನವೆಂಬ ಹಣ್ಣಾಯಿತ್ತು'

ಮರುಳು ಶಂಕರದೇವನ ವಚನದಲ್ಲಿ ಧರೆ, ಬೀಜ, ಗೊಬ್ಬರ, ನೀರು, ಮೊಳಕೆ, ಸಸಿ, ಗಿಡ, ಹಣ್ಣು-ಮೊದಲಾದ ಶಬ್ದಗಳು ಬಳಕೆಯಾಗಿವೆ. ಅವುಗಳ ಹೋಲಿಕೆಯೊಂದಿಗೆ ಶಿಷ್ಯ-ಗುರು, ಅರಿವು-ಜ್ಞಾನ, ಲಿಂಗ-ಜಂಗಮ, ಸಸಿ-ವೃಕ್ಷ, ಪರಮಜ್ಞಾನವೆಂಬ ಹಣ್ಣು ಪಕ್ವವಾದ ಪರಿಯ ವಿವರ ಇಲ್ಲಿದೆ ಹಾಗೂ ಇಹಲೋಕದ ಶರಣರ ಕಾರ್ಯ ಪರಿಪೂರ್ಣವಾದ ಬಗ್ಗೆ ಈ ವಚನದಲ್ಲಿದೆ. ಒಕ್ಕುದ-ಮಿಕ್ಕುದ ಎಂಬ ಪದಗಳು ಬಹಳಷ್ಟು ಶರಣರ ವಚನಗಳಲ್ಲಿ ಬಳಕೆಯಾಗಿವೆ. '...ಒಕ್ಕುದ ಹಾರೈಸಿ ಮಿಕ್ಕುದ ಕೈಕೊಂಡ ವ್ಯಾಧಿ ಬಂದಡೆ ನರಳು, ಬೇನೆ ಬಂದರೆ ಬಳಲು, ಜೀವ ಹೋದಡೆ ಸಾಯಿ, ಇದಕ್ಕಾಗಿ ದೇವರ ಹಂಗೇಕೆ? ಬಾಪು ಲದ್ದೆಯ ಸೋಮಾ!' ಒಕ್ಕುದ ಹಾರೈಸಿ ಮಿಕ್ಕುದ ಕೈಕೊಂಡು ಕಷ್ಟ-ಸುಖಗಳು ಬಂದರೆ ಸಮಾನ ಮನದಿಂದ ಸ್ವೀಕರಿಸಿ ಮರಣವನ್ನು ಸಹಿತ ಸಂತೋಷದಿಂದ ಸ್ವೀಕರಿಸಬೇಕು. ದೇವರ ಹಂಗು ಯಾತಕ್ಕೆ ಬೇಕು? ಹೀಗೆ ಅನುಭವವನ್ನು ಲದ್ದೆಯ ಸೋಮಣ್ಣನೆಂಬ ಶರಣ ತನ್ನ ವಚನದಲ್ಲಿ ಹೇಳುತ್ತಾನೆ.

ಮೇಲಿನ ಎಲ್ಲ ವಚನಗಳನ್ನು ಅವಲೋಕಿಸಿದರೆ ಒಕ್ಕಲುತನದ ಪರಿಭಾಷೆಯು ಒಂದಿಲ್ಲಾ ಒಂದು ರೀತಿಯಲ್ಲಿ ಪ್ರಸ್ತಾಪಗೊಂಡಿದೆ. ಕೇವಲ ಒಕ್ಕಲುತನದ ಪರಿಭಾಷೆಗೆ ಸಂಬಂಧಪಡುವ ವಚನಗಳು ಇವಲ್ಲ. ಭಕ್ತಿಭಂಡಾರಿ ಬಸವಣ್ಣನವರ ವ್ಯಕ್ತಿತ್ವ, ಆದರ್ಶ, ಕಾಯಕ ತತ್ವದ ಆಚರಣೆ, ಅನುಭಾವದನುಸಂಧಾನ, ಒಕ್ಕಲುತನದ ಪರಿಭಾಷೆ, ಅನುಭವ ಮಂಟಪದ ಪ್ರಬಾವ ವಲಯದಲ್ಲಿ ಹೇಗೆ ಶರಣರ ಮನಃಪರಿವರ್ತನೆಗೆ ಮತ್ತು ಆಚರಣೆಗೆ ಕಾರಣವಾಯಿತು ಎಂಬುದರ ಸ್ಪಷ್ಟ ಚಿತ್ರಣ ಇಲ್ಲಿದೆ. ಜೊತೆಗೆ ಎಲ್ಲ ರೀತಿಯ ವೃತ್ತಿಗಳು ಕಾಯಕದ ಸ್ಥಾನ ಪಡೆದು ಅವುಗಳನ್ನು ಅನುಸರಿಸಿದ ಸಾಮಾನ್ಯ ವ್ಯಕ್ತಿಯೂ ಅನುಭಾವಿಯಾದ ಎಂಬುದರ ಚಿತ್ರವೂ ಇಲ್ಲಿದೆ. ಕಾಯಕದ ಪರಿಕರಗಳೂ ಆಧ್ಯಾತ್ಮಿಕ ಸಾಧನೆಗೆ ಸಾಧನಗಳಾದ ಬಗೆಯೂ ಇಲ್ಲಿದೆ.

'ಬಸವಯ್ಯ ಹುಟ್ಟಲಿ ಹೊಸ ಬೀದಿ ಕಟ್ಟಲಿ
ರಸಬಾಳೆ ಕಬ್ಬು ಬೆಳೆಯಲಿ...'

ಮಹಾತ್ಮ ಬಸವೇಶ್ವರರು ಮತ್ತೆ ಹುಟ್ಟಿಬರಲಿ, ಹೊಸ ಪಥ ನಿರ್ಮಾಣವಾಗಲಿ ಅದು ವಿಶ್ವಪಥವಾಗಲಿ. ನಾಡಿನ ಒಕ್ಕಲಿಗರ ಹೊಲದಲ್ಲಿ ರಸಬಾಳೆ ಬೆಳೆಯಲಿ, ಸಿಹಿ ಕಬ್ಬು ಬೆಳೆಯಲಿ, ನಾಡಿನ ಜನಕೆಲ್ಲ ಲೇಸಾಗಲಿ ಎಂಬುದು ಜನಪದ ಕವಿಗಳ ಆಶಯ.

❋

ಅಂಗೈಯಂತೆ ಹೊಲ ಮಾಡಿದರೆ

೨೦೦೩ರ ಮುಂಗಾರಿ ಹಂಗಾಮಿನಲ್ಲಿ ಮಳೆಯೇ ಆಗಿರಲಿಲ್ಲ. ಅಲ್ಲಲ್ಲಿ ರೋಹಿಣಿ ಮಳೆ ಆಗಿತ್ತು. ಮೃಗಶೀರಾ ಮಳೆಯೂ ಹನಿ ಹನಿ ಉದುರತೊಡಗಿತ್ತು. ಪ್ರತಿ ವರ್ಷದಂತೆ ಮೃಗಶಿರಾ ಮಳೆ ಜಡಿ ಮಳೆಯಾಗುವದೆಂಬ ಆಶಾಭಾವನೆಯಿಂದ ರೈತರು ಅವಸರದಿಂದಲೇ ಶೇಂಗಾ, ಹೆಸರು ಮತ್ತು ಸಾಂವಿ ಬಿತ್ತಿದ್ದರು. ಆದರೆ ಮೃಗಶೀರಾ ಮಳೆ ಹನಿ ಹನಿ ಮಳೆಯೂ ನಿಂತು ಹೋಗಿತ್ತು. ಇನ್ನುಳಿದ ಮಳೆಗಳೂ ಆಗಲೇ ಇಲ್ಲ. ಸಾಂವಿ, ಹೆಸರು ಮತ್ತು ಹೊಲದಲ್ಲಿ ಅಲ್ಲೊಂದು ಇಲ್ಲೊಂದು ಹುಟ್ಟಿದ್ದವು ಕಮರಿಹೋಗಿದ್ದವು. ಹಾಳೆ, ಬದುವು ಮತ್ತು ಬಚ್ಚಲುಗಳ ಹಿಂದೆ ಇರುವ ರೇವೆ ಮಣ್ಣಿನಲ್ಲಿ ಚೆನ್ನಾಗಿ ಹುಟ್ಟಿ ಬೆಳೆಯೂ ಬಾಡಲಿಲ್ಲ. ಅದಕ್ಕೆ ಕಾರಣವೆಂದರೆ ಅಲ್ಲಿ ತೇವಾಂಶ ಹೆಚ್ಚಾಗಿತ್ತು. ರೇವೆ ಮಣ್ಣು ಸಂಗ್ರಹವಾಗಿತ್ತು. ಹೊಲದ ಮೇಲ್ಮಣ್ಣು ಕೊಚ್ಚಿಕೊಂಡು ಹೋಗಿರಲಿಲ್ಲ.

ಮಣ್ಣು ಸಕಲ ಜೀವರಾಶಿಗಳಿಗೆ ಆಶ್ರಯ ಸ್ಥಾನವೆನಿಸಿದೆ. ಮಣ್ಣಿನಲ್ಲಿರುವ ಚೈತನ್ಯವು ಹಣ್ಣಿನಲ್ಲಿ ಮಧುರವನ್ನು, ಹೂವಿನಲ್ಲಿ ಮಕರಂದವನ್ನೂ, ಸಸ್ಯಗಳಲ್ಲಿ ಹಸಿರನ್ನು ತುಂಬಿಸುತ್ತದೆ. ಮಣ್ಣು ಜೀವಂತ ವಸ್ತು ಆಗಿದೆ. ಮಣ್ಣಿನಲ್ಲಿ ಜನ್ಮ ಕೊಡುವ ಸಾಮರ್ಥ್ಯ ಇರುವುದರಿಂದ "ಭೂಮಿತಾಯಿ" ಎಂದು ಗೌರವದಿಂದ ಕರೆಯುತ್ತಾರೆ. ಮಣ್ಣು ನಮ್ಮ ಹುಟ್ಟಿಗೆ, ಬದುಕಿಗೆ ಮತ್ತು ಸಾವಿಗೂ ಆಶ್ರಯ ಸ್ಥಾನವೆನಿಸಿದೆ. ಮಣ್ಣಿನಲ್ಲಿ ಅರಗಿಸಿಕೊಳ್ಳುವ ಮತ್ತು ಪರಿವರ್ತನೆ ಮಾಡುವ ಶಕ್ತಿ ಇದೆ. ವಿಷವನ್ನು ಚೆಲ್ಲಿದರೆ ಕುಗ್ಗದು ಹಾಲನ್ನು ಚೆಲ್ಲಿದರೆ ಹಿಗ್ಗದು. ಹಾಗೆಂದ ಮಾತ್ರಕ್ಕೆ ಮಣ್ಣು ನಿರ್ಜೀವ ಅಲ್ಲ. ಮಣ್ಣಿನ ಕಣ ಕಣದಲ್ಲೂ ಸಾವಿರಾರು ಸೂಕ್ಷ್ಮಾಣು ಜೀವಿಗಳಿವೆ. ಅವು ಸಾವಯುವ ಪದಾರ್ಥಗಳನ್ನು ಕಳಿಯುವಂತೆ ಮಾಡಿ, ಎರೆಹುಳುವಿನಂತಹ ಜೀವಿಗಳಿಗೆ ಆಹಾರವನ್ನು ಒದಗಿಸುತ್ತವೆ. ಈ ಆಹಾರವನ್ನು ತಿಂದು ಜೀರ್ಣಿಸಿಕೊಂಡು ಸಸ್ಯಗಳಿಗೆ ಬೇಕಾಗುವ ಪೋಷಕಾಂಶಗಳನ್ನು ಒದಗಿಸುತ್ತವೆ. ಹೀಗೆ ಮಣ್ಣಿನ ಸುಸ್ಥಿರತೆಗೆ ಸಾವಯವ ಪ್ರಕ್ರಿಯೆ ನಿರಂತರ ನಡೆಯುತ್ತಿರುತ್ತದೆ. ಇಂಥಹ ಮಣ್ಣಿನಲ್ಲಿ ಬೆಳೆದ ಬೆಳೆಗಳು ಕಳೆಯೇರಿ ಸುಳಿದೆಗೆದು ಬೆಳೆಯುತ್ತವೆ.

ಹೊಲದ ಮೇಲ್ಮಣ್ಣು ಅತ್ಯಮೂಲ್ಯವಾದದ್ದಾಗಿದೆ. ಈ ಮೇಲ್ಮಣ್ಣು ಬೆಳೆಗಳಿಗೆ ಅತಿ ಅವಶ್ಯಕ ಎನಿಸಿದೆ. ಆದ್ದರಿಂದ ಮೇಲ್ಮಣ್ಣನ್ನು ರಕ್ಷಿಸುವುದರಿಂದ ಹೊಲದ ಫಲವತ್ತತೆ

ಹೆಚ್ಚಾಗುವದು. ಅಂತಹ ಹೊಲದ ಮೇಲ್ಮಣ್ಣು ಆರೋಗ್ಯವಂತ ಮಣ್ಣು ಎನಿಸುವುದು. ಆರೋಗ್ಯವಂತ ಮಣ್ಣಿನಲ್ಲಿ ಬೆಳೆಗಳು ಆರೋಗ್ಯವಂತವಾಗಿರುತ್ತವೆ. ರಭಸದಿಂದ ಬಿದ್ದ ಮಳೆ ನೀರಿನಿಂದ ಹಾಗೂ ಬಿರುಗಾಳಿಗೆ ಹೊಲದ ಮೇಲ್ಮಣ್ಣಿನ ಕಣಕಣಗಳು ಕೊಚ್ಚಿ ಹೋಗದಂತೆ ಹಾಗೂ ಹಾರಿ ಹೋಗದಂತೆ ತಡೆಯುವುದು ಮಣ್ಣಿನ ರಕ್ಷಣೆ ಎನಿಸುವುದು. ಆಗ ಮಣ್ಣಿನ ಆರೋಗ್ಯ ಮತ್ತು ಸತ್ವದ ರಕ್ಷಣೆಯಾಗುತ್ತದೆ. ಮಣ್ಣನ್ನು ರಕ್ಷಿಸಿದರೆ ಮಣ್ಣು ಬೆಳೆಗಳನ್ನು ರಕ್ಷಿಸುತ್ತದೆ. ಮಣ್ಣು ರೈತರಿಗೆ ಕಣ್ಣು ಇದ್ದ ಹಾಗೆ. ಹೇಗೆ ಕಣ್ಣನ್ನು ರಕ್ಷಣೆ ಮಾಡುತ್ತೇವೋ ಅದೇ ರೀತಿ ಮಣ್ಣಿನ ರಕ್ಷಣೆಯ ಅವಶ್ಯಕತೆಯಿದೆ. ಆಕಾಶದಿಂದ ಬೀಳುವ ಒಂದೊಂದು ಮಳೆ ಹನಿಯೂ ಹೊಲದಲ್ಲೇ ಇಂಗಬೇಕು. ಅಂದಾಗಲೇ "ಸುಜಲಾಂ ಸುಫಲಾಂ ಸಸ್ಯಶ್ಯಾಮಲಾಂ" ಆಗುತ್ತದೆ.

ಮುಂಗಾರಿನ ಮೊದಲ ಮಳೆ ಬಿದ್ದಾಗ ಹೊಲದ ಮೇಲಿನಿಂದ ಬೀಸುವ ಗಾಳಿಯಲ್ಲಿ ಬರುವ ವಾಸನೆ ಮಣ್ಣಿನ ವಾಸನೆ ಎನಿಸುತ್ತದೆ. ಪ್ರತಿವರ್ಷ ಮಣ್ಣೆತ್ತಿನ ಅಮವಾಸ್ಯೆಯ ದಿವಸ ಹಾಗೂ ನಾಗರ ಅಮವಾಸ್ಯೆಯ ತನಕ ಬರುವ ಸೋಮವಾರ ಮತ್ತು ಮಂಗಳವಾರದಂದು ಮಣ್ಣಿನ ಎತ್ತುಗಳನ್ನು ಮತ್ತು ಗುಳ್ಳವ್ವಗಳನ್ನು ಮಾಡಿ ಪೂಜಿಸುತ್ತಾರೆ. ಮಣ್ಣಿನ ಮಹತ್ವ ಸೂಚಿಸುವ ನೆನಪಿಸುವ ಇಂಥ ಆಚರಣೆಗಳು ಅರ್ಥಪೂರ್ಣ ಎನಿಸಿವೆ. ಈ ಮಣ್ಣನ್ನು ರಕ್ಷಿಸಲು ರೈತರು ಹಲವಾರು ವಿಧಾನಗಳನ್ನು ಅನುಸರಿಸಿಕೊಂಡು ಬಂದಿದ್ದಾರೆ. ಮೊದಲನೆಯದಾಗಿ ಮಣ್ಣಿನ ಒಡ್ಡುಗಳು (ಬದುವುಗಳು). ಎರಡನೆಯದಾಗಿ ಹಾಳೆಯ ಹುಲ್ಲು ಹಚ್ಚಿ ಹಾಳೆಗಳ ನಿರ್ಮಾಣ ಮಾಡುವುದು. ಮೂರನೆಯದಾಗಿ ಕಲ್ಲಿನ ಬಚ್ಚಲುಗಳನ್ನು ಕಟ್ಟಿಸುವುದು. ನಾಲ್ಕನೆಯದಾಗಿ ಇಳುಕಲಿಗೆ ಅಡ್ಡವಾಗಿ ಗಳೆ ಹೊಡಯುವುದು ಮತ್ತು ಬೆಳೆ ಮಾಡುವದು. ಕೊನೆಯದಾಗಿ ಒಡ್ಡುಗಳ ಮೇಲೆ ಗಿಡಮರಗಳನ್ನು ಬೆಳೆಸುವುದು.

ಮಣ್ಣಿನ ಒಡ್ಡು(ಬದುವು)ಗಳು:

"ಅಂಗೈಯಂತೆ ಹೊಲ ಮಾಡಿದರೆ ಮುಂಗೈ ಎಲ್ಲ ತುಪ್ಪ"ಎಂದು ನನ್ನ ಅಜ್ಜ ದೊಡ್ಡ ಬಾಳಯ್ಯ ಆಗಾಗ ಅನ್ನುತ್ತಿದ್ದುದು ಇನ್ನೂ ನನ್ನ ನೆನಪಿನಲ್ಲಿದೆ. ಹೊಲದ ನಾಲ್ಕು ಕಡೆ ಬದುವುಗಳಿದ್ದರೆ, ಅಂಗೈಯಂತೆ ಹೊಲವಾಗುವುದು. ನಡುವೆ ಮಣ್ಣು ನೀರಿನ ಸಂಗ್ರಹವಾಗುತ್ತದೆ. ಮಲೆನಾಡಿನ ಭತ್ತದ ಗದ್ದೆಗಳು ಇದಕ್ಕೆ ಉತ್ತಮ ನಿದರ್ಶನ ಎನಿಸಿದೆ. ಅರೆಮಲೆನಾಡು ಮತ್ತು ಬೆಳವಲ ನಾಡಿನಲ್ಲಿ ಹೊಲಗಳು ಇಳಿಜಾರಾಗಿರುತ್ತವೆ ಮತ್ತು ಎರೆ ಜಮೀನು ಇರುವುದರಿಂದ ಮಣ್ಣಿನ ಸವಕಳಿ ಹೆಚ್ಚಾಗಿರುತ್ತದೆ. ಇಂಥ ಪ್ರದೇಶದಲ್ಲಿ ಮಣ್ಣಿನ ಒಡ್ಡುಗಳನ್ನು ಹಾಕುತ್ತಾರೆ. 'ಒಡ್ಡು ಇಲ್ಲದ ಹೊಲ ಗೊಡ್ಡೆಮ್ಮೆ ಸಾಕಿದಂತೆ' ಎಂಬ ಮಾತು ಒಡ್ಡುಗಳು ಮಣ್ಣಿನ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸುವುದನ್ನು ಎತ್ತಿ ತೋರಿಸುತ್ತದೆ. ಹತ್ತರಿಂದ ಹದಿನೈದು ಅಡಿ ಅಗಲ ಹಾಗೂ ಎಳರಿಂದ ಹತ್ತು ಅಡಿ

ಎತ್ತರದ ಮಣ್ಣಿನ ಒಡ್ಡುಗಳನ್ನು ಹಾಕಿ ಹೊಲದ ಇಳಿಜಾರಿನ ಕಡೆಗೆ ನೀರನ್ನು ಹರಿದುಹೋಗದ ಹಾಗೆ ತಡೆಯಲಾಗುತ್ತದೆ. ಈ ಒಡ್ಡುಗಳಲ್ಲಿ ಬಿರುಕು ಬಿಟ್ಟು ಒಮ್ಮೊಮ್ಮೆ ಹೆಚ್ಚು ಮಳೆಯಾಗಿ ಹೆಚ್ಚು ನೀರು ಹರಿದಾಗ ಒಡೆದುಹೋಗುತ್ತದೆ. ಆಗ ಕೂಡಲೇ ಮತ್ತೆ ಒಡೆದ ಒಡ್ಡನ್ನು ಹಾಕಿಸಬೇಕಾಗುತ್ತದೆ.

ಹುಲ್ಲಿನ ಹಾಳೆಗಳ ನಿರ್ಮಾಣ :

ಮಣ್ಣಿನ ಒಡ್ಡು ಹೊಲದ ಮೇಲ್ಮಣ್ಣು ಕೊಚ್ಚಿಕೊಂಡು ಹೋಗದಂತೆ ಹಾಗೂ ಹೊಲದಲ್ಲಿ ಬಿದ್ದ ಮಳೆ ನೀರು ಹೊಲದಲ್ಲೇ ಇಂಗುವಂತೆ ಮಾಡಿದ ವ್ಯವಸ್ಥೆಯಾಗಿದ್ದು, ಹುಲ್ಲಿನ ಹಾಳೆಗಳು ಮಣ್ಣನ್ನು ಮಾತ್ರ ರಕ್ಷಿಸಿ ನೀರನ್ನು ಸೋಸಿ ಕೆಳಗಡೆ ಬಿಡುತ್ತದೆ. ಒಡ್ಡಿನ ಒಳಗಡೆ ಎರಡು ನೂರರಿಂದ ಮೂರು ನೂರು ಅಡಿಗೊಂದರಂತೆ ಇಳುಕಲಿಕೆ ಅಡ್ಡವಾಗಿ ಈ ಹಾಳೆಗಳನ್ನು ಮಾಡುತ್ತಾರೆ. ಮಳೆಗಾಲದಲ್ಲಿ ಹುಲ್ಲಿನ ಬೇರುಳ್ಳ ಗಡ್ಡೆಗಳನ್ನು ಹಚ್ಚಿದರೆ ಆಯಿತು. ತಾವೇ ಮಳೆಗೆ ಚಿಗಿತು ಹುಲ್ಲು ಬೆಳೆಯುತ್ತದೆ. ಪ್ರತಿ ವರ್ಷ ಬಿದ್ದ ಮಳೆಯಿಂದ ಹುಲ್ಲಿನ ಗಡ್ಡೆ ಬೆಳೆದು, ಅಗಲವಾಗಿ ದೊಡ್ಡ ಹುಲ್ಲಿನ ಬದುವು ನಿರ್ಮಾಣವಾಗುತ್ತದೆ. ಈ ಹಾಳೆಗಳು ಅಲ್ಲಲ್ಲಿ ಮೇಲ್ಮಣ್ಣನ್ನು ತಡೆಯುವುದರಿಂದ ಹೊಲವು ಸಮತಟ್ಟಾಗುತ್ತದೆ. ಈ ಹಾಳೆಯಲ್ಲಿ ಬೆಳೆದ ಹುಲ್ಲು ಮಳೆಗಾಲದಲ್ಲಿ ಹಸಿರು ಮೇವಾಗಿ ದನಗಳ ಹೊಟ್ಟೆ ತುಂಬಿಸಬಲ್ಲದು. ಕೊಯ್ಯದೆ ಬಿಟ್ಟರೆ ಬೇಸಿಗೆಯಲ್ಲಿ ಒಣಹುಲ್ಲು ಕಡ್ಡವಾಗಿ ಒಣ ಮೇವಾಗುವುದು. ಟ್ರಾಕ್ಟರ್‌ದಿಂದ ಗಳೆ ಹೊಡೆಯುವಾಗ ಹಾಳೆಗಳು ಅಡೆತಡೆಯಾಗುತ್ತವೆ ಎಂಬ ಭಾವನೆಯಿಂದ ಈ ಹಾಳೆಗಳನ್ನು ಹೊಡೆದು ಹಾಕುತ್ತಿರುವುದು ಕಳವಳಕಾರಿ ಸಂಗತಿಯೆನಿಸಿದೆ. ಈ ಹಾಳೆಗಳನ್ನು ಒಮ್ಮೆ ಹಚ್ಚಿದರೆ ನೂರಾರು ವರ್ಷ ಬದುಕಿರುತ್ತವೆ. ಹಾಳೆಗೆ ಮಾರವಾಳಿ ಹುಲ್ಲನ್ನು ಹೆಚ್ಚಾಗಿ ಹಚ್ಚಿರುತ್ತಾರೆ.

ಕಲ್ಲಿನ ಬಚ್ಚಲುಗಳು :

ಹೊಲದ ವಿಸ್ತೀರ್ಣ ದೊಡ್ಡದಾಗಿದ್ದರೆ ಇಡೀ ಹೊಲದ ನೀರನ್ನು ಹೊಲದಲ್ಲಿ ಸಂಗ್ರಹಿಸಿಡುವುದು ಕಷ್ಟವಾಗುತ್ತದೆ. ಅದೂ ಅಲ್ಲದೆ ಹಿಂದಿನ ಹೊಲಗಳ ಒಡ್ಡುಗಳು ಒಡೆದು ದೊಡ್ಡ ಪ್ರಮಾಣದ ನೀರು ಬಂದಾಗಲೂ ತೊಂದರೆಯಾಗಿ ಒಡ್ಡುಗಳು ಒಡೆದು ಅಪಾರ ಹಾನಿಯಾಗುತ್ತದೆ. ಇದನ್ನು ತಪ್ಪಿಸಲು ಹೊಲದ ಕೆಳಗಡೆ ಒಂದು ಮೂಲೆಯಲ್ಲಿ ಹೊಲದ ಕೊನೆಗೆ ಒಂದು ಕಲ್ಲಿನ ಬಚ್ಚಲನ್ನು ಕಟ್ಟಿರುತ್ತಾರೆ. ಈ ಕಲ್ಲಿನ ಬಚ್ಚಲು ೩೦ ಅಡಿ ಉದ್ದ ಹಾಗೂ ೮ ರಿಂದ ೧೦ ಅಡಿ ಎತ್ತರದಲ್ಲಿ ದೊಡ್ಡ ದೊಡ್ಡ ಕಲ್ಲುಗಳನ್ನು ಕಟ್ಟಿರುತ್ತಾರೆ. ಬಚ್ಚಲಿನ ಹಿಂದುಗಡೆ ಲಾವಂಚದಂತಹ ದಟ್ಟ ಹಾಗೂ ಆಳವಾಗಿ ಬೇರು ಬಿಡುವ "ಮದಿ" ಹುಲ್ಲನ್ನು ಹಚ್ಚಿರುತ್ತಾರೆ. ಇದು ಎಂಥಹ ಬರಗಾಲದಲ್ಲೂ ಒಣಗುವುದಿಲ್ಲ. ಮಣ್ಣನ್ನು ತಡೆಯುವಲ್ಲಿ ಈ ಹುಲ್ಲು ಸಮರ್ಥ ಎನಿಸಿದೆ. ಹೊಲದ ಮೇಲ್ಗಡೆಯಿಂದ

ಬಂದ ಮಣ್ಣನ್ನು ಮಾತ್ರ ಹಿಡಿದಿಟ್ಟುಕೊಂಡು ನೀರನ್ನು ಬಚ್ಚಲಿನ ಮುಖಾಂತರ ಹೊರ ಹಾಕುವ ವ್ಯವಸ್ಥೆ ಇದಾಗಿದೆ. ಈ ಕಲ್ಲು ಬಚ್ಚಲನ್ನು ಒಮ್ಮೆ ನಿರ್ಮಿಸಿದರಾಯಿತು. ಪ್ರತಿ ವರ್ಷವೂ ಬಚ್ಚಲಿನ ಹಿಂದುಗಡೆಯಲ್ಲಿ ಮಣ್ಣು ಸಂಗ್ರಹವಾಗಿ ಹೊಲ ಎತ್ತರವಾಗುತ್ತ ಹೋಗುತ್ತದೆ. ಆಗ ಬಚ್ಚಲಿನ ಮೇಲೆ ಮತ್ತಷ್ಟು ಕಲ್ಲು ಕಟ್ಟಿ ಎತ್ತರ ಹೆಚ್ಚಿಸಲಾಗುತ್ತದೆ. ಈ ಕಲ್ಲು ಬಚ್ಚಲಿನ ಎಡಬಲಗಳಲ್ಲಿ ಹೊಲದ ಉದ್ದಕ್ಕೂ ಮಣ್ಣಿನ ಒಡ್ಡನ್ನು ಬಚ್ಚಲನ್ನೂ ಮಾಡುವಾಗಲೇ ಹಾಕಿದ್ದು ಹೊಲ ಎತ್ತರವಾದ ಹಾಗೆ ಒಡ್ಡಿನ ಎತ್ತರವನ್ನು ಹೆಚ್ಚಿಸಲಾಗುವುದು.

ಗಳೆ ಹೊಡೆಯುವ ಕ್ರಮ:

ಹೊಲದ ಇಳಿಜಾರಿಗುಂಟ ಅಡ್ಡವಾಗಿ ಗಳೆ ಹೊಡೆಯಬೇಕು. ರಂಟೆ ಕುಂಟೆ ನೇಗಿಲನ್ನು ಅಡ್ಡಲಾಗಿ ಹೊಡೆಯುವುದರಿಂದ ಮತ್ತು ಬಿತ್ತಿ ಬೆಳೆ ಮಾಡುವುದರಿಂದಲೂ ಮಣ್ಣಿನ ರಕ್ಷಣೆ ಮಾಡಲಾಗುತ್ತಿದೆ. ಹೀಗೆ ಮಾಡಿ ಓಡುವ ನೀರನ್ನು ನಿಂತು ನಿಂತು ನಡೆಯುವಂತೆ ಮಾಡಬಹುದಾಗಿದೆ. ಹೀಗೆ ಮಾಡಿದಾಗ ಮಣ್ಣು ನೀರು ಸವಕಳಿಯಾಗುವುದು ಕಡಿಮೆಯಾಗುತ್ತದೆ.

ಬದುವುಗಳ ಮೇಲೆ ಗಿಡಮರಗಳನ್ನು ಬೆಳೆಸುವುದು:

ಬದುವುಗಳ ಮೇಲೆ ರೈತರು ಚೌಡಲನ್ನು ಬೆಳೆಯುತ್ತಾರೆ. ಬೇವು, ಜಾಲಿ, ಬನ್ನಿ ಮತ್ತು ಆರಿಯ ಗಿಡಗಳನ್ನು ನೆಟ್ಟು ಬೆಳೆಸುತ್ತಾರೆ. ಇತ್ತೀಚೆಗೆ ಗ್ಲಿರಿಸಿಡಿಯಾ ಮತ್ತು ಸುಬಾಬುಲ್ ಗಿಡಗಳನ್ನು ಬೆಳೆಸಲಾಗುತ್ತಿದೆ. ಈ ಗಿಡ ಮರಗಳ ಬೇರುಗಳು ಆಳವಾಗಿ ಬಿಡುವುದರಿಂದ ಒಡ್ಡುಗಳಿಗೆ ಭದ್ರತೆ ಒದಗಿಸುತ್ತವೆ. ಜಾಲಿ ಮತ್ತು ಬೇವಿನ ಗಿಡಗಳು ಗಳೇದ ಸಾಮಾನುಗಳಾದ ಕುಂಟೆ, ರಂಟೆ ಮಾಡಿಸಲು ಉಪಯುಕ್ತವಾಗಿವೆ. ಬೇವಿನ ಗಿಡಗಳು ಇಮಾರತಿ ಕಟ್ಟಿಗೆಗೆ ಉಪಯುಕ್ತ ಎನಿಸಿವೆ. ಗ್ಲಿರಿಸಿಡಿಯಾದ ಎಲೆಗಳು ಹಸುರೆಲೆ ಗೊಬ್ಬರವಾಗಿ ಹಾಗೂ ಸುಬಾಬುಲ್ ದನಗಳಿಗೆ ಮೇವಾಗಿ ಉಪಯುಕ್ತ ಎನಿಸಿವೆ. 'ಮರದಿಂದ ಮಳೆ' ಎಂಬ ಮಾತಿನಂತೆ ವಾತಾವರಣ ತಂಪಾಗಿಸಿ ಮಳೆ ಸುರಿಸುವಂತೆ ಮಾಡುತ್ತವೆ. ಮಸಾರಿ ಮತ್ತು ಕಲ್ಲು ಹಕ್ಕಲು ಜಮೀನಿನಲ್ಲಿ ಅಕ್ಕಡಿಯಷ್ಟು ದೊಡ್ಡ ಬದುವುಗಳಿದ್ದು ಅವುಗಳು ಹುಲ್ಲಿನಿಂದ ಹಚ್ಚಗೆ ಹಾಗೂ ಅವುಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೇವಿನ ಗಿಡಗಳನ್ನು ಬೆಳೆಸಲಾಗುತ್ತಿದೆ.

ಮಣ್ಣಿನ ರಕ್ಷಣೆಯಿಂದಾಗುವ ಪ್ರಯೋಜನಗಳು:

ಹೀಗೆ ಮಣ್ಣು ಮತ್ತು ನೀರಿನ ರಕ್ಷಣೆಯಿಂದ ಹೊಲಕ್ಕೆ ಮತ್ತು ರೈತರಿಗೆ ಹಲವಾರು ಪ್ರಯೋಜನಗಳಿವೆ. ಹೊಲದಲ್ಲಿ ಬಿದ್ದ ಮಳೆಯ ನೀರು ಹೊಲದಲ್ಲೇ ಇಂಗುವುದರಿಂದ

ಹೊಲದಲ್ಲಿ ತೇವಾಂಶ ಹೆಚ್ಚಾಗುವುದು. ಒಂದು ಸಲ ಮಳೆ ತಪ್ಪಿಸಿದರೂ ಬೆಳೆಗಳು ಬಾಡುವುದಿಲ್ಲ. ೩೦೦ಕ್ಕೂ ಹೆಚ್ಚು ಅಡಿ ಆಳಕ್ಕೆ ಹೋಗಿರುವ ಅಂತರ್ಜಲದ ಮಟ್ಟ ಮೇಲೆರುತ್ತದೆ. ಹೊಲಕ್ಕೆ ಹಾಕಿದ ಗೊಬ್ಬರ ಹಾಗೂ ಪೋಷಕಾಂಶಗಳು ಮಣ್ಣಿನೊಡನೆ ಕೊಚ್ಚಿಕೊಂಡು ಇನ್ನೊಂದು ಹೊಲಕ್ಕೆ ಹೋಗುವುದನ್ನು ತಡೆಯಬಹುದಾಗಿದೆ. ನದಿ ಮತ್ತು ಕೆರೆಗಳು ಹಾಗೂ ಆಣೆಕಟ್ಟುಗಳಲ್ಲಿ ಹೂಳು ತುಂಬುವ ಸಮಸ್ಯೆ ನಿವಾರಣೆಯಾಗುವುದು. ಹೊಲದಲ್ಲಿದ್ದ ಏರುತಗ್ಗುಗಳು ಸಮನಾಗಿ ಹೊಲದಲ್ಲಿ ಬೆಳೆಯು ಒಂದೇ ರೀತಿಯಲ್ಲಿ ಅಂದರೆ ಸಮನಾಗಿ ಬೆಳೆಯುತ್ತವೆ. ಅಲ್ಪ ಮಳೆಯಿಂದಲೂ, ಬರಗಾಲದಲ್ಲೂ ಸ್ವಲ್ಪವಾದರೂ ಇಳುವರಿ ಬರುತ್ತದೆ.

ಇಂಥ ಹಲವಾರು ಪ್ರಯೋಜನಗಳುಳ್ಳ ಬದುವು ಮತ್ತು ಹಾಳೆಗಳನ್ನು ಇತ್ತೀಚೆಗೆ ವ್ಯರ್ಥ ಎಂದು ಭಾವಿಸಿ, ಹಾಳೆ ಬದುವುಗಳಿರುವ ಜಾಗೆಯಲ್ಲಿ ಇನ್ನಷ್ಟು ಬೆಳೆ ತೆಗೆಯುವ ಅತಿಯಾಶೆಯಿಂದ ಹಾಳೆ ಮತ್ತು ಬದುವುಗಳನ್ನು ಹೊಡೆದು ತೆಗೆದು ಹಾಕುತ್ತಿದ್ದಾರೆ. ಇದು ಅಪಾಯಕಾರಿ ಪ್ರವೃತ್ತಿ ಎನಿಸಿದೆ.

'ಚರಗ' - ಜೈವಿಕ ಕೀಟ ಹತೋಟಿ ವಿಧಾನ

ಹಬ್ಬ ಹರಿದಿನಗಳ ಆಚರಣೆಗೂ ಬೆಳೆಗಳನ್ನು ಬಾಧಿಸುವ ಕೀಟಗಳ ನಿಯಂತ್ರಣಕ್ಕೂ ಎಲ್ಲಿಂದೆಲ್ಲಿಯ ಸಂಬಂಧ! ಎಂದು ಆಶ್ಚರ್ಯ ಪಡಬೇಕಾಗಿಲ್ಲ. ಋತುಮಾನಕ್ಕನುಸರಿಸಿ ಮಾಡುವ ಬೆಳೆಗಳ ಬೆಳವಣಿಗೆಯ ಹಂತ ಹಂತಗಳಲ್ಲಿ ಬರುವ ಹುಣ್ಣಿಮೆ, ಅಮವಾಸೆಗಳು ಮತ್ತು ಕಾಲಗಳು ಪರಿಣಾಮ ಬೀರುತ್ತವೆ. ಪಂಚಮಿ ಹಬ್ಬದಲ್ಲಿ 'ಕೆರ್ಯಾಂಬಲಿ', ಜೋಕುಮಾರನ ಹಬ್ಬದಲ್ಲಿ 'ಅಳ್ಳಾಂಬಲಿ' ಮತ್ತು ಶೀಗಿ ಹುಣ್ಣಿಮೆಯ ಸಂದರ್ಭದಲ್ಲಿ 'ಚರಗ' ಚೆಲ್ಲುವುದು ಉತ್ತರ ಕರ್ನಾಟಕದ ಪಲವಾರು ಜಿಲ್ಲೆಗಳಲ್ಲಿ ಪ್ರಚಲಿತದಲ್ಲಿದೆ.

ರಾಸಾಯನಿಕ ಕೃಷಿಯಿಂದಾಗಿ ಕೀಟ ನಾಶಕಗಳು ಹುಟ್ಟಿಕೊಂಡಿವೆ. ಸ್ಪ್ರೇ ಪಂಪುಗಳು, ಪೆಟ್ರೋಲ್ ಪಂಪುಗಳು ಹುಟ್ಟಿಕೊಂಡಿವೆ. ಹಲವಾರು ವಿದೇಶಿ ಕಂಪನಿಗಳ ಮಾಲಕರು ಇದರಿಂದ ಲಾಭ ಪಡೆದು ಶ್ರೀಮಂತರಾಗುತ್ತಿದ್ದಾರೆ. ಆದರೆ ಅವರು ಹೇಳಿದ ದರಕ್ಕೆ ಔಷಧಗಳನ್ನು ಆ ಪಂಪುಗಳನ್ನು ಖರೀದಿಸಿ ತಂದ ರೈತ ಇಂದು ಅದೇ ವಿಷ ಕುಡಿದು ಸಾಯುವ ಸ್ಥಿತಿಗೆ ಬಂದಿದ್ದಾನೆ. ಕೀಟಗಳು ಮಾತ್ರ ಸಾಯುತ್ತಿಲ್ಲ, ಕೀಟಗಳ ಉಪದ್ರವದಿಂದ ಬೆಳೆಗಳನ್ನು ರಕ್ಷಿಸಲು ಆಗಲಿಲ್ಲ. ಹೊಲದಲ್ಲಿ ಸಿಂಪಡಿಸಿದ ವಿಷದ ವಾಸನೆಯಿಂದ ರೈತನ ಬೆಳೆಗಳ ಮಿತ್ರರಾದ ಜೇನುಹುಳುಗಳು ಸತ್ತವು. ಕೀಟಗಳನ್ನು ಆರಿಸಿ ತಿನ್ನುವ ಪಕ್ಷಿಗಳು, ಬೆಳ್ಳಕ್ಕಿಗಳು, ಗುಬ್ಬಿಗಳು ಮೊದಲಾದವು ವಿಷದ ವಾಸನೆಗೆ ಹೊಲದ ಕಡೆಗೆ ಸುಳಿಯದಂತಾಯಿತು. ಇಂತಹ ಪರಿಸ್ಥಿತಿಯಲ್ಲಿ ನಮ್ಮ ರೈತರ ಆಚರಣೆಗಳೂ ಕೇವಲ ಧಾರ್ಮಿಕ ಸ್ವರೂಪ ತಾಳಿದವು. ಆದರೆ ನಿಜವಾಗಿಯೂ ಈ ಆಚರಣೆಗಳಲ್ಲಿ ಎಂತಹ ವೈಜ್ಞಾನಿಕತೆ ಇದೆ ಎಂಬುದು ಆಶ್ಚರ್ಯವೆನಿಸಿದರೂ ಸತ್ಯಸಂಗತಿಯಾಗಿದೆ.

ರೈತರು ಮುಂಗಾರಿ ಬಿತ್ತನೆಯನ್ನು ಜೂನ್ ತಿಂಗಳಲ್ಲಿ ಮಾಡುತ್ತಾರೆ. ಎರಡು ತಿಂಗಳಲ್ಲಿ ಪಂಚಮಿ ಹಬ್ಬ ಬರುತ್ತದೆ. ನಾಗರ ಪಂಚಮಿಯ ಸಂದರ್ಭದಲ್ಲಿ 'ಕೆರ್ಯಾಂಬಲಿ' ಎಂದು ಆಚರಿಸುವ ಹಬ್ಬವಿದೆ. ಈ 'ಕೆರ್ಯಾಂಬಲಿ' ಹೆಚ್ಚಾಗಿ ಶುಭದಿನ ಎಂಬ ನಂಬಿಕೆಯೂ ಇದೆ. ಹೊಸದಾಗಿ ಮದುವೆಯಾದ ವರನು ಕೆರ್ಯಾಂಬಲಿ ದಿವಸ ಹೆಂಡತಿಯ ಮನೆಗೆ ಹೋಗುವುದು ರೂಢಿ. ಅದೇ ದಿವಸ ವಿಧವಿಧವಾದ ಅಡುಗೆ ಮಾಡಿ, ವಿಧವಿಧವಾದ ಉಂಡಿಗಳನ್ನು ಮತ್ತು ಅರಳು, ಅರಳಿಟ್ಟು ಎಲ್ಲವನ್ನೂ ಬುಟ್ಟಿಯಲ್ಲಿ ತುಂಬಿಕೊಂಡು

ಹೊಲಕ್ಕೆ ಹೋಗುತ್ತಾರೆ. ಎತ್ತಿನ ಬಸವಣ್ಣಗಳನ್ನಿಟ್ಟು ಪೂಜೆ ಮಾಡಿ ಸುಣ್ಣ ಹಚ್ಚಿದ ಗಡಿಗೆಯನ್ನಿಟ್ಟು ಪೂಜೆ ಮಾಡಿ ನೈವೇದ್ಯ ಹಿಡಿಯುತ್ತಾರೆ. ನಂತರ ಆ ಎಲ್ಲ ಆಹಾರ ಪದಾರ್ಥಗಳನ್ನು ಚೂರು ಚೂರು ಮಾಡಿ ಹೊಲದ ತುಂಬೆಲ್ಲಾ ಸಿಂಪಡಿಸುತ್ತಾರೆ. ಎರಡು ತಿಂಗಳ ಬೆಳೆಯಿರುವಾಗ ಕೀಟಗಳು ಮರಿ ಹಂತದಲ್ಲಿರುತ್ತವೆ. ಈ ಸಂದರ್ಭದಲ್ಲಿ ಕೀಟಗಳತ್ತ ಪಕ್ಷಿಗಳನ್ನು ಆಕರ್ಷಿಸಿ ತಿನ್ನುವಂತೆ ಮಾಡುವ ಜೈವಿಕ ಕೀಟ ಹತೋಟಿ ವಿಧಾನ ಇದಾಗಿದೆ. ಇದರಂತೆಯೆ ಜೋಕುಮಾರನ ಹಬ್ಬದಲ್ಲಿ 'ಅಳ್ಳಾಂಬಲಿ' ಎಂದು ಹೊಲದಲ್ಲಿ ಚರಗ ಚೆಲ್ಲುವ ಸಂಪ್ರದಾಯವಿದೆ.

ಶೀಗಿ ಹುಣ್ಣಿಮೆಗೆ ಮತ್ತೆ 'ಚರಗ' ಚೆಲ್ಲುವ ಸಂಪ್ರದಾಯವಿದೆ. ಶೀಗಿ ಹುಣ್ಣಿಮೆಯ ಹಿಂದಿನ ದಿವಸ ರಾತ್ರಿಯೆಲ್ಲ ವಡೆ, ಗಾರಿಗಿ, ಹುರೆಕ್ಕಿ ಹೋಳಿಗಿ, ಚಕ್ಕುಲಿ ಮೊದಲಾದ ದಿನಸುಗಳನ್ನು ಕರಿದು ತಯಾರಿಸುತ್ತಾರೆ. ಬೆಳಿಗ್ಗೆ ಐದು ನಮೂನೆಯ ಕಾಯಿಪಲ್ಯ ಅನ್ನ ಇತ್ಯಾದಿ ಅಡುಗೆ ಮಾಡಿಕೊಂಡು ಬುಟ್ಟಿಯಲ್ಲಿ ತುಂಬಿಕೊಂಡು ಹೋಗುತ್ತಾರೆ. ಹೊಲದಲ್ಲಿ ಬನ್ನಿಯ ಅಥವಾ ಬೇವಿನ ಗಿಡವಿದ್ದಲ್ಲಿ ಐದು ಕಲ್ಲುಗಳನ್ನಿಟ್ಟು ಸುಣ್ಣ, ಕೆಂಪು ಮಣ್ಣಿನ ಬಣ್ಣ ಮತ್ತು ಕುಂಕುಮ ಹಚ್ಚಿ ಪೂಜೆ ಮಾಡುತ್ತಾರೆ. ನೈವೇದ್ಯ ಸಮರ್ಪಿಸಿ ನಂತರ ಎಲ್ಲ ಆಹಾರ ಪದಾರ್ಥಗಳನ್ನು ಚೂರು ಚೂರು ಮಾಡಿ ಹೊಲದ ತುಂಬ ಸಿಂಪಡಿಸಿ (ಚೆಲ್ಲಿ) ಬರುತ್ತಾರೆ. ಇವೆಲ್ಲ ಧಾರ್ಮಿಕ ಆಚರಣೆಗಳಲ್ಲ. ಮೂಢನಂಬಿಕೆಗಳಲ್ಲ. ಅಂಧಾನುಕರಣೆಯೂ ಅಲ್ಲ. ಭೂಮಿ ತಾಯಿಯ ಮಡಿಲಲ್ಲಿ ಬೆಳೆದು ನಿಂತ ಹಚ್ಚಹಸುರಾದ ಬೆಳೆಯು ಕಂಗೊಳಿಸುತ್ತದೆ. ಬಸಿರು ಹೆಂಗಸಿಗೆ ಹಸಿರು ಸೀರೆ ಉಡಿಸಿ ಬಯಕೆ ಊಟ ಉಣಿಸುವ ಸಂಪ್ರದಾಯವಿದೆ. ಅದರಂತೆ ಬಸಿರುಡುಗೆ ತೊಟ್ಟ ಭೂದೇವಿಗೆ ಬಯಕೆಯೂಟ ಉಣಿಸುತ್ತಾರೆ ಎಂಬುದು ನಂಬುಗೆ. ಆದರೆ ಇದರಲ್ಲಿ ಸಂಪ್ರದಾಯವನ್ನೋ ಮೂಢನಂಬಿಕೆಯನ್ನೋ ಕಾಣುವವರೇ ಹೆಚ್ಚು. ಇದು ಸಂಪ್ರದಾಯವೆನಿಸಿದರೂ, ಇದರಲ್ಲಿ ವೈಜ್ಞಾನಿಕ ಅಂಶವಿದೆ. ಇದೇ ಜೈವಿಕ ಕೀಟ ಹತೋಟಿ ವಿಧಾನ. ಹಿಂಗಾರಿ ಹಂಗಾಮಿನಲ್ಲಿ ಎಳ್ಳು ಅಮವಾಸ್ಯೆಯ ದಿವಸ ಧಾರವಾಡ ಜಿಲ್ಲೆಯ ರೈತರು ಮೇಲೆ ತಿಳಿಸಿದ ರೀತಿಯಲ್ಲಿ ಚರಗ ಚೆಲ್ಲುವ ಸಂಪ್ರದಾಯವಿದೆ.

ಹೊಲದಲ್ಲಿರುವ ಬೆಳೆಗಳ ಆಯಾ ಹಂತಗಳಲ್ಲಿ ಕೀಟಗಳ ವಂಶ ವೃದ್ಧಿಯಾಗುವ ವಿವಿಧ ಹಂತಗಳಲ್ಲಿ ಇಂತಹ ಚರಗ ಚೆಲ್ಲುವ ಸಂಪ್ರದಾಯ ನಿಜವಾಗಿಯೂ ವೈಜ್ಞಾನಿಕ ಕ್ರಮವಾಗಿದೆ. ಎತ್ತರದಲ್ಲಿ ಐದು ಕೋಲುಗಳನ್ನು ನೆಡಿಸಿ ಅದಕ್ಕೆ ಐದು ಸುಣ್ಣ ಹಚ್ಚಿದ ಗಡಿಗೆಗಳನ್ನು ಇಡುವುದು ರೂಢಿ. ಆ ಸುಣ್ಣದ ಬಿಳಿ ಬಣ್ಣಕ್ಕೆ ಪಕ್ಷಿಗಳು ಆಕರ್ಷಿತವಾಗಿ ಬಂದು ಆ ಗಡಿಗೆಗಳ ಮೇಲೆ ಕೂಡ್ರುತ್ತವೆ. ಆಗ ಹೊಲದಲ್ಲಿ ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿ ಚೆಲ್ಲಿದ ಆಹಾರ ಪದಾರ್ಥಗಳ ವಾಸನೆ ಪಕ್ಷಿಗಳಿಗೆ ಬಡಿಯುತ್ತದೆ. ಆ ಆಹಾರ

ಪದಾರ್ಥಗಳನ್ನು ತಿನ್ನಲು ಹೋದಾಗ ಪಕ್ಷಿಗಳಿಗೆ ಬೆಳೆಗಳಲ್ಲಿದ್ದ ಕೀಟಗಳ ವಾಸನೆ ಬರುತ್ತದೆ. ಹೀಗಾಗಿ ಅವು ಕೀಟಗಳನ್ನು ತಿನ್ನತೊಡಗುತ್ತವೆ. ರಾಸಾಯನಿಕ ಔಷಧಿಗಳನ್ನು ಸಿಂಪಡಿಸಿದ ಹೊಲದಲ್ಲಿ ಪಕ್ಷಿಗಳಿಗೆ ಏನೂ ಆಕರ್ಷಣೆ ಇರದು. ಬದಲಾಗಿ ವಿಷದ ವಾಸನೆ ಬರುವುದರಿಂದ ಪಕ್ಷಿಗಳು ಆ ಹೊಲದಲ್ಲಿ ನಿಲ್ಲಲಾರವು.

ಉಪಕಾರಿ ಕೀಟಗಳು ಮತ್ತು ಅಪಕಾರಿ ಕೀಟಗಳು ಹೊಲದಲ್ಲಿ ಇರುತ್ತವೆ. ಉಪಕಾರಿ ಕೀಟಗಳು ಅಪಕಾರಿ ಕೀಟಗಳನ್ನು ತಿಂದು ಬೆಳೆಗಳನ್ನು ರಕ್ಷಿಸುವ ವಿಧಾನಕ್ಕೆ ಜೈವಿಕ ಕೀಟ ಹತೋಟಿ ಕ್ರಮ ಎನ್ನುತ್ತಾರೆ. ಭಕ್ಷಕ ಮತ್ತು ರಕ್ಷಕ ಕೀಟಗಳೆಂದೂ ಅಪಕಾರಿ ಮತ್ತು ಉಪಕಾರಿ ಕೀಟಗಳೆಂದೂ ಕರೆಯುತ್ತಾರೆ. ಅಪಕಾರಿ ಕೀಟಗಳನ್ನು ಕೊಲ್ಲಲು ಕೀಟನಾಶಕಗಳನ್ನು ಬಳಸಿದಾಗ ಉಪಕಾರಿ ಕೀಟಗಳು ಬೇಗನೆ ಸಾಯುತ್ತವೆ. ಅಪಕಾರಿ ಕೀಟಗಳು ಬೇಗನೆ ಸಾಯಲಾರವು. ಪ್ರಪಂಚದ ನಿಯಮವೆ ಹಾಗಿದೆ ಎನಿಸುತ್ತದೆ. ಬೇಕಾದದ್ದನ್ನು ಎಷ್ಟೇ ರಕ್ಷಣೆ ಮಾಡಿದರೂ ಬೇಗ ಸಾಯುತ್ತದೆ. ಬೇಡಾದದ್ದು ಯಾವ ರಕ್ಷಣೆ ಇಲ್ಲದೆಯೂ ಎಂತಹ ದುಷ್ಟಕ್ರಮ ಜರುಗಿಸಿದರೂ ಸಾಯದೆ ಹಾಗೆಯೆ ಉಳಿಯುತ್ತದೆ.

※

ಸೆಗಣಿ ಗೊಬ್ಬರದ ಮಹತ್ವ

ಸಾವಯವ ಕೃಷಿ ಎಂದರೆ ಸಹಜ ಕೃಷಿ ಅಲ್ಲ. ಕೃತಕವಾದದ್ದು ಕೃತ್ರಿಮವಾದದ್ದರ ಬಳಕೆ ಏನೂ ಇಲ್ಲ. ಸಾವಯವ ಕೃಷಿಯಲ್ಲಿ ಬೆಳೆದದ್ದು 'ಪುಣ್ಯದ ಫಲ' ಎಂಬ ನಂಬಿಕೆಯೂ ಇದೆ. ರಾಸಾಯನಿಕ ಕೃಷಿಯು ಸಿಜರಿನ್ ಮಾಡಿ ತೆಗೆದ ಕೂಸಿನಂತೆ. ಒತ್ತಾಯದ ಹೆರಿಗೆಯಾಗಿದೆ. ರಾಸಾಯನಿಕ ಕೃಷಿಯಲ್ಲಿ ಬೆಳೆದ ಫಲಗಳನ್ನು ಉಣ್ಣುವವರ ಮನಸ್ಸು ಸಹಿತ ರಾಕ್ಷಸಿ ಸ್ವರೂಪದ್ದೆಂಬ ಭಾವನೆ ಇದೆ. ಸಾವಯವ ರೀತಿಯಲ್ಲಿ ಬೆಳೆದದ್ದು ಸಾತ್ವಿಕ ಆಹಾರವಾಗಿದೆ.

ಪ್ರತಿ ವರ್ಷ ದೀಪಾವಳಿಯ ಸಂದರ್ಭದಲ್ಲಿ ದನಗಳ ಸೆಗಣಿಯನ್ನು ಹಟ್ಟೆವ್ವನ ಹೆಸರಿನಲ್ಲಿ ಪೂಜಿಸಲಾಗುತ್ತದೆ. ದೀಪಾವಳಿ ಹಬ್ಬವನ್ನು ರೈತರು ಹಟ್ಟೆವ್ವನ ಹಬ್ಬ ಎಂದೂ ಕರೆಯುತ್ತಾರೆ. ದನಗಳ ಸೆಗಣಿಯ ಮಹತ್ವವನ್ನು ಅರಿತ ರೈತರು ಹೀಗೆ ಮಾಡುವುದರಲ್ಲಿ ಮೂಢ ನಂಬಿಕೆ ಅಥವಾ ಕಂದಾಚಾರ ಯಾವುದೂ ಇಲ್ಲ. ದನಗಳ ಸಗಣಿಯಷ್ಟೇ ಮೂತ್ರವೂ ಅತ್ಯಮೂಲ್ಯವಾಗಿದೆ. ಸಗಣಿ ಮತ್ತು ಮೂತ್ರಗಳಲ್ಲಿ ಔಷಧೀಯ ಗುಣವೂ ಇದೆ. ಸೆಗಣಿಯ ವಾಸನೆಯಲ್ಲಿ ಕ್ಷಯರೋಗ ನಿರೋಧಕ ಶಕ್ತಿ ಇದೆ ಎಂದು ಸಂಶೋಧಕರು ಹೇಳುತ್ತಾರೆ. ದನಗಳ ಸೆಗಣಿ ಹಾಗೂ ಮೂತ್ರಗಳನ್ನು ಬೀಜೋಪಚಾರಕ್ಕೆ ಬಳಸಿ ಬೀಜಗಳಿಂದ ಬರುವ ರೋಗಗಳನ್ನು ಯಶಸ್ವಿಯಾಗಿ ತಡೆಗಟ್ಟಲು ಬರುತ್ತದೆ. ಕೀಟ ನಾಶಕವಾಗಿ, ರೋಗ ನಿರೋಧಕ ಔಷದಿಯಾಗಿ ಸೆಗಣಿ ಮತ್ತು ಮೂತ್ರಗಳನ್ನು ರೈತರು ಬಳಸುತ್ತಿದ್ದರು. ಹತ್ತಿಯ ಬೀಜಗಳನ್ನು ಕೋಣಗಳ ಸೆಗಣಿಯನ್ನು ಲೇಪಿಸಿ ಬಿತ್ತುವುದು ನಮ್ಮ ರೈತರಿಗೆ ಹೊಸದೇನಲ್ಲ. ಜೋಳದ ಬೀಜಗಳನ್ನು ದನಗಳ ಮೂತ್ರದಲ್ಲಿ ನೆನೆಸಿಟ್ಟು ನಂತರ. ನೆರಳಿನಲ್ಲಿ ಆರಿಸಿ ಬಿತ್ತಿದರೆ ಜೋಳದ ತೆನೆಗೆ ಬರುವ ಕಾಡಿಗೆ ರೋಗವನ್ನು ತಡೆಗಟ್ಟಲು ಸಾಧ್ಯವಿದೆ.

ಸೆಗಣಿಯು ಗೊಬ್ಬರ : ಸೆಗಣಿಯು ಗೊಬ್ಬರವನ್ನು ನಮ್ಮ ಹಿತ್ತಲಿನಲ್ಲಿ ತಯಾರಿಸಬಹುದು. ಸಗಣಿಯ ಗೊಬ್ಬರ ತಯಾರಿಸಲು ನಮ್ಮ ದನಕರುಗಳ ಸೆಗಣಿ, ಮೂತ್ರ, ದನಕರುಗಳು ತಿಂದು ಬಿಟ್ಟ ಕಣಿಕೆ, ಚಿಪ್ಪಾಡಿ, ಹೊಟ್ಟಿನ ಪುಡಿ, ಕೆರೆಯ ಮಣ್ಣು, ಹುಲ್ಲು ಮತ್ತು ಹಸಿರೆಲೆಗಳು ಬೇಕಾಗುತ್ತವೆ. ೩ ಅಡಿಗಿಂತ ಆಳವಾಗಿರದ ತಗ್ಗಿನಲ್ಲಿ ಇವುಗಳನ್ನೆಲ್ಲ ಬಳಸಿ ನಾವೇ ಗೊಬ್ಬರ ತಯಾರಿಸಲು ಬರುತ್ತದೆ. ಯಾವುದನ್ನೂ ಕೊಂಡು

ತರಬೇಕಾಗಿಲ್ಲ. ಯಾವ ಕಾರ್ಖಾನೆಗೂ ಹೋಗುವ ಅವಶ್ಯಕತೆ ಇಲ್ಲ. ಬೆಲೆ ಏರಿಕೆಯ ಭಯವಿಲ್ಲ. ಸೆಗಣಿಯ ಗೊಬ್ಬರ ತಯಾರಿಸುವ ರೈತರು ಎರಡು ಸಂಗತಿಗಳನ್ನು ಗಮನಿಸಬೇಕು. ಮೊದಲನೆಯದು ಗೊಬ್ಬರವು ಕಳಿತಿರಬೇಕು. ಕೊಳೆತಿರಬಾರದು. ಎರಡನೆಯದು ಸೆಗಣಿಯನ್ನು ಬುಟ್ಟಿಯಲ್ಲಿ ಇಡಿಯಾಗಿ ತುಂಬಿ ತಿಪ್ಪೆಗೆ ಹಾಕಬಾರದು. ಸೆಗಣಿಯನ್ನು ನೀರಿನೊಡನೆ ಬೆರೆಸಿ ಕಸಕಡ್ಡಿಗಳ ಮೇಲೆ ಸಿಂಪಡಿಸಿದರೆ ತುಳಿತ ಉತ್ತಮ ಸೆಗಣಿಯ ಗೊಬ್ಬರ ದೊರಕುತ್ತದೆ. ಚೆನ್ನಾಗಿ ಕಳಿತ ಸೆಗಣಿಯ ಗೊಬ್ಬರದಲ್ಲಿ ಸೂಕ್ಷ್ಮಾಣು ಜೀವಿಗಳು ಮತ್ತು ಪೋಷಕಾಂಶಗಳು ನಾಶವಾಗದೆ ಜೀವಂತವಾಗಿರುತ್ತವೆ. ಸೆಗಣಿ ಗೊಬ್ಬರವನ್ನು ಹೊಲಕ್ಕೆ ಹಾಕಿದಾಗ ಬಹಳ ದಿವಸಗಳವರೆಗೆ ಗುಂಪಿಗಳಾಗಿ ಬಿಡಬಾರದು. ಹೀಗೆ ಮಾಡುವುದರಿಂದ ಬೇಸಿಗೆಯ ಪ್ರಖರವಾದ ಬಿಸಿಲಿಗೆ ಗೊಬ್ಬರದಲ್ಲಿರುವ ಸೂಕ್ಷ್ಮ ಪೋಷಕಾಂಶಗಳು ನಾಶವಾಗುತ್ತವೆ ಮತ್ತು ಸಾರಜನಕದ ಅಂಶವು ಆರಿ ನಷ್ಟವಾಗುವದು. ಆದ್ದರಿಂದ ಬಿತ್ತನೆಗೆ ಮುಂಚಿತವಾಗಿ ಹೊಲದಲ್ಲಿ ಹರಡಿ ಮಣ್ಣಿನಲ್ಲೇ ಬೆರೆಸಬೇಕು. ಬಿತ್ತುವ ಮುಂಚೆ ಅಂದರೆ ಒಂದು ತಿಂಗಳು ಮೊದಲೇ ಗೊಬ್ಬರ ಮಣ್ಣಿನಲ್ಲಿ ಬೆರೆಸಿಡಬೇಕು.

ಎಲ್ಲ ಹೊಲಗಳಿಗೂ ಸೆಗಣಿಯ ಗೊಬ್ಬರ ಎಲ್ಲಿಂದ ತರಬೇಕು? ಎಂಬುದು ಬಹಳ ಜನಕ್ಕೆ ಆತಂಕದ ಪ್ರಶ್ನೆಯಾಗಿದೆ. ಸೆಗಣಿಯ ಗೊಬ್ಬರ ಒಮ್ಮೆ ಹಾಕಿದರೆ ಹೊಲದಲ್ಲಿ ಅದರ ಸತ್ವವು ಮೂರು ನಾಲ್ಕು ವರ್ಷಗಳ ತನಕ ಬೆಳೆಗಳಿಗೆ ಲಭ್ಯವಾಗುತ್ತದೆ. ರಾಸಾಯನಿಕ ಗೊಬ್ಬರದಂತೆ ಪ್ರತಿ ಬೆಳೆಗೆ ಪುನಃ ಪುನಃ ಹಾಕುವಂತಿಲ್ಲ. ಮೇಲು ಗೊಬ್ಬರವಾಗಿ ಸಾರಜನಕದಂತಹ ಗೊಬ್ಬರವನ್ನು ಕೊಡಬೇಕಾದ ಅವಶ್ಯಕತೆ ಇಲ್ಲ. ಸೆಗಣಿಯ ಗೊಬ್ಬರ ಹಸುವಿನ ಹಾಲು ಇದ್ದಂತೆ. ಹಾಲು ಕುಡಿದ ಮನುಷ್ಯ ಆರೋಗ್ಯವಂತನೂ, ದಷ್ಟಪುಷ್ಟನೂ ಆಗಿ ಬೆಳೆಯುವಂತೆ 'ಸೆಗಣಿಯ ಗೊಬ್ಬರ ಹಾಕಿ ಬೆಳೆಯ ಅಬ್ಬರ ನೋಡು' ಎಂಬ ಗಾದೆ. ಮಾತು ಪ್ರಚಲಿತವಿದೆ.

ಸೆಗಣಿಯ ಗೊಬ್ಬರ ಹಾಕುವುದರಿಂದ ರೈತರಿಗೆ ಸಾಲದ ಹೊರೆ ಇಲ್ಲದಾಗುವುದು. ಹೊಲದ ಸತ್ವ (ಪಿ.ಎಚ್.) ಹಾಳಾಗದೆ ಫಲವತ್ತಾಗುವುದು. ಹೊಲದ ಮಣ್ಣಿನ ತೇವಾಂಶ ಬೇಗನೆ ಆರಿ ಹೋಗುವುದಿಲ್ಲ. ಹುಲುಸಾದ ಬೆಳೆಯಿಂದ ಕಾಳುಗಳು ರಸಭರಿತವಾಗಿ ಹೆಚ್ಚು ಇಳುವರಿ ಬರಲು ಕಾರಣವಾಗುತ್ತದೆ. ಸಗಣಿಯ ಗೊಬ್ಬರ ಹಾಕಿದ ಹೊಲ ಬಿರುಸಾಗದೆ ಮೃದುವಾಗಿ ಬೆಳೆಯ ಬೇರುಗಳಿಗೆ ಗಾಳಿ ಆಡಲು ಅನುಕೂಲವಾಗುತ್ತದೆ. ಹೊಲದಲ್ಲಿ ಸಾವಯವ ಪದಾರ್ಥಗಳು ಕಳಿತು ಎರೆಹುಳುಗಳ ಸಂತತಿ ಹೆಚ್ಚಾಗುವುದು. ಹೀಗೆ ಸೆಗಣಿಯ ಗೊಬ್ಬರ ಹಾಕಿದ ಹೊಲ ಬಿರುಸಾಗದೆ ಮೃದುವಾಗಿ ಬೆಳೆಯ ಬೇರುಗಳಿಗೆ ಗಾಳಿ ಆಡಲು ಅನುಕೂಲವಾಗುತ್ತದೆ. ಹೊಲದಲ್ಲಿ ಸಾವಯವ ಪದಾರ್ಥಗಳು ಕಳಿತು ಎರೆಹುಳುಗಳ ಸಂತತಿ ಹೆಚ್ಚಾಗುವುದು. ಹೀಗೆ ಸೆಗಣಿಯ ಗೊಬ್ಬರ ರೈತರ ಕೈಯಳತೆಯಲ್ಲೇ ಇರುವ ಸಾಮಗ್ರಿಗಳಿಂದ ತಯಾರಿಸಿಕೊಂಡು ಹೊಲದ ಮಣ್ಣನ್ನು ಸತ್ವಯುತ ಹಾಗೂ ಆರೋಗ್ಯಪೂರ್ಣವಾಗಿರಿಸಲು ಪೂರಕವಾಗಿದೆ. ಈ ಸೆಗಣಿ ಗೊಬ್ಬರ ತಯಾರಿಸಲು

ದನಗಳು ಅವಶ್ಯಕ. ಹಿಂದೆ ರೈತರು 'ಕಮತಾ ದನದಿಂದ ಮುಂದ ಇಲ್ಲದಿದ್ರ ಹಿಂದ' ಎಂದು ಹೇಳುತ್ತಿದ್ದರು. ದನಕರುಗಳ ಸಾಕಣೆಯಿಂದ ರೈತರಿಗೆ ಹಲವಾರು ರೀತಿಯ ಪ್ರಯೋಜನಗಳಿವೆ.

ಶ್ರೀಮಂತ ರೈತರನ್ನು ಅವರ ಮನೆಯಲ್ಲಿರುವ ಎತ್ತುಗಳ ಮೇಲೆ ಗುರುತಿಸುತ್ತಿದ್ದರು. ಆರೆತ್ತು, ಎಂಟೆತ್ತು, ಹದಿನಾರೆತ್ತು ಇರುವ ರೈತನದು ದೊಡ್ಡ ಕಮತ ಎನ್ನುತ್ತಿದ್ದರು. ಮನೆಯಲ್ಲಿ ಹಸು, ಎಮ್ಮೆಗಳಿದ್ದರೆ ಅವು ನಾವು ತಿಂದು ಬಿಟ್ಟ ಕಣಿಕೆ ಹೊಟ್ಟು ಮತ್ತು ಹುಲ್ಲು ತಿಂದು, ಹೈನು, ಹಾಲು ಕೊಡುವುದರ ಜೊತೆಗೆ ಗಳೆ ಹೊಡೆಯಲು ಎತ್ತುಗಳನ್ನು ಕೊಡುತ್ತವೆ. ಅದೇ ದನಕರುಗಳ ಸೆಗಣಿ ಮತ್ತು ಮೂತ್ರ ಹಾಕುವುದರಿಂದ ಉತ್ತಮ ಸಾವಯವ ಗೊಬ್ಬರ ದೊರಕುವುದು. ರೈತರಿಗೆ ಒಕ್ಕಲುತನದ ಜೊತೆಗೆ ಉಪಕಸುಬಾಗಿ ಹೈನುಗಾರಿಕೆ ಮಾಡಬಹುದಾಗಿದೆ. ಲಕ್ಷಗಟ್ಟಲೆ ಬಂಡವಾಳ ಹಾಕಿ ಟ್ರ್ಯಾಕ್ಟರ್ ತರುವುದರ ಬದಲಾಗಿ ಇಪ್ಪತ್ತು ಸಾವಿರ ಬಂಡವಾಳದಲ್ಲಿ ದನಕರುಗಳನ್ನು ಸಾಕಿದರೆ ಲಾಭದಾಯಕ ಒಕ್ಕಲುತನಕ್ಕೆ ಪೂರಕವಾಗುವುದು.

ಸೆಗಣಿ ಗೊಬ್ಬರ ತಯಾರಿಸುವ ವಿಧಾನ :

ಸೆಗಣಿ ಗೊಬ್ಬರ ಸಂಗ್ರಹಿಸುವ ಜಾಗೆಗೆ "ತಿಪ್ಪೆ" ಎಂದು ಹೆಸರು. ಈ ತಿಪ್ಪೆಗಳು ಹೆಚ್ಚಾಗಿ ನೀರು ನಿಲ್ಲುವ ಸ್ಥಳಗಳಲ್ಲಿ ಇರುವುದಿಲ್ಲ. ಏಕೆಂದರೆ ತಿಪ್ಪೆಯಲ್ಲಿ ಸಂಗ್ರಹಿತವಾದ ತಿಪ್ಪೆ ಗೊಬ್ಬರ ಕಳಿಯಬೇಕು ಹೊರತು ನೀರು ನಿಂತು ಕೊಳೆಯಬಾರದು. ತಿಪ್ಪೆಗಳು ತಮ್ಮ ಮನೆಯಲ್ಲಿರುವ ದನಗಳ ಪ್ರಮಾಣಕ್ಕನುಸರಿಸಿ ದೊಡ್ಡವು, ಚಿಕ್ಕವು ಇರುತ್ತವೆ. ಹೆಚ್ಚಾಗಿ ಈ ತಿಪ್ಪೆಗಳು ಎರಡು, ಮೂರು ಅಡಿ ಆಳ, ಏಳೆಂಟು ಅಡಿ ಉದ್ದ ಹಾಗೂ ಐದಾರು ಅಡಿ ಅಗಲವಾಗಿರುತ್ತವೆ. ತಿಪ್ಪೆಯ ತಳಕ್ಕೆ ದನಗಳು ತಿಂದು ಬಿಟ್ಟ ದಂಟು, ಚಿಪ್ಪಾಡಿ ಹುಲ್ಲು, ಕೋಲಿ, ಹಳೆ ಕಣಿಕೆ ಬಣವೆಯಲ್ಲಿರುವ ದನಗಳು ತಿನ್ನಲಾರದ ಕಣಿಕೆ, ಕಸ, ಕಡ್ಡಿ, ಹೊಟ್ಟಿನ ಪುಡಿಗಳನ್ನು ಒಂದು ಪದರಾಗಿ ತುಂಬಿಸಬೇಕು ಅದರ ಮೇಲೆ ಸೆಗಣಿಯನ್ನು ನೀರಲ್ಲಿ ಕಲಸಿ ತೆಳುವಾಗಿಸಿ ಹರಡಬೇಕು. ಇದೇ ರೀತಿ ಪದರು ಪದರುಗಳಾಗಿ ನೆಲದಿಂದ ಎರಡು ಮೂರು ಅಡಿ ಎತ್ತರದವರೆಗೆ ಹೀಗೆ ಹಾಕುತ್ತ ಬರಬೇಕು. ಸೆಗಣಿಯನ್ನು ಬುಟ್ಟಿ ಬುಟ್ಟಿಯಾಗಿ ತಿಪ್ಪೆಗೆ ಹಾಕಬಾರದು. ದನದ ಗ್ವಾತವನ್ನು ಒಂದೇ ಕಡೆಗೆ ಸುರುವಬಾರದು. ಸೆಗಣಿಯನ್ನು ಹಿಡಿಯಷ್ಟು ಮುಷ್ಟಿಯಲ್ಲಿ ಹಿಡಿದು ಹರಡಬೇಕು. ಹೀಗೆ ಮಾಡುವುದರಿಂದ ಗೊಬ್ಬರವು ಚೆನ್ನಾಗಿ ಕಳಿಯುತ್ತದೆ. ಕೊಳೆತ ಗೊಬ್ಬರದಲ್ಲಿ ಸತ್ವಗಳು, ಸೂಕ್ಷ್ಮಾಣು ಜೀವಿಗಳು ಸತ್ತು ಹೋಗುತ್ತವೆ. ಕಾರಣ ಗೊಬ್ಬರ ಕಳಿಯಬೇಕು.

ಸೆಗಣಿ ಗೊಬ್ಬರ ಅಥವಾ ತಿಪ್ಪೆ ಗೊಬ್ಬರ ಹಾಕುವುದರಿಂದ ಬೆಳೆಗಳು ನಿಧಾನವಾಗಿ ಬೆಳೆಯುತ್ತವೆ. ಯಾವಾಗಲೂ ನಿಧಾನವಾಗಿ ಬೆಲೆಯುವ ಬೆಳೆಗಳು ಸದೃಢವಾಗಿರುತ್ತವೆ. ಸೂಕ್ಷ್ಮವಾಗಿರುವುದಿಲ್ಲ. ನಿಧಾನವಾಗಿ ಬೆಳೆದ ಬೆಳೆಗೆ ರೋಗ ಕೀಟಗಳ ಬಾಧೆಯೂ ಕಡಿಮೆ.

❊

ಹಟ್ಟಿ ಹಬ್ಬ

ದೀಪಾವಳಿ ಹಬ್ಬಕ್ಕೆ ಹಟ್ಟಿಹಬ್ಬ ಎಂದೂ ಕರೆಯುತ್ತಾರೆ. ದೀಪಾವಳಿ ಹಬ್ಬದಲ್ಲಿ ಹಟ್ಟೆವ್ವನ ಪೂಜೆ ವಿಶಿಷ್ಟ ಆಚರಣೆಯಾಗಿದೆ. ಹಟ್ಟಿ ಎಂದರೆ ಹಕ್ಕಿ. ದನಕರುಗಳನ್ನು ಕಟ್ಟುವ ಸ್ಥಳಕ್ಕೆ ಹಟ್ಟಿ(ಹಕ್ಕಿ) ಎಂದು ಕರೆಯುವದು ರೂಢಿಯಲ್ಲಿದೆ. ದೀಪಾವಳಿ ಅಮವಾಸ್ಯೆಯ ಮಾರನೆ ದಿವಸ ಪಾಡ್ಯದಂದು ಹಟ್ಟೆವ್ವನ ಪೂಜೆ ಮಾಡುವದು ಉತ್ತರ ಕರ್ನಾಟಕದಲ್ಲಿ ಸಂಪ್ರದಾಯವೆನಿಸಿದೆ. ಮನೆಯನ್ನು ಸಾರಿಸಿ ಬೆಳಿಗ್ಗೆ ದನಗಳ ಸೆಗಣೆಯಿಂದ ಹಟ್ಟೆವ್ವಗಳನ್ನು ಮಾಡುತ್ತಾರೆ. ಎರಡು ದೊಡ್ಡ ಹಟ್ಟೆವ್ವಗಳನ್ನು ಹಾಗೂ ನಲವತ್ತರಿಂದ ಐವತ್ತು ಸಣ್ಣ ಸಣ್ಣ ಹಟ್ಟೆವ್ವಗಳನ್ನು ಮಾಡುತ್ತಾರೆ. ವರ್ತುಳಾಕಾರದಲ್ಲಿ ಸಣ್ಣ ಸಣ್ಣ ಹಟ್ಟೆವ್ವಗಳನ್ನು ಎರಡು ಸಾಲಿನಲ್ಲಿ ಹಕ್ಕೆಯಲ್ಲಿ ಇಡುತ್ತಾರೆ. ಒಂದು ಕಡೆಗೆ ದಾರಿ ಬಿಡುತ್ತಾರೆ. ಇನ್ನೊಂದು ಕಡೆಗೆ ನಡುವೆ ಎರಡು ದೊಡ್ಡ ಹಟ್ಟೆವ್ವಗಳನ್ನು ಇಡುತ್ತಾರೆ. ಈ ದೊಡ್ಡ ಹಟ್ಟೆವ್ವಗೆ ಹಿರೇ ಹಟ್ಟೆವ್ವ ಎನ್ನುತ್ತಾರೆ. ಹಿರೇ ಹಟ್ಟೆವ್ವನ ನೆತ್ತಿಯಲ್ಲಿ ಆರಳಿನ ಜೋಳದ ತೆನೆ, ಉತ್ತರಾಸಿ ಕಡ್ಡಿ ಹಾಗೂ ಸಸಿಗಳನ್ನು ತುರಾಯಿಯಂತೆ ಚುಚ್ಚುತ್ತಾರೆ. ಉಳಿದ ಹಟ್ಟೆವ್ವಗಳಿಗೆ ದಂಡಿ ಹೂವು (ಚೆಂಡು ಹೂ) ಹಾಗೂ ಸೇವಂತಿಗೆ ಹೂವುಗಳನ್ನು ಮುಡಿಸುತ್ತಾರೆ. ಮನೆಯ ಹಿತ್ತಲ ಬಾಗಿಲಿಗೆ, ಮುಂಚಿ ಬಾಗಿಲಿಗೆ, ಅಡುಗೆ ಮನೆಯ ಬಾಗಿಲಿಗೆ, ದೇವರ ಮನೆ ಬಾಗಿಲಿಗೆ, ಬಚ್ಚಲು ಮನೆ ಬಾಗಿಲಿಗೆ ಹೀಗೆ ಎಲ್ಲಾ ಬಾಗಿಲುಗಳ ಮುಂದೆ ತ್ರಿಕೋನಾಕಾರದಲ್ಲಿ ಮೂರು ಮೂರು ಹಟ್ಟೆವ್ವಗಳನ್ನು ಇಡುತ್ತಾರೆ. ಅಲ್ಲದೆ ಒಲೆಯ ಮೇಲ್, ಬಚ್ಚಲು ಕಟ್ಟೆ ಮೇಲೆ ದೇವರ ಮುಂದೆ, ಹಗೆವಿನ ಮೇಲೆ ಮತ್ತು ಚಕ್ಕಡಿಯ ಮೇಲೆ ಒಂದೊಂದು ಹಟ್ಟೆವ್ವಗಳನ್ನು ಇಡುತ್ತಾರೆ. ಈ ಎಲ್ಲ ಹಟ್ಟೆವ್ವಗಳಿಂದ ಕೈ ಹದಡಗಳನ್ನು ಸುಣ್ಣದಲ್ಲಿ ಎದ್ದಿ ಆಕಳ ಹೆಜ್ಜೆ ಇಡುತ್ತಾರೆ. ಹಾಗೂ ಕೈ ಬೆರಳುಗಳ ಮೂಲಕ ಕುರಿ ಹೆಜ್ಜೆಯ ಗುರುತು ಮಾಡುತ್ತಾರೆ. ಇವೆಲ್ಲ ಹೆಜ್ಜೆ ಗುರುತುಗಳು ಹಕ್ಕೆಯಲ್ಲಿದ್ದ ಹಟ್ಟೆವ್ವನ ಮುಂದಿನ ದಾರಿಗೆ ಬಂದು ಕೂಡುತ್ತವೆ.

ಹಕ್ಕೆಯಲ್ಲಿಟ್ಟ ವರ್ತುಳಾಕಾರದ ಹಟ್ಟೆವ್ವಗಳ ನಡುವೆ ಹಿರೇ ಹಟ್ಟೆವ್ವನ ಮುಂದೆ ಕುಂಬಳಕಾಯಿ, ಹೊಸ ಕಸಬರಿಗೆ, ಹೊಸ ಹಗ್ಗ, ಆರಿಗಿಡದ ಮೇಟಿ (ಸಣ್ಣಾ ತುಂಡು) ಆರತಿಯ ದೀಪಗಳನ್ನು ಹಚ್ಚಿ ಇಟ್ಟಿರುತ್ತಾರೆ. ವರ್ತುಳಾಕಾರದ ಹಟ್ಟೆವ್ವಗಳ ಮೇಲೆ ಐದು

ಜೋಳದ ದಂಟುಗಳನ್ನು ಅಥವಾ ಕಬ್ಬಿನ ಗಳಗಳನ್ನು ಕೊಡೆಯಾಕಾರದಲ್ಲಿ ಸುತ್ತಲೂ ನಿಲ್ಲಿಸುತ್ತಾರೆ. ಎಲ್ಲಾ ಹಟ್ಟೆವ್ವಗಳನ್ನು ಗುರೆಳ್ಳ ಹೂವು, ಕುಂಕುಮ, ದಂಡಿ ಹೂವು, ಮೊಸರಿನಿಂದ ಪೂಜೆ ಮಾಡಿ ನೈವೇದ್ಯ (ಹೋಳಿಗೆ, ಕಡಬು, ಅನ್ನ, ಸಾರು, ತುಪ್ಪ ಇತ್ಯಾದಿ) ಅರ್ಪಿಸಿ ಟೆಂಗಿನಕಾಯಿ ಒಡೆದು ಹಿರೇಹಟ್ಟೆವ್ವನ ಮುಂದೆ ಇಡುತ್ತಾರೆ. ಸಂಜೆಯ ಹೊತ್ತಿಗೆ ಈ ಹಟ್ಟೆವ್ವಗಳನ್ನು ಮಾಳಿಗೆಯ ಮೇಲೆ ಹೂವು, ಅರಳಿನ ಜೋಳದ ತೆನೆ, ಉತ್ತರಾನಿ ಹೊಡೆಗಳಿಂದ ಅಲಂಕರಿಸಿ ಸಾಲಾಗಿ ಇಡುತ್ತಾರೆ. ಸಾಲಿನ ಮಧ್ಯ ಹಿರೇ ಹಟ್ಟೆವ್ವಗಳನ್ನು ಇಟ್ಟಿರುತ್ತಾರೆ.

ಇಂದಿನ ಕಂಪ್ಯೂಟರ ಯುಗದಲ್ಲೂ ವಿದೇಶಿ ಸಂಸ್ಕೃತಿಯ ಆಕ್ರಮಣದ ಹಾವಳಿಯಲ್ಲೂ ಈ ಹಟ್ಟೆವ್ವನ ಪೂಜೆ ನಿರಂತರವಾಗಿ ನಡೆದುಕೊಂಡು ಬಂದಿರುವುದು ಆಸ್ಚರ್ಯದ ಸಂಗತಿಯಾಗಿದೆ. ರೈತರ ಮನೆ ಮನೆಗಳ ಹಕ್ಕೆಯಲ್ಲಿ ಹಟ್ಟೆವ್ವ ಪೂಜೆಗೊಂಡು ಮನೆ ಮಾಳಿಗೆ ಶೃಂಗಾರಗೊಳ್ಳುತ್ತಿರುವುದು ಕೇವಲ ಮೂಢನಂಬಿಕೆಯಿಂದಲ್ಲ. "ಇಟ್ಟರೆ ಸೆಗಣಿಯಾದೆ ತಟ್ಟಿದರೆ ಕುಳ್ಳಾದೆ ತಟ್ಟದೆ ಹಾಕಿದರೆ ಹೊಲಕ್ಕೆ ಗೊಬ್ಬರವಾದೆ... ನೀನಾರಿಗಾದೆಯೋ ಎಲೆ ಮಾನವಾ?" ಎಂದು ಹಿಂದಿನ ಕವಿಗಳು ಹಾಡಿದ ಹಾಡಿನಂತೆ ದನ ಕರುಗಳ ಸೆಗಣಿಯ ಗೊಬ್ಬರದ ಮಹತ್ವವನ್ನು ಸಾರಿ ಹೇಳುತ್ತಿರುವ ಸಂಕೇತವಾಗಿ ಸೆಗಣಿಯು ಹಟ್ಟೆವ್ವ ದೇವತೆಯಾಗಿ ಪೂಜೆಗೊಳ್ಳುತ್ತಿರಬಹುದು. ರಾಸಾಯನಿಕ ಗೊಬ್ಬರಗಳನ್ನು ಬಳಸಿ ಬೇಸತ್ತ ರೈತರು ಹಟ್ಟಿ ಗೊಬ್ಬರದ ಕಡೆಗೆ ಗಮನ ಹರಿಸಲು ಹಟ್ಟೆವ್ವನ ಹಬ್ಬ ಪ್ರೇರಣೆ ನೀಡಲಿ ಎಂಬುದೇ ನನ್ನ ಆಶಯ ಹಾಗೂ ರೈತರ ಹಿತ ಬಯಸುವವರ ಆಶಯವಾದೀತೇ?

✲

ರೈತರ ನಂಬುಗೆಯ ಮಳೆರಾಯ

"ರಾಜರೊಳು ರಾಜ
ಮಹಾರಾಜ ಮಳೆರಾಜ
ಘನರಾಜ ಬೀಜ
ಸಕಲರಿಗೆ ತೆನಿರಾಜ"

ಎಂದು ಜನಪದ ಕವಿ ಹಾಡಿದಂತೆ ಮಳೆಯು ಮಳೆರಾಜ ಆಗಿದ್ದಾನೆ. ಹೊಲವು ಭೂಮಿತಾಯಿ ಆಗಿದ್ದಾಳೆ. ಆ ಮಳೆರಾಯನು ಮಳೆ ಸುರಿಸಿದಾಗಲೇ ಹೊಲದಲ್ಲಿ ಬಿತ್ತಿದ ಬೀಜ ಮೊಳಕೆಯೊಡೆದು ಭೂಮಿಯೆಲ್ಲವು ಹಸಿರಾಗುವದು. ಆ ಹಸಿರೇ ರೈತರ ಉಸಿರಾಗಿರುವದು. 'ಮಳೆ ಆದರ ಕೆಟ್ಟಿಲ್ಲ ಮಗಾ ಉಂಡರ ಕೆಟ್ಟಿಲ್ಲ' ಎಂದು ರೈತರು ಹೇಳಿದಂತೆ ಕಾಲಕಾಲಕ್ಕೆ ಮಳೆ ಆಗುತ್ತಿರಬೇಕು. ಆದರೆ ಇತ್ತೀತ್ತಲಾಗಿ ಮಳೆಗಾಲ ಕಡಿಮೆ ಆಗುತ್ತಿದೆ. ಹಿಂದೆಯೂ ಮಳೆ ಆಗದೆ ಬರಗಾಲ ಬಿದ್ದ ಉದಾಹರಣೆಗಳಿವೆ. ಕೆಲವು ವರ್ಷ ಅತಿವೃಷ್ಟಿ ಸುರಿಸಿದರೆ, ಕೆಲವು ವರ್ಷ ಅನಾವೃಷ್ಟಿಯಾಗುತ್ತದೆ. ಮಳೆ ಆಗಲಿ ಬಿಡಲಿ ಮಳೆ ಆಗಿಯೇ ತೀರುತ್ತದೆ ಎಂಬ ನಂಬಿಕೆಯಿಂದ ರೈತರು ಪ್ರತಿ ವರ್ಷಗಳೆ ಹೊಡೆದು ಹೊಲ ಹಸನು ಮಾಡುವುದನ್ನು ನಿಲ್ಲಿಸುವುದಿಲ್ಲ. 'ನಂಬಿ ಕೆಟ್ಟವರಿಲ್ಲ' ಎಂಬ ಮಾತಿನಂತೆ ರೈತರು ಮಳೆಯನ್ನು ನಂಬಿದಷ್ಟು ಯಾವ ದೇವರಾಗಲಿ, ಸರಕಾರವನ್ನಾಗಲಿ, ಮಂತ್ರಿಗಳನ್ನಾಗಲಿ, ಸಂಘಗಳನ್ನಾಗಲಿ ಮತ್ತು ಬ್ಯಾಂಕುಗಳನ್ನಾಗಲಿ ನಂಬಲಾರರು. ರೈತರ ಬ್ಯಾಂಕು, ಸರಕಾರ, ದೇವರು ಎಲ್ಲವೂ ಮಳೆರಾಯ ಒಬ್ಬನೇ ಆಗಿದ್ದಾನೆ. ಮಳೆರಾಯನೊಬ್ಬನೇ ರೈತರ ಉದ್ಧಾರಕ ಆಗಿದ್ದಾನೆ.

ಜನಪದ ಸಾಹಿತಿಗಳು ಮಳೆರಾಯನನ್ನು ಹಾಡಿ ಹರಸಿದ್ದಾರೆ. ಬೇಡಿ ಬೇಡಿ ಅಂಗಲಾಚಿದ್ದಾರೆ. 'ಸ್ವಾಮಿ ಮಳೆರಾಯ ಏ ತಂದೆ. ಯಾವ ದೇವರಿಲ್ಲ ನಿನ ಮುಂದೆ ಮದುವೆ ಮುಂಜಿ ಹಬ್ಬ ಹುಣ್ಣಿಮೆಲ್ಲ ನೀನು ಭೂಮಿಗೆ ಬಂದಂದೆ' ಮಳೆ ಬಂದಿದ್ದರೆ ಬಾಯಾರಿದ ಭೂಮಿ ಬಿರುಕು ಬಿಡುವದು. ಕೆರೆ, ಬಾಂವಿ, ಹಳ್ಳ ಹೊಳೆಗಳು ಬತ್ತುವವು. 'ಸಾಲು ಹೊಂಬಾಳೆ ಬಳಲ್ಯಾವು' ರೈತರು ಆಗಸದತ್ತ ಮುಖ ಮಾಡಿ ಮಳೆರಾಯನ

ನಿರೀಕ್ಷೆಯಲ್ಲಿ ಕೂಡ್ರುತ್ತಾರೆ. ಎಲ್ಲ ಜೀವರಾಶಿಗಳಿಗೂ ಮಳೆಯು ಚೈತನ್ಯದಾಯಿ ಆಗಿರುವಂತೆ ಹೊಸ ಜನ್ಮವನ್ನು ಕೊಡಬಲ್ಲದು ಆಗಿದೆ. ಸೃಷ್ಟಿಯ ಹೊಸತನಕ್ಕೆ ಮಳೆರಾಯ ಮಳೆ ಸುರಿಸದೆ ಇರಲಾರ. ಈ ಮಳೆಗಳ ಗುಣ ಲಕ್ಷಣಗಳನ್ನು ಹಿಂದಿನ ವರ್ಷಗಳಲ್ಲಿ ಆಗಿರುವ ಮಳೆಗಳನ್ನು ಆಧರಿಸಿ ರೈತರು ಆಯಾ ಹಂಗಾಮಿನಲ್ಲಿ ಬೆಳೆಗಳನ್ನು ಮಾಡುತ್ತ ಬಂದಿದ್ದಾರೆ. ಮಳೆಗಳ ಹಾಲಚಾಲವನ್ನು, ಪರಿಣಾಮಗಳನ್ನು ಮತ್ತು ಬಲಾಬಲಗಳನ್ನು ಅನುಭವಿಕ ರೈತರು ದಾಖಲಿಸಿದ್ದಾರೆ. ಅವು ಗಾದೆಯ ಮಾತುಗಳೇ ಆಗಿರಬಹುದು. ಜನಪದ ಸಾಹಿತಿಗಳ ಶ್ರದ್ಧೆ ನಿಷ್ಠೆಯ ಸಂಕೇತಗಳಾಗಿರಬಹುದು. ಅವು ದಿನನಿತ್ಯದ ಜೀವನದಲ್ಲಿ ಮೊರಹೊಮ್ಮಿದ ಆಡುನುಡಿಗಳೂ ಆಗಿರಬಹುದು. ಆ ಮಾತುಗಳು 'ವೇದ ಸುಳ್ಳಾದರೂ ಗಾದೆ ಸುಳ್ಳಾಗದ' ಸತ್ಯ ಮಾತುಗಳು!

ಪಂಚಾಂಗಗಳಲ್ಲೂ ಮಳೆಗಳ ನಕ್ಷತ್ರಗಳ ಬಗ್ಗೆ ಮಳೆ ಬರುವ ದಿನಗಳ ಬಗ್ಗೆ ಇಷ್ಟು ಆಣೆ ಮಳೆ ಇಷ್ಟು ಆಣೆ ಗಾಳಿ ಎಂದೂ ದಾಖಲಿಸಿರುತ್ತಾರೆ. ಆಯಾ ಮಳೆಗಳ ವಾಹನಗಳ ಉಪಮೆಗಳಿಂದ ಮಳೆಯ ಪ್ರಮಾಣವನ್ನು ನಿರೀಕ್ಷೆ ಮಾಡುತ್ತಾರೆ. ಇಂದಿನ ವೈಜ್ಞಾನಿಕ ಯುಗದಲ್ಲೂ, ರೈತರು ನಂಬಿದ ಮಳೆರಾಯನ ಮುನ್ಸೂಚನೆಗಳು ಜನಪದ ಸಾಹಿತ್ಯದಲ್ಲಿ ದಾಖಲಿಸಿದಂತೆ ಆಗುತ್ತಿವೆ ಅಥವಾ ಅವರ ಅನಿಸಿಕೆಯಂತೆ ಮಳೆಯ ಸ್ವಭಾವ ಕಂಡು ಬರುತ್ತವೆ. ಇದು ಆಶ್ಚರ್ಯ ಎನಿಸಿದರೂ ಸತ್ಯ ಸಂಗತಿಯಾಗಿದೆ.

ನಿಸರ್ಗ, ಮಳೆಗಾಲ, ಗಾಳಿ, ಬಿರುಗಾಳಿ ಯಾರ ಕೈಯಲ್ಲೂ ಸಿಕ್ಕಿಲ್ಲ. ಪ್ರವಾಹ, ಭೂಕಂಪ, ಜ್ವಾಲಾಮುಖಿ ಮತ್ತು ಬರಗಾಲ ಯಾರಿಗೂ ಹೇಳಿ ಕೇಳಿ ಬರುವುದಿಲ್ಲ. ಇಂದಿನ ಕಂಪ್ಯೂಟರ್ ವಿಜ್ಞಾನಿಗಳೆಲ್ಲರಿಗೂ ಇದು ದೊಡ್ಡ ಸವಾಲಾಗಿದೆ. ಅದೇನೇ ಇರಲಿ ರೈತರ ಅನುಭವ ಮಾತ್ರ ರೈತರಿಗೆ ದಾರಿ ತೋರಿಸಬಲ್ಲದು. ಯಾವ ಹಂಗಾಮಿನಲ್ಲಿ ಯಾವ ಮಳೆ ಆಗುವದು ಅಥವಾ ಇಲ್ಲ ಎಂಬ ಅಂದಾಜಿನ ಮೇಲೆ ರೈತರು ಆಯಾ ಬೆಳೆಗಳನ್ನು ಮಾಡುತ್ತ ಬಂದಿದ್ದಾರೆ. ಯಾವ ಬೆಳೆ ಯಾವ ಮಳೆಗೆ ಚೆನ್ನಾಗಿ ಬರುವದು. ಯಾವ ಮಳೆ ಬೆಳೆಗೆ ಹಾನಿಕರ ಎಂಬ ಬಗ್ಗೆ ರೈತರಲ್ಲಿ ತಮ್ಮದೇ ಆದ ನಂಬಿಕೆಗಳಿವೆ.

ದೂರದರ್ಶನವಾಗಲಿ, ರೇಡಿಯೋಗಳಾಗಲಿ ರೈತರಿಗೆ ಹವಾಮಾನ ಮುನ್ಸೂಚನೆ ಕೊಡಬಲ್ಲವು. ಅವು ಕೊಡುವ ಮುನ್ಸೂಚನೆಯ ಮಾದರಿಯೊಂದು ಹೀಗಿದೆ. 'ಇಲ ಘಂಟೆಗಳಲ್ಲಿ ಉತ್ತರ ಒಳನಾಡಿನಲ್ಲಿ ಸಾಧಾರಣದಿಂದ ಭಾರೀ ಮಳೆ ಆಗಲಿದೆ ಎಂದರೆ ಮಳೆ ಬಹಳ ಆದೀತು ಎಂಬಂತಾಯಿತು. ಇಲ್ಲ ಎಂದಂತೂ ಆಯಿತು. ಇದು ಅಶ್ವತ್ಥಾಮೋಹತಾಃ ಕುಂಜರಾ ಎಂದಂತೆ ಅಲ್ಲವೆ?

ಪ್ರತಿ ವರ್ಷ ಯುಗಾದಿ ಪಾಡ್ಯದಂದು ರೈತರು ಹೊಸ ಹಂಗಾಮಿನ ಆರಂಭ ಮಾಡುತ್ತಾರೆ. ಹೊಸ ದಿವಸದಂದು ರೈತರು ಪೂಜೆ ಮಾಡಿ ಗಳೆ ಹೂಡುತ್ತಾರೆ. ಹೊಸ

ಮಳೆಯೇ ಅಶ್ವಿನಿ 'ಆಸನಿ ಮಳಿ ಬಂದ ಮೂರ ದಿನದಾಗ ಆದರ ಸಸಿಗೆ ನೀರಿಲ್ಲ.' ಈ ಅಶ್ವಿನಿ ಮಳೆಯು ಬಂದ ಮೂರು ದಿನಗಳಲ್ಲಿ ಆಗಬಾರದು. ನಂತರ ಆದರೆ ನಡೆದೀತು. ಒಂದು ವೇಳೆ ಹಾಗೆ ಆದದ್ದೇ ಉಂಟಾದರೆ ಸಸಿ (ಬೆಳೆ)ಗಳು ಸಣ್ಣವಿದ್ದಾಗ ನೀರಿಲ್ಲದೆ (ಮಳೆಯಿಲ್ಲದೆ) ಬಾಡುತ್ತವೆ. ಅಲ್ಲದೆ 'ಅಸನಿ ಮಳೆ ಬಂದ ಮೂರ ದಿನದಾಗ ಆದರ ಕೂಸಿನ ನೆತ್ತಿಗೆ ನೀರಿಲ್ಲ' ಎಂಬ ಮಾತೂ ಪ್ರಚಲಿತದಲ್ಲಿದೆ. ನಂತರ ಬರುವದು ಭರಣಿ ಮಳೆ. ಭರಣಿ ಮಳೆಗೆ ಭತ್ತಾ ಬಿತ್ಬೇಕು. ಭರಣಿ ಮಳೆಯಿಂದ ಧರಣಿ ಸಮೃದ್ಧಿ. ಭರಣಿ ಮಳೆಗೆ ಭತ್ತವನ್ನು ಬಿತ್ತಿದರೆ ಉತ್ತಮ ಎಂಬ ಭರವಸೆ ಇದೆ. ಮುಂದಿನ ಮಳೆಗಳು ಹೆಚ್ಚು ಅನುಕೂಲವಾಗುತ್ತವೆ. ಎಲ್ಲವೂ ಹದಾಸೀರ ಆಗುವದೆಂಬ ಭಾವನೆ ಇಲ್ಲಿದೆ. ಇದು ಮಲೆನಾಡಿನ ರೈತರ ನಂಬಿಗೆಯಾಗಿದೆ. ಭರಣಿಯ ನಂತರ ಕೃತ್ತಿಕಾ ಮಳೆ. ಅದನ್ನು 'ಕುರ್ಜಿಗ್ಯಾನ್' ಮಳ ಎಂದೂ ಕರೆಯುತ್ತಾರೆ. ನಂತರ ಬರುವದು ರೋಹಿಣಿ ಮಳೆ 'ರೋನಿ ಮಳಿಗೆ ಓಣೆಲ್ಲಾ ಕಾಳು' ಎಂಬ ಗಾದೆಯ ಮಾತಿದೆ. ರೋಹಿಣಿ ಮಳೆಗೆ ಮುಂಗಾರಿ ಹಂಗಾಮಿನ ಬಿತ್ತನೆಯಾಗಬೇಕು. ಎಲ್ಲಾ ಕಾಳುಗಳ ಬಿತ್ತನೆಗೆ ಈ ಮಳೆ ಪ್ರಶಸ್ತ ಎನಿಸಿದೆ. ಯಾಕೆಂದರೆ ಮುಂದೆ ಬರುವ ಮೃಗಶಿರಾ ಮಳೆ ಜಡಿಮಳೆಯಾಗಿದ್ದು ಜಿಟಿ ಜಿಟಿ ಹಿಡಿದು ಬಿಡುವದು. ಆಗ ಹೊಲಕ್ಕೆ ಹೋಗಲೂ ಆಗದು. ಬಿತ್ತುವದಂತೂ ದೂರದ ಮಾತು. ಕಾರಣ ರೋಹಿಣಿ ಮಳೆಗೆ ಬಿತ್ತನೆ ಮುಗಿಸಬೇಕೆಂಬುದು ಈ ಮಾತಿನ ಸಂದೇಶವಾಗಿದೆ. ಮೃಗಶಿರಾ ಮಳೆಗೆ ಮಿರಗನಜಡಿ ಎಂದೂ ಕರೆಯುತ್ತಾರೆ.

ಮಿರಗಾ ಮಿಂಚಬಾರದು ಆದರಿ ಗದ್ದರಸಬಾರದು ಎಂಬುದು ಇನ್ನೊಂದು ಗಾದೆಯ ಮಾತು ಪ್ರಚಲಿತದಲ್ಲಿದೆ. ಇವೆರಡೂ ಮಳೆಗಳು ಹೆಚ್ಚಾಗಿ ಅಬ್ಬರವಿಲ್ಲದ ಮಳೆಗಳು! ಹಿಂದೆ ಮೃಗಶಿರಾ ಮಳೆಗೆ ಸೂರ್ಯನ ದರ್ಶನವೇ ಆಗುತ್ತಿರಲಿಲ್ಲ. ನೆಲ ಮುಗಿಲೇಕಾಗಿ ಧಾರಾಕಾರವಾಗಿ ಮೃಗಶಿರಾ ಮಳೆ ಆಗುತ್ತದೆ. ಆಗ ಮಿಂಚುವದು ಅಸಾಧ್ಯ. ಆದರಿ (ಆರಿದ್ರಾ) ಮಳೆ ಗದ್ದರಸಬಾರದು. ಅಂದರೆ ಗುಡುಗು ಹಾಕಬಾರದು ಗದ್ದನಿ ಹೊಡಿಬಾರದು. ಆದ್ದರಿಂದ ಆರಿದ್ರಾ ಮಳೆ ಗುಡುಗು ಸಿಡಿಲಿನ ಅಬ್ಬರದ ಮಳೆಯಲ್ಲ ಎಂಬ ಭಾವನೆ ಇದೆ. ನಂತರ ಪುನರ್ವಸು, ಪುಷ್ಯ ಮಳೆಗಳು ಮುಂಗಾರಿಯಲ್ಲಿ ರೈತನಿಗೆ ಅತಿ ಅವಶ್ಯಕವಾದ ಮಳೆಗಳಾಗಿವೆ. ಬೆಳೆಗಳ ಸಂದಿಗ್ಧ ಹಂತದಲ್ಲಿ ಈ ಮಳೆಗಳಲ್ಲಿ ಒಂದಾದರೂ ಆದರೆ ರೈತರಿಗೆ ಲಾಭದಾಯಕ. ಹಿರಿಪಿಶ್ಯಾ ಚಿಕ್ಕಪಿಶ್ಯಾ ಎಂದೂ ಈ ಮಳೆಗಳನ್ನು ರೈತರು ಕರೆಯುತ್ತಾರೆ.

ಆಶ್ಲೇಷಾ ಮಳೆಗೆ ಗಾಳಿ ಬಹಳ. ಇದು ಚಳಿಗಾಳಿಯಾಗಿರುತ್ತದೆ. ಮಳೆಯಾಗಿ ಮಳೆಯಲ್ಲಿ ತೊಯ್ಯಿಸಿಕೊಂಡಾಗ ಗಾಳಿ ಬೀಸುವುದರಿಂದ ಚಳಿ ಹತ್ತಿ ನಡುಗಿಸುತ್ತದೆ. ಹೀಗಾಗಿ ರೈತರು 'ಆಸಿ ಬೀಸಿ (ಆಶ್ಲೇಷಾ) ಮಳೆ ಬೀಸಿ ಬೀಸಿ ಬಡಿವಾಗ ಹೇಸಿ ನನ

ಜನಮ ಹೆಣ್ಣಾಗಿ ಹುಟ್ಟಬಾರದೇ' ಎಂದು ಬಯಸಿದ್ದಾರೆ. ಹೆಂಗಸಾದರೆ ಒಲೆಯ ಮುಂದೆ ಬೆಚ್ಚಗೆ ಕೂಡ್ರಬಹುದೆಂಬ ಭಾವನೆಯಿಂದ ಹಾಗೆ ಹೇಳಿರಲು ಸಾಕು. ಇದಾದ ತರುವಾಯ ಬರುವದು ಮಘಾ ಮಳೆ. ಇದನ್ನು 'ಮಗಿ' ಮಳೆ ಎಂದೂ ಕರೆಯುತ್ತಾರೆ. 'ಆದರ ಮಗಿ ಆಗದಿದ್ದರ ಹೊಗಿ' ಈ ಮಳೆ ಆದರೆ ಮಗಿಯನ್ನು ತುಂಬಿ ಸುರುವಿದಂತೆ ಆಗುತ್ತದೆ. ಆಗದ ಹೋದರೆ ಹೊಗೆಯಂತೆ ಇಬ್ಬನ್ನಿಯಂತೆ ಆಗಿ ಹಾರಿ ಹೋಗುತ್ತದೆ. ಇನ್ನು ಬರುವದು ಉತ್ತರಾ ಮಳೆ 'ಉತ್ತರಿ' ಎಂದೂ ಕರೆಯುತ್ತಾರೆ. ಈ ಮಳೆ ಹಿಂಗಾರಿಯ ಬೆಳೆಗಳಿಗೆ ಅತಿ ಅವಶ್ಯ. ಈ ಮಳೆಯು ರೈತರಿಗೆ ಭಾಷ್ಯ ಕೊಟ್ಟಿದೆಯಂತೆ. 'ಉತ್ತರಿ ಹುಸಿಯಾದರೆ ಸತ್ಯರು ಹುಸಿಯಾಡಿದರೆ ಜಗವಿನ್ನೆತ್ತ ಬಾಳುವದು? ಎಂದು ಸರ್ವಜ್ಞ ಉತ್ತರಿ ಮಳೆಯ ಮಹತ್ವವನ್ನು ಕುರಿತು ಹೇಳಿದ್ದಾನೆ.

'ಹಸ್ತಾ ಮಳೆ ಆದರ ಹಸ್ತ ಆಗದಿದ್ದರ ಹಲ್ಕಿಸ್ತ. ಉತ್ತರಿ ಮಳೆಯಂತೆ ಹಸ್ತಾ ಮಳೆಯೂ ಹಿಂಗಾರಿ ಬೆಳೆಗಳಿಗೆ ಅತಿ ಅವಶ್ಯ. ಉತ್ತರಿ ಮತ್ತು ಹಸ್ತ ಎರಡೂ ಅಡ್ಡ ಮಳೆಗಳು ಆಗದಿದ್ದರೆ ಹಿಂಗಾರಿಯಲ್ಲಿ ಬರಗಾಲವೇ ಬೀಳುವುದು. ಚಿತ್ತಿ ಮಳೆಯನ್ನು ಕುಡ್ಡಿ ಮಳೆ ಎಂದು ಕರೆಯುತ್ತಾರೆ. ಚಿತ್ತಿ ಮನಸಿಚ್ಛೆಯ ಮಳೆ. ಮನಸಿಗೆ ಬಂದರೆ ಆಗುವದು. ಇಲ್ಲದಿದ್ದರೆ ಇಲ್ಲ. ಕಣ್ಣಿ ಕಂಡಲ್ಲಿ ಆಗೂದು, ಕಾಣದಿದ್ದರ ಇಲ್ಲವೆ ಇಲ್ಲ. ಒಂದು ಹೊಲಕ್ಕೆ ಆದರೆ ಆಯಿತು, ಬಾಜೂಕಿನ ಹೊಲಕ್ಕೆ ಇಲ್ಲವೇ ಇಲ್ಲ. ಎತ್ತಿನ ಒಂದು ಕೋಡು ತೊಯ್ದರೆ ಮತ್ತೊಂದು ಕೋಡು ತೊಯ್ಯದಂತೆ ಆಗುವ ಮಳೆ. ನಂತರ ಬರುವ ಸ್ವಾತಿ ಮಳೆಯು ಬಹುತೇಕ ಕೊನೆಯ ಮಳೆಯಾಗಿದೆ. "ಸಾತಿ ಮಳಿಹ್ವಾದ ಮ್ಯಾಲ ಯಾತರ ಮಳಿ' ಎಂದು ರೈತರು ಮಾತಾಡುತ್ತಿರುತ್ತಾರೆ. ಉತ್ತರಿ ಹಸ್ತ ಮಳೆಗೆ ಬಿತ್ತಿಗೆ ಮಾಡಿದರೆ ಗೋದಿ, ಕಡಲೆ, ಕುಸುಬಿ, ಬಿಳಿ ಜೋಳಗಳು ಎಲ್ಲವೂ ಹುಟ್ಟುತ್ತವೆ. ಒಮ್ಮೆ ಈ ಬೆಳೆಗಳು ಹುಟ್ಟಿದರೆ ನಂತರ ಕೇವಲ ಹವೆಯ ಮೇಲೆ ತಂಪು ಹವೆಗೆ ಚೆನ್ನಾಗಿ ಬೆಳೆಯುತ್ತವೆ. ವಿಶಾಖಾ ಮಳೆಯನ್ನು ಇಸಕ್ಕಿ ಮಳೆ ಎಂದೂ ಕರೆಯುತ್ತಾರೆ. ಈ ಮಳೆಯು ಆದರೆ ಹೊಲದಲ್ಲಿ ಹಿಂಗಾರಿ ಬೆಳೆಗಳಲ್ಲಿರುವ ಕೀಟ, ಹುಳು ಮತ್ತು ಕ್ರಿಮಿಗಳೆಲ್ಲ ಸತ್ತುಹೋಗುತ್ತವೆ ಎಂಬ ನಂಬಿಕೆ ಇದೆ. ಈ ಮಳೆ ಆಗುವದು ಅಪರೂಪ.

ನಂತರದ ಮಳೆಗಳು ಅನಿಶ್ಚಿತವಾಗಿವೆ. ಆದರೂ ಕೇಡ ಮಳೆಗಳು ಎಂದು ಕರೆಯುತ್ತಾರೆ. ಇದಿಗಡಕ ಮೆದಿಗಡಕ ಎಂದೂ ಕರೆಯುತ್ತಾರೆ. ಸುಗ್ಗಿಯ ಸಮಯದಲ್ಲಿ ಮಳೆ ಆದರೆ ಕಣದಲ್ಲಿರುವ ರಾಶಿ, ಹೊಟ್ಟು ಕಣಿಕೆಗಳು ತೊಯ್ಯುತ್ತವೆ. ಆದ್ದರಿಂದ ಈ ಮಳೆಗಳು ರೈತರಿಗೆ ಹಾಸಿಕಾರಕ ಆಗಿವೆ. ಪುಷ್ಯ ಮಾಸದಲ್ಲಿ ಬರುವ ವರ್ಷದಲ್ಲಿ ಆಗುವ ಮಳೆಗಳ ಬೀಜಗಳು ನಿಲ್ಲುತ್ತವೆ ಎಂಬ ಭಾವನೆ ಇದೆ. ಆಯಾ ನಕ್ಷತ್ರಗಳ ದಿವಸ ಮಳೆ ಆಗಬಾರದು ಮತ್ತು ಇಬ್ಬನ್ನಿ ಬೀಳಬಾರದು. ಹಾಗೆ ಬಿದ್ದ ದಿವಸ ಇರುವ ನಕ್ಷತ್ರದ ಮಳೆ

ಆಗಲಾರದು. ಇದಿಷ್ಟು ರೈತರಲ್ಲಿದ್ದ ಮಳೆಗಳನ್ನು ಕುರಿತ ನಂಬಿಕೆಗಳ ಹಾಗೂ ಅನುಭವದ ಆಧಾರದ ಮೇಲೆ ನಿರೂಪಿಸಿದ ದಾಖಲೆಗಳು ಮತ್ತು ರೈತರ ಅನಿಸಿಕೆಗಳಾಗಿವೆ. ಹರಿಶ್ಚಂದ್ರನ ಗಾಳಿ ಬೀಸಿದರೆ ಮಳೆ ಬಂದೇ ತೀರುತ್ತದೆ. ಎಂಬ ನಂಬಿಕೆ ರೈತರಲ್ಲಿದೆ, ಹರಿಶ್ಚಂದ್ರನ ಗಾಳಿ ಎಂದರೆ ಉತ್ತರ ದಿಕ್ಕಿನ ಕಡೆಯ ಗಾಳಿ.

ರೈತರದು ನಿಜವಾಗಿಯೂ ಫಲಾಪೇಕ್ಷೆ ಇಲ್ಲದ ಬದುಕು. ಮಳೆ ಆಗಿಯೇ ತೀರುವದೆಂಬ ಭರವಸೆಯಿಂದ ನೇಗಿಲ ರೆಂಟೆ ಹೊಡೆಯುತ್ತಾರೆ. ಹೊಲಕ್ಕೆ ಗೊಬ್ಬರ ಹೇರುತ್ತಾರೆ. ಹರಗುತ್ತಾರೆ. ಬಿತ್ತುತ್ತಾರೆ. ಎಡೆಕುಂಟೆ ಹೊಡೆಯುತ್ತಾರೆ. ಮತ್ತು ಕಳೆ ಕಸ ಕಿತ್ತು ಹೊಲ ಹಸನಾಗಿ ಇಡುತ್ತಾನೆ. ತನ್ನ ಪಾಲಿನ ಕರ್ತವ್ಯ ತಾನು ಮಾಡುತ್ತಾನೆ. ಅದರ ಫಲ ಬರಲಿ ಬಿಡಲಿ ಮಳೆರಾಯನೇ 'ಕಾಯಲಿ ಇಲ್ಲಾ ಕೊಲ್ಲಲಿ' ಎಂದು ನಿರ್ಲಿಪ್ತನಾಗಿರುತ್ತಾನೆ. 'ನಾವ್ಹೆಂಗ ಅದೇವು ಹಂಗ ಮಳೀನೂ ಆಗೇತಿ.' ಇದು ಇತ್ತೀಚಿಗಿನ ಜನರು ನೈತಿಕವಾಗಿ ಅಧಃಪತನ ಹೊಂದುತ್ತಿರುವುದರ ಸಂಕೇತವಾಗಿ ಮನುಷ್ಯನ ನಡತೆಗೆ ಮಳೆಯನ್ನು ಹೋಲಿಸುವ ರೈತರೂ ಇದ್ದಾರೆ. ಮನುಷ್ಯರ ಮೇಲೆ ಮಳೆರಾಯಗೆ ಮರುಕವಿಲ್ಲವೆಂದರೆ 'ದನಕರಗೋಳ ಮರಗಾ ನೋಡೆರ ಮಳಿ ಆದೀತು' ಎಂಬ ಆಶಾಭಾವನೆ ಮಾತ್ರ ರೈತರ ಮನದಲ್ಲಿ ಹಸಿರಾಗಿಯೇ ಇದೆ.

ಮಳೆಯನ್ನು ಕುರಿತು ಇನ್ನೂ ಒಂದು ನಂಬಿಕೆ ಪ್ರಚಲಿತದಲ್ಲಿದೆ. ಅದೆಂದರೆ 'ಮಳೆ ಪ್ರತಿ ದಿವಸವೂ ಒಂದಿಲ್ಲಾ ಒಂದು ಕಡೆ ಆಗುತ್ತಲೇ ಇರುತ್ತದೆ. ಯಾವ ದಿವಸ ಮಳೆ ಆಗುವದಿಲ್ಲವೋ ಆ ದಿವಸ ಹುಟ್ಟಿದ ಬೀಜವು ಬಂಜೆಯಾಗುತ್ತದೆ. ಅದರಂತೆ ಮಳೆಯಾಗದ ದಿವಸ ಹುಟ್ಟಿದ ಗಂಡು ಅಥವಾ ಹೆಣ್ಣು ಬಂಜೆಯಾಗುತ್ತಾಳೆ.' ಈ ಮಾತು ಮಳೆಯ ಮಹತ್ವವನ್ನು ತಿಳಿಸುವದಾಗಿದೆ. ಅಷ್ಟೆ ಅಲ್ಲ ಜನಪದರು ನಂಬಿದ ಹಾಗೆ ರಾಜರೊಳು ಮಳೆರಾಜನೆ ಶ್ರೇಷ್ಠ ಆಗಿದ್ದಾನೆ. ಮಳೆಯು 'ಬೀಜ' ಆಗಿರುತ್ತಾನೆ ಎಂಬ ಮಾತು ಅರ್ಥಪೂರ್ಣವಾಗಿದೆ. ಒಟ್ಟಿನಲ್ಲಿ ಮಳೆ ಸುರಿಯುತ್ತಿರಲಿ, ಹೊಳೆ ಹಳ್ಳ ತುಂಬಿ ಹರಿಯುತ್ತಿರಲಿ, ಸೃಷ್ಟಿಯ ಸಕಲ ಚರಾಚರಗಳು ಹುಟ್ಟಿ ಬೆಳೆಯುವ ಪ್ರಕ್ರಿಯೆ ನಿರಂತರ ನಡೆಯಲಿ.

*

ಸ್ವಾವಲಂಬಿ ಕೃಷಿಗೆ ಜವಾರಿ ಬೀಜಗಳು

'ಜವಾರಿ ಜ್ವಾಳದ ರೊಟ್ಟಿ, ಜವಾರಿ ಭತ್ತದ ಅನ್ನಾ ಹರ‍್ಯಾಗ ಮಾಡಿದ್ದು ರಾತರಿತನಕಾ ಹಳಸುದುಲ್ಲಾ, ಜವಾರಿ ಮಾಲ ಬಾಳ ಚೊಲೊ. ಹಾಬ್ರಿಡ ಕೂಳಾ ಹೊಟ್ಟ್ಯಾಗ ಉರಿತೈತಿ, ಮೈಯಾಗ ಕಸುವ ಬರೂದಿಲ್ಲಾ.' ಹಳೆಯ ತಲೆಮಾರಿನ ರೈತರು ಆಗಾಗ ಹೇಳುತ್ತಿದ್ದರು. 'ಹೈಬ್ರಿಡ್ ಬೀಜಗಳು ಹೆಚ್ಚು ಇಳುವರಿ ಕೊಡುತ್ತವೆ.' ಎಂಬ ಮಾತಿಗೆ 'ಕಸಾ ತಿನ್ನೂದ ತುಸು ತಿನ್ನಿರಿ' ಎಂದು ಸಾಂಪ್ರದಾಯಿಕ ಒಕ್ಕಲುತನ ಮಾಡುವ ರೈತರು ಅನ್ನುತ್ತಿದ್ದರು. ಅವರ ಮಾತಿನಲ್ಲಿ ಯಾವ ಅತಿಶಯೋಕ್ತಿ ಇರಲಿಕ್ಕಿಲ್ಲ. ಮೊದಲು ಕೃಷಿ ಇಲಾಖೆಯವರೇ ಪುಕ್ಕಟೆಯಾಗಿ ಬೀಜ ಕೊಟ್ಟು ಪ್ರಚಾರ ಮಾಡಿದರು. ನಂತರ ಸಹಾಯಧನ ಕೊಟ್ಟರು, ರೈತರು ಹೆಚ್ಚೆಚ್ಚು ಹೈಬ್ರಿಡ್ ಬೀಜಗಳಿಗೆ ಆಕರ್ಷಿತರಾದಂತೆ ಸಹಾಯಧನ ನಿಲ್ಲಿಸಲಾಯಿತು. ಪೂರ್ಣ ಬೆಲೆ ಕೊಟ್ಟು ತರಬೇಕಾಯಿತು. ಹೈಬ್ರಿಡ್ ಹತ್ತಿ ಬೀಜವನ್ನು ತರಲು ಹೋದ ರೈತರ ಮೇಲೆ ಲಾಠಿ ಪ್ರಹಾರ ನಡೆಯಿತು. ಹೀಗೆ ಹೈಬ್ರಿಡ್ ಬೀಜಗಳು ರೈತರ ಮನದಲ್ಲಿ ಮತ್ತು ಹೊಲದಲ್ಲಿ ಹುಟ್ಟಿ ಬೆಳೆದವು. ಇದರಿಂದ ರೈತರಿಗೆ ಲಾಭವಂತೂ ಆಗಲಿಲ್ಲ. ಬದಲಾಗಿ ಜವಾರಿ ಬೀಜಗಳನ್ನು ಅಲಕ್ಷ್ಯ ಮಾಡಿದರು. ಅವುಗಳನ್ನು ಬಿತ್ತುವ ಗೊಡವೆಗೆ ಹೋಗಲಿಲ್ಲ. ಸಂಗ್ರಹಿಸಿಡುವುದನ್ನು ಮರೆತರು. ಹೈಬ್ರಿಡ್ ಬೀಜಗಳಿಗೆ ಆಕರ್ಷಿತರಾದ ರೈತರು ಅದರಿಂದ ಆದ ಅನಾಹುತ ಮನಗಂಡು ಮತ್ತೆ ಜವಾರಿ ಬೀಜಗಳತ್ತ ಆಕರ್ಷಿತರಾಗುತ್ತಿರುವದು ಸಂತಸದ ಸಂಗತಿಯಾಗಿದೆ.

ಬೀಜಗಳ ಆಯ್ಕೆಯ ವಿಧಾನ :

ಜವಾರಿ ಬೀಜಗಳು ರೈತರ ಹೊಲದಲ್ಲೇ ಉತ್ಪಾದನೆ ಮಾಡಿದಂತವು ಆಗಿವೆ. ಜವಾರಿ ಬೀಜಗಳನ್ನು ಪ್ರತಿ ವರ್ಷ ಕೊಂಡು ತರಬೇಕಾಗಿಲ್ಲ. ಕಳಪೆ ಗುಣಮಟ್ಟದ ಬೀಜಗಳಿಂದ ಮೋಸ ಹೋಗುವ ಹಾಗೂ ಹಾನಿಗೊಳಗಾಗುವ ತೊಂದರೆ ಇಲ್ಲ. ಜವಾರಿ ಬೀಜಗಳನ್ನು ಉತ್ಪಾದಿಸಲು ಹಾಗೂ ಸಂಗ್ರಹಿಸಲು ಹೆಚ್ಚು ಖರ್ಚು ಮಾಡಬೇಕಾಗಿಲ್ಲ. ಬೀಜಗಳ ಆಯ್ಕೆ ಮಾಡುವಾಗ ಬೆಳೆಯು ಸದೃಢವಾಗಿರಬೇಕು. ತೆನೆ ದೊಡ್ಡದಾಗಿರಬೇಕು. ಕಾಳು ದಪ್ಪ ಆಗಿರಬೇಕು. ಇಂಥ ಸಂಗತಿಗಳನ್ನು ರೈತರು ಗಮನಿಸುತ್ತಾರೆ. ಹೊಲದಲ್ಲಿ ಬೆಳೆದ ತೆನೆಗಳಲ್ಲಿ ಉತ್ತಮವಾದ ತೆನೆಗಳನ್ನು ಆರಿಸಿಟ್ಟು ಬಡಮನೆಯಿಂದ ಬಡಿದು

ಕಾಳುಗಳನ್ನು ಮೊದಲು ಬಿಸಿಲಿನಲ್ಲಿ ಒಣಗಿಸಿ ನಂತರ ರಾತ್ರಿ ನೆರಳಿನಲ್ಲಿ ಆರಲು ಬಿಟ್ಟು, ಬೆಳಿಗ್ಗೆ ಇಬ್ಬನಿ ಬಿದ್ದಾಗ ಬೀಜವನ್ನು ಬೇವಿನ ತಪ್ಪಲು ಹಾಗೂ ಬೂದಿಯಲ್ಲಿ ಮಿಶ್ರಣ ಮಾಡಿ ಸಂಗ್ರಹಿಸಿ ಇಡುತ್ತಾರೆ. ಒಂದು ವರ್ಷ ಎರೆ ಹೊಲದಲ್ಲಿ ಬೆಳೆದ ಕಾಳನ್ನು ಮಾರನೆ ವರ್ಷ ಮಸಾರಿ ಹೊಲದಲ್ಲಿ ಬಿತ್ತುತ್ತಾರೆ. ಇದೇ ರೀತಿ ಮಸಾರಿ ಹೊಲದಲ್ಲಿ ಬೆಳೆದ ಕಾಳನ್ನು ಬೀಜಗಳಾಗಿ ಎರೆ ಹೊಲದಲ್ಲಿ ಬಿತ್ತುತ್ತಾರೆ.

ಬೀಜಗಳ ಸಂಗ್ರಹಣೆ ಬಹಳ ಸುಲಭ: ಜವಾರಿ ಬೀಜಗಳ ಆಯ್ಕೆ ಹಾಗೂ ಆರೈಕೆ ಮಾಡಿ ವರ್ಷಗಟ್ಟಲೆ ಕೆಡದಂತೆ ಇಡುವ ವಿಧಾನಗಳು ಹಾಗೂ ಅದಕ್ಕೆ ಬೇಕಾಗುವ ಸಲಕರಣೆಗಳು ರೈತರ ಕೈಯಳತೆಯಲ್ಲೇ ಇರುತ್ತವೆ. ಸಾಂವಿ, ಪುಂಡಿ, ಹುರುಳಿ, ಕುಸುಬೆ, ಗೋದಿ, ಹೆಸರು, ಉದ್ದು, ಅಲಸಂದೆ, ಶೇಂಗಾದಂತಹ ಬೀಜಗಳನ್ನು ಆಯ್ಕೆ ಮಾಡುವ ಅವಶ್ಯಕತೆಯಿಲ್ಲ. ಹೊಲದಲ್ಲಿ ಬೆಳೆದ ಕಾಳುಗಳನ್ನು ಸಂಗ್ರಹಿಸಿಟ್ಟು ಬಿತ್ತಬಹುದಾಗಿದೆ. ಇನ್ನು ಆರೈಕೆ ಹಾಗೂ ಕೆಡದಂತೆ ಇಡುವ ಸಾಂಪ್ರದಾಯಿಕ ವಿಧಾನಗಳು ಖರ್ಚಿಲ್ಲದೆ ಯಾವುದೇ ರಾಸಾಯನಿಕಗಳ ಸಿಂಪರಣೆಯಿಲ್ಲದೆ ಸಂಗ್ರಹಿಸಿ ಇಡಬಹುದು, ಬೀಜಗಳನ್ನು ಗಡಿಗೆಗಳಲ್ಲಿ, ಗಳಿಗೆಗಳಲ್ಲಿ ಸಂಗ್ರಹಿಸಿಡುತ್ತಾರೆ. ಹಾಗೆ ಇಡುವುದರಿಂದ ಯಾವುದೇ ಕೀಟಗಳ ಕಾಟ ಆಗಲಾರದು. ಇದೀಗ ಹೇಳಿದಂತೆ ಬೀಜಗಳನ್ನು ಬೂದಿ ಮತ್ತು ಬೇವಿನ ತಪ್ಪಲುಗಳೊಡನೆ ಮಿಶ್ರಣ ಮಾಡಿ ಗಡಿಗೆ ಮತ್ತು ಗಳಿಗೆಗಳಲ್ಲಿ ತುಂಬಿಸಿಟ್ಟು ಅವುಗಳ ಬಾಯನ್ನು ಮಣ್ಣಿನ ರಾಡಿಯನ್ನು ಹದ ಮಾಡಿ ಮೆತ್ತಿಡುತ್ತಾರೆ. ಇದು ಅತ್ಯಂತ ಸುಲಭವಾದ ಖರ್ಚಿಲ್ಲದ ಬೀಜ ಸಂಗ್ರಹಣೆಯ ವಿಧಾನ ಎನಿಸಿದೆ.

ಜವಾರಿ ಬೀಜಗಳು ಸತ್ವಯುತ ಹಾಗೂ ಆರೋಗ್ಯದಾಯಕ ಆಗಿದೆ; ಜವಾರಿ ಬೀಜಗಳು ಒಳ್ಳೆಯ ಸತ್ವ ಮತ್ತು ರುಚಿಯನ್ನು ಹೊಂದಿವೆ. ಅದೆ ಹೈಬ್ರಿಡ್ ಬೀಜಗಳಿಂದ ಬೆಳೆದ ಯಾವುದೇ ಕಾಳು ಸತ್ವರಹಿತವಾಗಿವೆ ಹಾಗೂ ರುಚಿಯನ್ನು ಸ್ವಾದವನ್ನು ಹೊಂದಿರಲಾರವು. ಹೀಗಾಗಿ ಜವಾರಿ ಕಾಳನ್ನು ತಿಂದವರು ಜವಾರಿ ಬೆಳೆಗಳಂತೆ ಆರೋಗ್ಯವಂತರೂ ಶಕ್ತಿಶಾಲಿಗಳೂ ಆಗಿರುತ್ತಾರೆ. ಈ ಮಾತಿಗೆ ೩೦ ವಯಸ್ಸಿಗೆ ಕೂದಲು ಬೆಳ್ಳಗಾದ ಇಂದಿನ ವ್ಯಕ್ತಿಯನ್ನು ಕಂಡು ಹಿಂದಿನ ರೈತರು 'ಹೈಬ್ರಿಡ್ ಕೊಳ ತಿಂದ ಕೂದಲ ಬೆಳ್ಳಗಾಗಿದಾವ ಎಂದು ಅನ್ನುತ್ತಾರೆ, ಜವಾರಿ ಕಾಳಿನ ಅನ್ನ ಹಾಗೂ ರೊಟ್ಟಿಗಳು ಇಂದು ಮಾಡಿದವು ನಾಳೆ ಬೆಳಗಿನ ತನಕ ಕೆಡದಂತೆ (ಹಳಸದಂತೆ) ಇರುತ್ತವೆ. ಈ ಆಹಾರ ಉಂಡರೆ ಬೇಗನೆ ಹಸಿವು ಆಗದು, ಹೈಬ್ರಿಡ್ ಕಾಳಿನ ಆಹಾರ ಉಂಡರೆ ಬೇಗ ಹಸಿವಾಗುತ್ತದೆ.

ಜವಾರಿ ಬೀಜಗಳಿಂದ ಬೆಳೆದ ಹೊಟ್ಟು ಮೇವು ಸತ್ವಯುತ ಆಗಿವೆ; ಜವಾರಿ ಕಾಳಿನ ಆಹಾರದಂತೆ ಜವಾರಿ ಬೀಜಗಳಿಂದ ಬೆಳೆದ ಕಣಿಕೆ, ಭತ್ತದ ಹುಲ್ಲು ಗೋದಿಯ

ಹುಲ್ಲು, ಹೊಟ್ಟು ಹೆಚ್ಚು ಜೀವನ ಸತ್ವಗಳನ್ನು ಹೊಂದಿದ್ದು ದನಗಳ ಆರೋಗ್ಯಕ್ಕೆ ಪೂರಕವಾಗಿದೆ. ಒಟ್ಟಿನಲ್ಲಿ ಜವಾರಿ ಬೀಜದ ತಳಿಗಳು ಜನರ ಆರೋಗ್ಯಕ್ಕೆ ಹೆಚ್ಚು ಜೀವನ ಸತ್ವಗಳನ್ನು ಒದಗಿಸಬಲ್ಲವು. ಅದರಂತೆ ದನಗಳಿಗೂ ಉತ್ತಮ ಮೇವು ಒದಗಿಸಬಲ್ಲವು. ಇದೆಲ್ಲಕ್ಕೂ ಮಿಗಿಲಾಗಿ ಜವಾರಿ ಬೀಜಗಳು ಹೊಲದ ಮಣ್ಣಿನ ಆರೋಗ್ಯವನ್ನು ಹಾಳು ಮಾಡದೆ ಮಣ್ಣನ್ನು ಆರೋಗ್ಯದಿಂದಿಡಬಲ್ಲವು. ಜವಾರಿ ಬೀಜಗಳು ಪರಿಸರ ಸ್ನೇಹಿ ಆಗಿವೆ.

ಸ್ವಾವಲಂಬಿ ಕೃಷಿಗೆ ಜವಾರಿ ಬೀಜಗಳು: ಜವಾರಿ ಬೀಜಗಳಿಗಾಗಿ ರೈತರು ಯಾರನ್ನು ಯಾವ ಕಾಲಕ್ಕೂ ಅವಲಂಬಿಸುವಂತಿಲ್ಲ. ತನ್ನ ಹೊಲದಲ್ಲಿ ತಾನೇ ಬೀಜಗಳ ಸಂಗ್ರಹಣೆ ಮಾಡಿ ಇಟ್ಟುಕೊಳ್ಳುತ್ತಾನೆ. ಯಾವುದೇ ತಂತ್ರಗಾರಿಕೆಯ ಕಸರತ್ತು ಇದಕ್ಕೆ ಬೇಕಾಗಿಲ್ಲ. ಯಾರ ಹಂಗೂ ಇಲ್ಲದೆ ತನ್ನ ಹೊಲದಲ್ಲಿ ಬೆಳೆದ ಬೆಳೆಯಿಂದ ಸಂಗ್ರಹಿಸಿದ ಬೀಜಗಳನ್ನು ಸಂತೋಷದಿಂದ ಬಿತ್ತಿ ಧನ್ಯತೆಯಿಂದ ಬೆಳೆಯನ್ನು ಬೆಳೆದು ಉತ್ಪನ್ನವನ್ನು ಪಡೆಯುತ್ತಾನೆ. ಬೀಜಗಳ ಕಾನೂನು, ಪೇಟೆಂಟ ಕಾನೂನು, ವಿಶ್ವವ್ಯಾಪಾರ ಒಪ್ಪಂದ ಮೊನ್ಸಾಂಟೋದಂತಹ ಕಂಪನಿಗಳ ಏಕಸ್ವಾಮ್ಯತೆಯ ಹಂಗು ನಮ್ಮ ರೈತರಿಗಿಲ್ಲ. ಮನೆಯಲ್ಲಿ ಗಡಿಗೆಗಳಲ್ಲಿಟ್ಟು ಬೀಜಗಳನ್ನು ದನಗಳ ಸೆಗಣಿಯಿಂದಲೇ ಬೀಜೋಪಚಾರ ಮಾಡುತ್ತಾರೆ. ಉದಾಹರಣೆಗೆ ಹತ್ತಿ ಕಾಳಿನ ಬೀಜಕ್ಕೆ ಕೋಣಗಳ ಸೆಗಣಿಯ ಬೀಜೋಪಚಾರ.

ಆದಾಯದಲ್ಲಿ ಏರುಪೇರು ಇಲ್ಲ : ಜವಾರಿ ಬೀಜಗಳನ್ನು ಬಿತ್ತುವುದರಿಂದ ಉತ್ಪಾದನೆಯಲ್ಲಿ ಹೆಚ್ಚಳವಾಗಲಿ ಕಡಿಮೆಯಾಗಲಿ ಆಗಲಾರದು, ಹಿಂದಿನ ಕಾಲದಿಂದಲೂ ಜವಾರಿ ಬೀಜಗಳನ್ನು ಬಿತ್ತನೆ ಮಾಡುತ್ತ ಬಂದಿರುವ ರೈತರಿಗೆ ಬೆಳೆಯ ಇಳುವರಿಯಲ್ಲಿ ಗಮನಾರ್ಹವಾದ ಹೆಚ್ಚಳವಾಗಲಿ ಕಡಿಮೆಯಾಗಲಿ ಆಗಿರುವುದಿಲ್ಲ. ಮಳೆ, ಹವಾಮಾನ ಮತ್ತು ಹೊಲದ ಫಲವತ್ತತೆಯನ್ನು ಅವಲಂಬಿಸಿ ಒಂದು ಕ್ವಿಂಟಲ್‌ನಷ್ಟು ಹೆಚ್ಚು ಅಥವಾ ಕಡಿಮೆ ಇಳುವರಿ ಬರುತ್ತದೆ. ಹೈಬ್ರಿಡ್ ಬೀಜಗಳಂತೆ ಹೆಚ್ಚು ಇಳುವರಿ ಬಂದಾಗ ಹಿಗ್ಗುವದಾಗಲಿ, ಕಡಿಮೆ ಇುವರಿ ಬಂದಾಗ ಕುಗ್ಗುವದಾಗಲಿ ಆಗದೆ, ಸಮಭಾವನೆಯಿಂದ ಸಂತೃಪ್ತಿಯಿಂದ ಜೀವನ ಸಾಗಿಸಬಹುದಾಗಿದೆ. ಯಾವುದೇ ರಾಸಾಯನಿಕ ಗೊಬ್ಬರ, ರಾಸಾಯಸಿಕ ಕೀಟನಾಶಕ ಮತ್ತು ಕಳೆನಾಶಕಗಳ ಬಳಕೆಯಿಲ್ಲದೆ ಹಂಗಾಮಿಗನುಸರಿಸಿ ಜವಾರಿ ಬೀಜಗಳನ್ನು ಬಿತ್ತಬಹುದಾಗಿದೆ. ಯಾವುದೇ ದೃಷ್ಟಿಯಿಂದಲೂ ಜವಾರಿ ಬೀಜಗಳು ರೈತರಿಗೆ ಮೋಸ ಮಾಡಲಾರವು. ಹಾನಿ ಮಾಡಲಾರವು. ಒಣ ಬೇಸಾಯದಲ್ಲಿ ಜವಾರಿ ಬೀಜಗಳು ಬೆಳೆಯಬಲ್ಲವು ಆಗಿವೆ. ಹಂಗಾಮಿಗನುಸರಿಸಿ ಜವಾರಿ ಬೀಜಗಳನ್ನು ಬಿತ್ತಿ ಬೆಳೆದರೆ ರೈತರಿಗೆ ಹಾನಿಯಾಗುವುದಿಲ್ಲ.

ಜವಾರಿ ಕಾಳಿನಿಂದ ಆರೋಗ್ಯ ಮತ್ತು ಸಮೃದ್ಧಿ :

ಕಾಳಿನಂತೆ ಕೂಳು ಕೂಳಿನಂತೆ ಮನುಷ್ಯ. ಮನುಷ್ಯನಂತೆ ಸಮಾಜ. ಮನುಷ್ಯ ಎಂತಹ ಆಹಾರ ಉಣ್ಣುತ್ತಾನೆಯೋ ಅದು ಮನುಷ್ಯನ ವೃತ್ತಿ, ನಡೆತೆ, ಪ್ರವೃತ್ತಿಯ ಮೇಲೆ ಪರಿಣಾಮ ಬೀರುತ್ತದೆ. ಜವಾರಿ ಬೀಜಗಳ ಸಂದರ್ಭದಲ್ಲಿ ಇದೆಲ್ಲ ನಿಜವೇ ಆಗಿದೆ. ಬೇಳೆಕಾಳು, ಅನ್ನ, ರೊಟ್ಟಿ, ನುಚ್ಚು ಮತ್ತು ಅಂಬಲಿ ಉಂಡವರು ಹೆಚ್ಚಾಗಿ ಸಾತ್ವಿಕ ಗುಣವುಳ್ಳವರಾಗುತ್ತಾರೆ. ಹಿಂದಿನವರು ಜವಾರಿ ಕಾಳಿನ ಊಟ ಮಾಡಿದ್ದರಿಂದಲೆ ೮೦-೯೦ ವರ್ಷಗಳಾದರೂ ಒಂದೂ ಹಲ್ಲು ಬಿದ್ದಿಲ್ಲ. ಕಣ್ಣಿಗೆ ಚಾಳೀಸು ಹಾಕಿಲ್ಲ. ಕ್ವಿಂಟಲ್‌ಗಿಂತಲೂ ಹೆಚ್ಚು ಭಾರವಾದ ಕಾಳಿನ ಚೀಲಗಳನ್ನು ನಿರಾಯಾಸವಾಗಿ ಎತ್ತುವ ಹೊರುವ ಶಕ್ತಿ ಸಾಮರ್ಥ್ಯ ಹೊಂದಿದ್ದರು. ಬಗ್ಗಿದ ನಡ ಮೇಲೆ ಮಾಡದೆ ಹತ್ತು ಹದಿನೈದು ಮಾರು ನಟ್ ಕಡಿಯುತ್ತಿದ್ದರು. ಈಗಿನವರು ಇಬ್ಬರು ಹೊರುವಷ್ಟು ಭಾರವಾದ ಹುಲ್ಲಿನ ಕಣಿಕೆಯ ಹೊರೆಯನ್ನು ಸರಾಗವಾಗಿ ಹೊಲದಿಂದ ಹೊತ್ತು ತರುತ್ತಿದ್ದರು. ಅದಕ್ಕೆಲ್ಲ ಕಾರಣ ಜವಾರಿ ಕಾಳಿನಲ್ಲಿರುವ ಪೌಷ್ಠಿಕಾಂಶಗಳು. ಹೀಗಾಗಿ ಅವರೆಲ್ಲ ಆಸ್ಪತ್ರೆಯ ಮುಂದೆ ಹಾಯ್ದು ಹೋದವರಲ್ಲ. ಔಷಧಿ, ಗುಳಿಗೆಗಳ ಹಂಗಿಲ್ಲದೆ, ದೃಢಕಾಯರೂ ಆರೋಗ್ಯ ವಂತರೂ ಆಗಿದ್ದರು. ಹಿಂದಿನವರ ಆಯುಷ್ಯದ ಪ್ರಮಾಣವೂ ಜಾಸ್ತಿಯಿತ್ತು. ನೂರು ವರುಷ ಬದುಕಿದವರೆಲ್ಲ ಜವಾರಿ ಕಾಳನ್ನು ತಿಂದವರೇ ಎಂದು ಧೈರ್ಯವಾಗಿ ಹೇಳಬಹುದು.

ಜವಾರಿ ಕಾಳಿನಂತೆ, ಜವಾರಿ ಆಕಳ ಹಾಲು, ಜವಾರಿ ಹಣ್ಣಿನ ಗಿಡಗಳು ಸಹಿತ ಸತ್ವಯುತ ಮತ್ತು ರುಚಿಕರವಾಗಿವೆ. ಜವಾರಿ ಎತ್ತುಗಳು ಹೆಚ್ಚು ಕಸುವು ಹೊಂದಿವೆ. ರೋಗ ರುಜಿನಗಳಿಗೆ ಜವಾರಿ ದನಗಳು ಬಗ್ಗುತ್ತಿರಲಿಲ್ಲ. ಅದರಂತೆ ಜವಾರಿ ಆಕಳ ಹಾಲು ಆನೆಯ ಕಸುವು ಕೊಡಬಲ್ಲದು. ಜವಾರಿ ಮಾವಿನ ಹಣ್ಣಿನ ರುಚಿ ಸ್ವಾದಿಷ್ಟವಾಗಿದೆ. ನಾಲ್ಕೈದು ದಿನಗಳ ತನಕ ಜವಾರಿ ಮಾವಿನ ಹಣ್ಣು ಕೊಳೆಯಲಾರವು. ಜವಾರಿ ಮಾವಿನ ಹಣ್ಣು ಗಾತ್ರದಲ್ಲಿ ಚಿಕ್ಕವು ಆದರೂ ರುಚಿಯಲ್ಲಿ ಶ್ರೇಷ್ಠವಾಗಿವೆ. ನಾಲ್ಕೈದು ದಿನಗಳವರೆಗೆ ಈ ಹಣ್ಣುಗಳು ಕೆಡದಂತೆ ಇರಬಲ್ಲವು.

ಜವಾರಿ ಬೀಜಗಳು ಹಾಗೂ ತಳಿಗಳು :

ಜೋಳದಲ್ಲಿ ಗುಂಡದೆನಿ, ಕಾರಜೋಳ, ಎನ್ನಿಗಾರ, ಅರಳಿನ ಜೋಳ, ಬಿಳಿ ಜೋಳ ಹೀಗೆ ಹಲವಾರು ತಳಿಗಳು ಬಳಕೆಯಲ್ಲಿವೆ. ಹತ್ತಿಯಲ್ಲಿ ಲಕ್ಷ್ಮೀ ಜೈಧರ ಎಂಬೆರಡು ತಳಿಗಳಿವೆ. ಗೋಧಿಯಲ್ಲಿ ಬೀಜಗಾ, ಅಮೃತ, ಕೆಂಪುಗೋಧಿ, ಶೇಂಗಾದಲ್ಲಿ ಗೆಜ್ಜಿ ಶೇಂಗಾ, ಬಳ್ಳಿ ಶೇಂಗಾ ಎಂಬ ತಳಿಗಳಿವೆ. ಅಲಸಂದಿಯಲ್ಲಿ ಕೆಂಪು ಮತ್ತು ಬಿಳಿ ಅಲಸಂದಿಯ ತಳಿಗಳಿವೆ. ಭತ್ತದಲ್ಲಿ ದೊಡಿಗ್ಯಾ ಗಿನಿಶ್ಯಾಳಿ, ಕರಿದಡಿ, ಬಿಳಿದಡಿ, ಉದರಸಾಳಿ, ಅಂತರಸಾಳಿ ಕುಂಕುಮಸಾಳಿ, ಕಾಗಿನಾಳಿ, ಬೋಳಸಾಳಿ ಎಂಬ ಹಲವಾರು ತಳಿಗಳಿವೆ.

ಅವರೆ, ಮಡಕೆ, ಉದ್ದು, ತೊಗರಿ, ಹೆಸರು, ಕಡಲೆಯಂತಹ ಕಾಳುಗಳು, ಬದನೆ, ಬೆಂಡೆ, ಗವಾರ, ಹಾಗಲ, ಸವತೆ, ಹೀರೆ, ಕುಂಬಳದಂತಹ ತರಕಾರಿ ಬೀಜಗಳು, ನವಣೆ, ಸಾಂವಿ, ಬರಗದಂತಹ ಸಣ್ಣ ಕಾಳುಗಳು, ಎಳ್ಳು, ಗುರೆಳ್ಳು, ಔಡಲ, ಕುಸುಬೆ, ಅಗಸೆಯಂತಹ ಎಣ್ಣೆ ಕಾಳುಗಳು, ಸೆಜ್ಜೆ, ರಾಗಿ, ಹೀಗೆ ಹಲವಾರು ಜವಾರಿ ಬೀಜಗಳನ್ನು ನಮ್ಮ ರೈತರು ಬಿತ್ತಿ ಬೆಳೆ ಮಾಡಿದ್ದಾರೆ. ಮುಂದಿನ ಪೀಳಿಗೆಗೆ ಇಂಥಹ ಬೀಜಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ.

ಹಲವಾರು ತಲೆಮಾರುಗಳಿಂದ ಈ ಜವಾರಿ ಬೀಜಗಳನ್ನು ರೈತರು ಬಿತ್ತಿ ಬೆಳೆ ಮಾಡುತ್ತ ಬಂದಿದ್ದಾರೆ. ಜವಾರಿ ಬೀಜದ ಬೆಳೆಗಳು ರೋಗದ ಬಾಧೆಗೆ ತುತ್ತಾಗುವುದಿಲ್ಲ. ಜವಾರಿ ಬೀಜದ ಬೆಳೆಗಳು ಆರೋಗ್ಯಪೂರ್ಣ ಹಾಗೂ ದಷ್ಟಪುಷ್ಟವಾಗಿ ಬೆಳೆಯಬಲ್ಲವು. ಕಡಿಮೆ ಮಳೆಯಾದರೂ ಬೆಳೆಗಳು ಎಷ್ಟಾದರೂ ಇಳುವರಿ ಕೊಟ್ಟೇ ತೀರುತ್ತವೆ. ಬರಗಾಲದಂತ ಪರಿಸ್ಥಿತಿಯಲ್ಲೂ ಈ ಬೀಜಗಳನ್ನು ನಾಶವಾಗದಂತೆ ಇಂದಿಗೂ ಸಂಗ್ರಹಿಸುತ್ತಾ ರೈತರು ಈ ಬೀಜಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಕೀಟಗಳ ಬಾಧೆಗೂ ಜವಾರಿ ಬೆಳೆಗಳು ಬಗ್ಗಲಾರವು, ಜವಾರಿ ಬೆಳೆಗಳನ್ನು ಹವಾಮಾನಕ್ಕನುಸರಿಸಿ, ಹಂಗಾಮಿಗನುಸರಿಸಿ ಮಾಡಲಾಗುತ್ತದೆ.

ಧಾನ್ಯಗಳ ರಕ್ಷಣೆಗೆ ಸುರಕ್ಷಿತ ವಿಧಾನಗಳು

ಉಳಿಸಿದ ಕಾಳು ಬೆಳೆಸಿದ ಕಾಳಿನಷ್ಟೇ ಮಹತ್ವದ್ದಾಗಿದೆ. ಬೆಳೆಸಿದ ಕಾಳನ್ನು ಸಂಗ್ರಹಿಸಿಡುವುದು ದೊಡ್ಡ ಸಮಸ್ಯೆ. ಆಹಾರ ಧಾನ್ಯಗಳು, ಬೇಳೆ ಕಾಳುಗಳನ್ನು ನುಸಿ, ಬುರ ಬುರಿ, ಸೊರಬದಂತಹ ಕೀಟಗಳು ತೂತು ಕೊರೆಯುತ್ತವೆ. ಇಲಿ ಮತ್ತು ಹೆಗ್ಗಣಗಳು ಇಡಿಯಾಗಿ ಕಾಳುಗಳನ್ನು ತಿಂದುಹಾಕುತ್ತವೆ. ಅವುಗಳಿಂದ ಕಾಳುಗಳನ್ನು ರಕ್ಷಿಸಲು ರಾಸಾಯನಿಕ ಕೀಟನಾಶಕಗಳನ್ನು ಬಳಸಲು ಕೃಷಿ ವಿಜ್ಞಾನಿಗಳು ಮತ್ತು ಸಂಶೋಧಕರು ಶಿಫಾರಸ್ಸು ಮಾಡುತ್ತಿದ್ದಾರೆ. ರಾಸಾಯನಿಕಗಳನ್ನು ಬಳಸಿದರೂ ಕೀಟಗಳು ಸಾಯುವುದಿಲ್ಲ. ಇಲಿ ಹೆಗ್ಗಣಗಳು ಸಾಯುವುದಿಲ್ಲ. ರಾಸಾಯನಿಕಗಳನ್ನು ಧಾನ್ಯಗಳ ರಕ್ಷಣೆಗೆ ಬಳಸುವುದರಿಂದ ಆಹಾರ ಧಾನ್ಯಗಳನ್ನು ಹಾಗೂ ಬೇಳೆ ಕಾಳುಗಳನ್ನು ತಿನ್ನುವ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಮನುಷ್ಯನು ಕ್ಯಾನ್ಸರ್‌ನಂತಹ ರೋಗಗಳಿಗೆ ತುತ್ತಾಗುವ ಆಪತ್ತು ಬಂದೊದಗಿದೆ. ಬೀಜಗಳ ರಕ್ಷಣೆಗೆ ಬಳಸಿದ ರಾಸಾಯನಿಕಗಳು ಬೀಜಗಳನ್ನು ಹುಟ್ಟದಂತೆ ಮಾಡುವ ಅಪಾಯವಿದೆ. ಆಹಾರ ಧಾನ್ಯಗಳನ್ನು ವರ್ಷವಿಡೀ ಮನೆ ಬಳಕೆಗೆ ಸಂಗ್ರಹಿಸಿಡಬೇಕಾಗುತ್ತದೆ. ಬೇಳೆ ಕಾಳುಗಳನ್ನು, ಧಾನ್ಯಗಳನ್ನು ಯೋಗ್ಯ ಬೆಲೆ ಬರುವ ತನಕ ಸಂಗ್ರಹಿಸಬೇಕಾಗುತ್ತದೆ. ಅದು ಅಲ್ಲದೆ ಬಿತ್ತಲು ಮುಂದಿನ ಹಂಗಾಮಿನತನಕ ಸಂಗ್ರಹಿಸಬೇಕಾಗುತ್ತದೆ.

ಈ ಧಾನ್ಯಗಳಲ್ಲಿ ಮುಖ್ಯವಾಗಿ ಜೋಳ, ಭತ್ತ, ಗೋಧಿ ಮತ್ತು ಗೋವಿನ ಜೋಳಗಳ ಸಂಗ್ರಹಣೆ ಬಹಳ ಮಹತ್ವದ್ದಾಗಿದೆ. ಬೇಳೆ ಕಾಳುಗಳಾದ ತೊಗರಿ, ಕಡಲೆಗಳ ಸಂಗ್ರಹಣೆಯೂ ಅಷ್ಟೇ ಮಹತ್ವದಾಗಿದೆ. ಪರಂಪರಾಗತವಾಗಿ ನಮ್ಮ ಹಿಂದಿನ ರೈತರು ಹಲವಾರು ಉಪಾಯಗಳನ್ನು ಮತ್ತು ವಿಧಾನಗಳನ್ನು ಈ ಕಾಳುಗಳ ಮತ್ತು ಬೀಜಗಳ ರಕ್ಷಣೆಗೆ ಅನುಸರಿಸಿಕೊಂಡು ಬಂದಿದ್ದಾರೆ. ಅವುಗಳ ಪರಿಚಯ ಮಾಡಿಕೊಳ್ಳುವುದು ಇಂದಿನ ಅಗತ್ಯವಾಗಿದೆ.

ಜೋಳ ಸಂಗ್ರಹಣೆಗೆ ಹಗೇವು :

"ಖರೆ ಒಕ್ಕಲ ಅಂದರ ಹಿತ್ತಲದಾಗ ಬಣಾವಿ, ಹಗೇದಾಗ ಜ್ವಾಳಾ ತುಂಬಿರಬೇಕು." ಇದು ಒಕ್ಕಲಿಗರು ಒಕ್ಕಲಿಗನ ಲಕ್ಷಣ ಕುರಿತು ಹೇಳುವ ಮಾತು. ಜೋಳವು ಉತ್ತರ ಕರ್ನಾಟಕದ ಪ್ರಮುಖ ಆಹಾರಧಾನ್ಯ ಎನಿಸಿದೆ. ಜೋಳದ ರೊಟ್ಟಿ ಜೋಳದ ನುಚ್ಚು

ಮತ್ತು ಜೋಳದ ಕಿಚಡಿಗಳು ಜೋಳದಿಂದಲೇ ತಯಾರಾಗುತ್ತವೆ. "ರೊಟ್ಟಿ ತಿಂದರೆ ರೆಟ್ಟ್ಯಾಗ ಕಸುವು". ಎಂಬುದು ಇನ್ನೊಂದು ಗಾದೆಯ ಮಾತು. ಜೋಳದ ರೊಟ್ಟಿ ನಿಜವಾಗಿಯೂ ಪೌಷ್ಟಿಕ ಆಹಾರವೆನಿಸಿದೆ. ಜೋಳವನ್ನು ಎರಡು ಮೂರು ವರ್ಷಗಳ ತನಕ ಕೆಡದಂತೆ ಸಂಗ್ರಹಿಸಿಡಲು ಹಗೆ ಎಂದು ಕರೆಯಲ್ಪಡುವ ಹಗೇವುಗಳು ತುಂಬಾ ಸುರಕ್ಷಿತ ಹಾಗೂ ಪರಿಸರ ಸ್ನೇಹಿ ತಂತ್ರಜ್ಞಾನ, ಅವರವರ ಮನೆಯಲ್ಲಿರುವ ಜನಸಂಖ್ಯೆ ಹಾಗೂ ಅವರಿಗಿರುವ ಭೂಮಿಯ ಪ್ರಮಾಣಕ್ಕನುಗುಣವಾಗಿ ಹಗೇವುಗಳನ್ನು ಮಾಡಿಸಿರುತ್ತಾರೆ. ಒಂದೋ, ಎರಡೋ, ಮೂರೋ ಹೀಗೆ ಒಂದೊಂದು ಒಕ್ಕಲ (ಕಮತ)ಕ್ಕೆ ಹಗೇವುಗಳಿರುತ್ತವೆ. ಹಗೇವುಗಳು ಸಾಮಾನ್ಯವಾಗಿ ಮನೆಯ ಮುಂದೆ ಬಾಗಿಲಲ್ಲಿ, ಬಾಗಿಲ ಹೊರಗಡೆ ಹಾಗೂ ಮನೆಯ ಒಳಗಡೆ ಇರುತ್ತವೆ. ಒಂದೊಂದು ಊರುಗಳಲ್ಲಿ ಊರ ಹೊರಗೆ ಹಗೇವುಗಳಿಗೆಂದೇ ಜಾಗೆ ಇರುತ್ತದೆ. ಅಲ್ಲಿ ಎಲ್ಲ ರೈತರೂ ಹಗೇವುಗಳನ್ನು ನಿರ್ಮಿಸಿಕೊಂಡಿರುತ್ತಾರೆ.

ಹಗೇವುಗಳ ವಿನ್ಯಾಸ ರಚನೆ :

ಹಗೇವುಗಳು ಒಂದರಿಂದ ಎರಡು ಆಳುದ್ದ ಅಂದರೆ ೬ ರಿಂದ ೧೦ ಅಡಿ ಆಳವಾಗಿರುತ್ತವೆ. ಹಗೇವು ಕೊಡದ ಆಕಾರದಲ್ಲಿದ್ದು ಕೆಳಗಡೆ ಹೋದ ಹಾಗೆ ಅಗಲವಾಗಿರುತ್ತವೆ. ಕೆಳಗಡೆ ಅಂದರೆ ಹಗೇವಿನ ತಳ ೪ರಿಂದ೮ ಅಡಿ ವ್ಯಾಸವುಳ್ಳದ್ದು ಆಗಿದ್ದು ೨೦ ರಿಂದ ೫೦ ಕ್ವಿಂಟಲ್‌ನಷ್ಟು ಜೋಳವನ್ನು ಸಂಗ್ರಹಿಸಿಡುವ ಸಾಮರ್ಥ್ಯ ಹೊಂದಿವೆ. ನೆಲಮಟ್ಟದಿಂದ ಕೆಳಗಡೆ ೨ ರಿಂದ ೪ ಫೂಟಿನಷ್ಟು ಆಳ ಹಾಗೂ ಅಷ್ಟೇ ಅಗಲವಾದ ತಗ್ಗು ಇದ್ದು, ಅದರ ಕೆಳಗಡೆ ಕಣಕಟ್ಟು ಎಂದು ಕರೆಯಲ್ಪಡುವ ಸಣ್ಣ ತೆಳವಾದ ಕಲ್ಲುಗಳಿಂದ ಕಟ್ಟಿದ ಅರ್ಧ ಅಡಿಯಷ್ಟು ಅಗಲವಾದ ಕಟ್ಟೆ ಇರುತ್ತದೆ. ಅದರ ಮೇಲೆ ಬಾಯಿಕಲ್ಲು ಮುಚ್ಚಿರುತ್ತಾರೆ ಇದರಿಂದ ಕೆಳಗಡೆ ಹೋದ ಹಾಗೆ ಹಗೇವು ಅಗಲವಾಗಿದ್ದು ಅದರಲ್ಲಿ ಜೋಳ ತುಂಬಿಸಿರುತ್ತಾರೆ. ಈ ಕಣಕಟ್ಟಿನ ಮೇಲೆ ನಿಂತು ಜೋಳವನ್ನು ಬಕೀಟುಗಳ ಮೂಲಕ ಬಕೀಟಿಗೆ ಹಗ್ಗ ಕಟ್ಟಿ ಎತ್ತಿಕೊಂಡು ಬುಟ್ಟಿಗಳಲ್ಲಿ ತುಂಬಿಸುತ್ತಾರೆ ಮತ್ತು ಹಗೇವುನಲ್ಲಿ ಜೋಳ ತುಂಬಿಸಲು ಕಣಕಟ್ಟಿನ ಮೇಲೆ ಕಟ್ಟಿಗೆಯ ಹಲಗೆಗೆ ಕೈಗಳು ಹೋಗುವಷ್ಟು ಅಗಲವಾದ ರಂಧ್ರಮಾಡಿದ್ದು ಇದನ್ನಿಟ್ಟು ಜೋಳ ಸುರುವುತ್ತಾರೆ. ಜೋಳ ತುಂಬಿಸಿ ಬಾಯಿಕಲ್ಲು ಮುಚ್ಚಿ ಅದರ ಮೇಲೆ ಮಣ್ಣಿನ ರಾಡಿ ಮುಚ್ಚಿ ನೆಲಕ್ಕಿಂತ ನಾಲ್ಕೈದಿಂಚು ಎತ್ತರದವರೆಗೆ ಮಣ್ಣು ಹಾಕಿ ಮುಚ್ಚುತ್ತಾರೆ. ರಸ್ತೆಯಲ್ಲಿ ಹಗೇವುಗಳಿದ್ದರೆ, ಒಂದು ಅಡಿಯಷ್ಟು ಎತ್ತರಕ್ಕೆ ಮಣ್ಣಿನ ಗುಡ್ಡೆ ಹಾಕುತ್ತಾರೆ. ಹೀಗೆ ಮಾಡುವದರಿಂದ ರಸ್ತೆಯಲ್ಲಿ ಹರಿಯುವ ನೀರು ಹಗೇವಿನಲ್ಲಿ ಹೋಗಲಾರದಂತೆ ತಡೆಯುತ್ತಾರೆ.

ಹಗೇವುಗಳನ್ನು ಕಡಿಯುವವರು ಕೂಲಿಯಾಗಿ ಹಣ ಪಡೆಯುವದಿಲ್ಲ. ಹಗೇವಿನಲ್ಲಿ ಎಷ್ಟು ಹೇರು ಜೋಳ ತುಂಬಿಸಲು ಸಾಧ್ಯವೋ ಅಷ್ಟು ಜೋಳವನ್ನೇ ಪ್ರತಿಫಲವಾಗಿ ಪಡೆಯುತ್ತಾರೆ. ಅಂದರೆ ಒಂದು ಹೇರು ಜೋಳ ಹಿಡಿಸುವಷ್ಟು ಹಗೇವಿಗೆ ಒಂದು ಚಿಟ್ಟಿ ಜೋಳ. ಒಂದು ಹೇರು ಅಂದರೆ ೧೨೮ ಕಾಲುಪಾವು ಅಥವಾ ಒಂದು ಕ್ವಿಂಟಾಲ್, ಹೀಗೆ ಎಷ್ಟು ಹೇರು ಜೋಳ ಹಿಡಿಸುವ ಹಗೇವು ಕಡಿದಿರುವನೋ ಅಷ್ಟು ಚಿಟ್ಟಿ ಜೋಳ ಕೂಡಬೇಕಾಗುತ್ತದೆ. ಜೋಳದ ತೆನೆಗಳನ್ನು ಕಣದಲ್ಲಿ ರೂಲು ಹೊಡೆದು ಹಂತಿ ಹೊಡೆದು, ಸುಂಕ ತೂರಿ, ಸೊರಗು ಗೊಂಡಿ ಬೇರ್ಪಡಿಸಿ ಉತ್ತಮ ಕಾಳನ್ನು ಮೇಟಿಗೆ ಮದ ಎಳೆದು ಸುತ್ತುಗಟ್ಟುತ್ತಾರೆ. ಮೇಟಿಯಿಂದ ಸುತ್ತುಗಟ್ಟಿದ ಗೆರೆಯತನಕ ಎಷ್ಟು ಮೊಳದ ರಾಶಿ ಇರುವದೋ ಅದರ ಆಧಾರದ ಮೇಲೆ ಇಷ್ಟು ಹೇರು ಜೋಳ ಆಗುತ್ತದೆ ಎಂಬುದು ರೈತರ ಲೆಕ್ಕಾಚಾರವಾಗಿದೆ. ಉದಾಹರಣೆಗೆ ಮೂರು ಮೊಳದ ರಾಶಿ ಇದ್ದರೆ, ಹೇರು (೧೫ ಕ್ವಿಂಟಲ್) ಜೋಳ ಹೀಗೆ ಎಷ್ಟು ಜೋಳ ಹಿಡಿಸುವದೆಂಬುದನ್ನು ರಾಶಿಯ ಪ್ರಮಾಣದಿಂದಲೂ ಕಂಡುಕೊಂಡು ಲೆಕ್ಕಾಚಾರ ಮಾಡುತ್ತಾರೆ. ಇಲ್ಲವೆ ಗೋಣಿ ಚೀಲದಲ್ಲಿ ತುಂಬಿಸಿ ಹಗೇವಿನಲ್ಲಿ ಸುರುವಿಯೂ ಲೆಕ್ಕಾಚಾರ ಮಾಡಲಾಗುತ್ತಿದೆ.

ಹಗೇವಿನಲ್ಲಿ ಜೋಳ ತುಂಬಿಸುವ ಕ್ರಮ :

ಒಕ್ಕಿದ ಜೋಳವನ್ನು ಹಗೇವು ರಸ್ತೆಯಲ್ಲಿದ್ದರೆ ಚಕ್ಕಡಿಯ ಡೊಂಬರಿಗೆಗೆ ಗುಡಾರವನ್ನು ಕಟ್ಟಿ ಅದರಲ್ಲಿ ಜೋಳವನ್ನು ಬುಟ್ಟಿಯಿಂದ ತುಂಬಿ ಹಾಕುತ್ತಾರೆ. ನಂತರ ಹಗೇವಿನಲ್ಲಿ ಹೂಟಿ ಬಿಡುತ್ತಾರೆ. ಹೂಟಿ ಬಿಡುವದು ಅಂದರೆ ಚಕ್ಕಡಿಯ ಹಿಂದಿನ ಭಾಗ ಹಗೆವಿಗೆ ಹತ್ತುವಂತೆ ಚಕ್ಕಡಿಯ ಗಣೆಯನ್ನು ಮೇಲೆ ಮಾಡುತ್ತಾರೆ. ಹಗೇವಿನಲ್ಲಿ ಜೋಳ ಹಾಕುವ ಪೂರ್ವದಲ್ಲಿ ಹಗೇವು ತೆರೆದು ಕಣಕಟ್ಟಿನ ಮೇಲಿನ ಭಾಗ ಹಾಗೂ ಹಗೇವಿನ ಸುತ್ತಲೂ ಸೆಗಣಿಯಿಂದ ಸಾರಿಸುತ್ತಾರೆ. ಹಗೇವಿನ ತಳದಲ್ಲಿ ರವದಿಯನ್ನು ಹಾಕಿ ಸುಟ್ಟು ಅದರ ಹಾಗೂ ಹಗೇದ ತಳದಲ್ಲಿರುವ ಸಣ್ಣ ಕಲ್ಲು ಮತ್ತು ಹೊಲಸನ್ನು ಕಸಬರಿಗೆಯಿಂದ ಸ್ವಚ್ಛಮಾಡಿ ಅದನ್ನು ಸಂಗ್ರಹಿಸಿ ಹೊರಗಡೆ ಚೆಲ್ಲುತ್ತಾರೆ. ನಂತರ ಜೋಳದ ದಂಟಿನ ಸಿವುಡುಗಳನ್ನು ಹಗೇವಿನ ಗೋಡೆಗುಂಟ ವರ್ತುಳಾಕಾರದಲ್ಲಿ ಹೊಂದಿಸುತ್ತಾರೆ. ಹೀಗೆ ಮಾಡುವದಕ್ಕೆ ಅಡಸುಣಗಿ ಕಟ್ಟುವದು ಎನ್ನುತ್ತಾರೆ, ಹೀಗೆ ಮಾಡುವುದರಿಂದ ಗೋಡೆಯಲ್ಲಿರುವ ಮಣ್ಣು ಮತ್ತು ಸಣ್ಣಾ ಕಲ್ಲಿನ ಅಥವಾ ಮಟ್ಟಿಯ ಸಂಪರ್ಕ ಜೋಳಕ್ಕೆ ಬರದಂತೆ ತಡೆಯಲಾಗುತ್ತದೆ. ಹಗೇವಿನ ತಳಕ್ಕೆ ಎರಡು ಮೂರು ಇಂಚಿನಷ್ಟು ದಪ್ಪ ಜೋಳದ ರವದಿಯನ್ನು ಹಾಕಿ ಅದರ ಮೇಲೆ ಗೋಣಿ ಚೀಲದ ಹರಿದ ತುಂಡುಗಳನ್ನು ಹಾಸುತ್ತಾರೆ. ಅದರ ಮೇಲೆ ಬೂದನ ರಾಶಿ ಅಂದರೆ ರಾಶಿ ಮಾಡುವ ಮೊದಲು ಜೋಳ ತೂರಿದಾಗ ಸೊರಗು ಜೋಳ ಗೊಂಡಿಜೋಳದ್ದು ಪ್ರತ್ಯೇಕ ಗುಂಪಿ ಮಾಡಿರುತ್ತಾರೆ. ಅದನ್ನು ಒಳ್ಳೆಯ ಮುಹೂರ್ತ (ಸಮಯ)ದಲ್ಲಿ ಅಂದರೆ ಸೂರ್ಯ ಉದಯವಾಗುವ ಸಂದರ್ಭದಲ್ಲಿ ಪೂಜೆಮಾಡಿ ನೈವೇದ್ಯ

ಅರ್ಪಿಸಿ ತುಂಬಿಸಿಕೊಂಡು ಬಂದು ಹಾಕುತ್ತಾರೆ. ರಾಶಿಯನ್ನು ನಂತರ ಬೇಕಾದಾಗ ತಂದು ಹಗೇವಿನಲ್ಲಿ ತುಂಬಿಸುತ್ತಾರೆ. ನಂತರ ಬಾಯಿಕಲ್ಲು ಹಾಕಿ ರಾಡಿ ಮೆತ್ತಿ ಮಣ್ಣಿನಿಂದ ಮುಚ್ಚುತ್ತಾರೆ.

ಜೋಳ ತುಂಬಿದ ಹಗೇವು ತೆಗೆಯುವ ಕ್ರಮ :

ಹಗೇವಿನಲ್ಲಿ ತುಂಬಿಸಿದ ಜೋಳವನ್ನು ತಮಗೆ ಬೇಕಾದಾಗ ಬೇಕಾದಷ್ಟು ತೆಗೆದುಕೊಂಡು ಮತ್ತೆ ಮುಚ್ಚುತ್ತಾರೆ. ಎರಡು ಮೂರು ಅಡಿಯಷ್ಟು ಕೆಳಗಡೆ ಜೋಳ ತುಂಬಿದ್ದರೆ ಹಗೇವಿನ ಮೇಲಿನ ಮಣ್ಣನ್ನು ತೆಗೆದು ಹಗೇದ ದಂಡೆಯ ಮೇಲಿಟ್ಟು ಸ್ವಚ್ಛಮಾಡುತ್ತಾರೆ. ಹಗೇವಿನ ಬಾಯಿಕಲ್ಲು ತೆಗೆದು ಮೇಲಿಡುತ್ತಾರೆ. ಹೀಗೆ ಮಾಡಿ ಒಮ್ಮೆಲೆ ಹಗೇವಿನಲ್ಲಿ ಇಳಿಯುವದಿಲ್ಲ. ಒಂದು ಕಂದೀಲನ್ನು ಸೆಣಬಿನ ಹಗ್ಗಕ್ಕೆ ಕಟ್ಟಿ ಇಳಿ ಬಿಟ್ಟು ನೋಡುತ್ತಾರೆ. ಅದು ನಂದಿ ಹೋದರೆ ಹಗೇವು ಇನ್ನೂ ಆರಿಲ್ಲ ಎಂದು ಕಂಬಳಿಯನ್ನು ಬೀಸಿ ಗಾಳಿಯಾಡುವಂತೆ ಮಾಡುತ್ತಾರೆ. ನಂತರ ಮತ್ತೆ ದೀಪವನ್ನು ಇಳಿಬಿಟ್ಟು ನೋಡುತ್ತಾರೆ. ಆಗ ದೀಪ ಆರದಿರಲು ಹಗೇವಿನಲ್ಲಿ ಇಳಿಯಲು ಅನುಕೂಲ ಎಂದು ಭಾವಿಸುತ್ತಾರೆ. ಹಗೇವಿನಲ್ಲಿ ಇಳಿಯಲು ಎರಡು ಕಾಲಿನ ಏಣಿ ಉಪಯೋಗಿಸುವದಿಲ್ಲ. ಯಾಕೆಂದರೆ ಹಗೇವಿನಲ್ಲಿ ಒಬ್ಬ ಮನುಷ್ಯ ಮಾತ್ರ ಇಳಿಯುವಷ್ಟು ಅಗಲದ ಬಾಯಿ ಇರುತ್ತದೆ. ಆದ್ದರಿಂದ ಹಗೇವಿನಲ್ಲಿ ಇಳಿಯಲು ಬಿದಿರುಗಳ ಅಥವಾ ಡವಿಗೆ ಎರಡೂ ಕಡೆ ಸಣ್ಣ ಸಣ್ಣ ಕವಲುಗಳುಳ್ಳದ್ದನ್ನು (ಹಗೇದಗಳ) ಉಪಯೋಗಿಸುತ್ತಾನೆ. ಹಗೇವಿನಲ್ಲಿರುವ ಜೋಳವನ್ನು ಒಬ್ಬ ಹಗೇದ ಗಳದ ಮೂಲಕ ಇಳಿದು ಬಕೀಟಿನಲ್ಲಿ ತುಂಬಿಸಿಕೊಡುತ್ತಾನೆ. ಇನ್ನೊಬ್ಬ ಬಕೀಟಿಗೆ ಹಗ್ಗ ಕಟ್ಟಿ ಅದರಿಂದ ಎತ್ತಿ ಮೇಲೆ ಬುಟ್ಟಿಯಲ್ಲಿ ಹಾಕುತ್ತಾನೆ. ಹಗೇವಿನಿಂದ ಜೋಳ ತೆಗೆದಾದ ಮೇಲೆ ಮತ್ತೆ ಜೋಳ ಸಮಮಾಡಿ ಗೋಣಿ ಚೀಲ ಮುಚ್ಚಿ ಅಡಸುಣಿಗಿಯ ಕಣಿಕಿ ಮುಚ್ಚಿ ಹಗೇದಗಳದ ಮೂಲಕ ಮೇಲೆ ಹತ್ತಿ ಬರುವನು. ನಂತರ ಹಗೇದ ಗಳ ಹೊರತೆಗೆದು ಬಾಯಿಕಲ್ಲು ಮುಚ್ಚಿ ರಾಡಿ ಮಣ್ಣು ಮುಚ್ಚುತ್ತಾರೆ.

ಹಗೇವಿನಲ್ಲಿ ಇಳಿಯುವವರು ಅನುಸರಿಸಬೇಕಾದ ಕ್ರಮಗಳು :

ಹಗೇವಿನಲ್ಲಿ ಒಂದು ರೀತಿಯ ಘಾಟು ವಾಸನೆ ಇರುತ್ತದೆ. ಪ್ರಾಣವಾಯುವಿನ ಅಭಾವವೂ ಇರುತ್ತದೆ. ಹೀಗಾಗಿ ಹಗೇವಿನಲ್ಲಿ ದೀಪ ಬಿಟ್ಟು ನೋಟುವ ಕ್ರಮ ಇದೆ. ಹಗೇವಿನಲ್ಲಿರುವ ಜೋಳ ತೆಗೆದ ವ್ಯಕ್ತಿಗೆ ಹೊರಗೆ ಬಂದಾಗ ಮೈಮೇಲೆಲ್ಲ ಬೆವರು ಬಂದಿರುತ್ತದೆ. ಆತ ಮೇಲೆ ಬಂದ ಕೂಡಲೆ ಅವನ ಮೈ ಮೇಲಿನ ಬೆವರವನ್ನು ಬಟ್ಟೆಯಿಂದೊರೆಸಿಕೊಂಡ ನಂತರ ಅವನಿಗೆ ಬಿಳಿ ಉಳ್ಳಾಗಡ್ಡಿ ಮತ್ತು ಬೆಲ್ಲವನ್ನು ತಿನ್ನಲು ಕೊಡುತ್ತಾರೆ. ಆಗ ಅವನಿಗೆ ಘಾಟು ವಾಸನೆಯ ತೊಂದರೆ ಇಲ್ಲದಾಗುವದು ಮತ್ತು ಪ್ರಾಣವಾಯುವಿನ ಕೊರತೆ ನೀಗಿಸಿದಂತಾಗುವದು. ಹೊರಗೆ ಬಂದ ನಂತರ ಜಳಕ (ಸ್ನಾನ) ಮಾಡಬಾರದು. ಬೆವರು ಒರೆಸಿಕೊಂಡರಾಯಿತು.

ಹಗೇವು ತಾಯಿ ಹೊಟ್ಟೆ :

"ಹಗೇವು ತಾಯಿ ಹೊಟ್ಟೆ" ಎಂದು ರೈತರು ಕರೆಯುತ್ತಾರೆ. ತನ್ನ ಮಗುವಿಗೆ ಹಸಿವಾದಾಗ, ಹಾಲು, ಅನ್ನ ನೀಡಿ ಸಂತೈಸುವ ತಾಯಿಯ ಹಾಗೆ, ಈ ಹಗೇವು ತನ್ನಹೊಟ್ಟೆಯಲ್ಲಿ ಜೋಳವನ್ನು ಸಂಗ್ರಹಿಸಿಟ್ಟು ಆತ (ರೈತನಿ)ಗೆ ಬೇಕಾದಾಗ ಅವನ ಆಹಾರಕ್ಕೆ ಜೋಳ ಕೊಡಬಲ್ಲದು. ಅಂತೆಯೇ ತಾಯಿಯ ಹೊಟ್ಟೆ ಎಂದು ಕರೆದಿರಲು ಸಾಕು. ಹಗೇವುಗಳನ್ನು ಗಂಗೆ, ಗೌರಿ ಎಂದು ಹೆಸರಿನಿಂದ ಕರೆಯುತ್ತಾರೆ.

ಹಗೇವುಗಳ ಮಹತ್ವ :

ಯಾವುದೇ ಸಿಮೆಂಟು, ಕಲ್ಲು, ಉಸುಕುಗಳಂತಹ ವಸ್ತುಗಳ ಬಳಕೆಯಿಲ್ಲದೆ ನೆಲದಲ್ಲಿ ಕಡಿದ ಹಗೇವುಗಳು ರೈತರ ಉಗ್ರಾಣಗಳೆನಿಸಿವೆ. ಇತ್ತಿತ್ತಲಾಗಿ ಗೋವಿನ ಜೋಳವನ್ನು ಹಗೇವುಗಳಲ್ಲಿ ಸಂಗ್ರಹಿಸಿಡುತ್ತಿದ್ದಾರೆ. ಮುಖ್ಯವಾಗಿ ನುಶಿಬಾಧೆಯನ್ನು ಸಂಪೂರ್ಣವಾಗಿ ಈ ಹಗೇವುಗಳು ತಡೆಗಟ್ಟುತ್ತವೆ. ಹಗೇವಿನಲ್ಲಿ ನುಶಿಗಳಿದ್ದ ಜೋಳ ಹಾಕಿದರೆ ಅವು ಸಾಯುತ್ತವೆ. ಮತ್ತು ಹಗೇವಿನ ಜೋಳದಲ್ಲಿ ನುಶಿಗಳಾಗಿದ್ದರೆ ಅವು ಹೊರಗೆ ಬಂದ ಕೂಡಲೆ ಸಾಯುತ್ತವೆ. ಎರಡನೆಯದಾಗಿ ಇಲಿ ಹೆಗ್ಗಣದಂತಹ ಪ್ರಾಣಿಗಳ ಕಾಟವಿಲ್ಲ, ಕಳ್ಳರ ಭಯವಿಲ್ಲ ಬರಗಾಲದಂತಹ ಸಂದರ್ಭದಲ್ಲಿ ಹಗೇವಿನಲ್ಲಿದ್ದ ಜೋಳ ಸಹಾಯಕ್ಕೆ ಬರುತ್ತವೆ. ಮೊದಲಿನ ರೈತರು ಆ ವರ್ಷದ ಜೋಳದ ಸುಗ್ಗಿ ಸರಿಯಾಗಿ ಚೆನ್ನಾಗಿ ಆದರೆ ಹಗೇವಿನಲ್ಲಿದ್ದ ಜೋಳ ತೆಗೆದು ಮಾರಾಟ ಮಾಡುತ್ತಿದ್ದರು. ಸುಗ್ಗಿ ಸರಿಯಾಗಿ ಚೆನ್ನಾಗಿ ಆಗದಿದ್ದರೆ ಹಗೇವಿನಲ್ಲಿದ್ದ ಜೋಳ ಮನೆ ಬಳಕೆಗೆ ಮಾತ್ರ ತೆಗೆದುಕೊಳ್ಳುತ್ತಿದ್ದರು. ಹಗೇವಿನಲ್ಲಿಟ್ಟ ಜೋಳಕ್ಕೆ ಒಳ್ಳೆಯ ಹೊಳಪು ಬರುತ್ತದೆ ಮತ್ತು ಕಾಳುಗಳು ದಪ್ಪವಾಗಿರುತ್ತವೆ. ಯಾವುದೇ ರಾಸಾಯನಿಕಗಳ ಬಳಕೆಯಿಲ್ಲದೆ, ಪರಿಸರ ಸ್ನೇಹಿ ಕ್ರಮದಿಂದಾಗಿ ಹಗೇವುಗಳು ಹಳ್ಳಿಯ ಪಾಮರರೆನಿಸಿದ ರೈತರ ತಂತ್ರಜ್ಞಾನಕ್ಕೆ ಇಂದಿನ ಯಾವ ತಂತ್ರಜ್ಞಾನವೂ ಸಾಟಿಯಾಗಲಾರದು ಮತ್ತು ಮಿತವ್ಯಯವಂತೂ ಅಲ್ಲವೇ ಅಲ್ಲ.

ಇತ್ತೀಚೆಗೆ ಗ್ರಾಮೀಣ ನೀರು ಸರಬರಾಜು ವ್ಯವಸ್ಥೆಯಂತಹ ನಳದ ನೀರಿನಿಂದಾಗಿ ಹಗೇವುಗಳಲ್ಲಿ ನೀರು ಹೊಕ್ಕು ಜೋಳದ ಕಾಳು ಕೆಟ್ಟು ಹೋಗುವಂತಾಗಿದೆ, ಒಕ್ಕುವ ಯಂತ್ರಗಳು ಬಂದಿದ್ದರಿಂದಾಗಿ ಕಣ ಮಾಡಿ ಒಕ್ಕುವ ರಾಶಿ ಮಾಡುವ ಮತ್ತು ಹಗೇವಿನಲ್ಲಿ ತುಂಬಿಸಿಡುವ ಕ್ರಮ ತಪ್ಪಿ ಹೋಗುತ್ತಿದೆ. ಹಗೇವುಗಳು ಒಮ್ಮೆ ಕಡಿಸಿದರಾಯಿತು. ನೂರಾರು ವರ್ಷ ತಾಳಿಕೆ ಬರುತ್ತವೆ. ೨೦ ಕ್ವಿಂಟಲ್ ಜೋಳ ಸಂಗ್ರಹಿಸಿಡುವ ಹಗೇವು ನಮ್ಮ ಮನೆಯಲ್ಲಿದ್ದು ೧೯೬೦ನೇ ಸಾಲಿನಲ್ಲಿ ಹಗೇವು ಮಾಡಿಸಲಾಗಿದೆ. ಇತ್ತೀಚೆಗೆ ಜೋಳದಲ್ಲಾಗುವ ನುಶಿ ಕಾಟ ತಡೆಯಲು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲಗಳನ್ನು ಗೋಣಿ ಚೀಲದೊಳಗಡೆ ಇರಿಸಿ ಜೋಳ ತುಂಬಿಸಿ ಪ್ಲಾಸ್ಟಿಕ್ ಚೀಲವನ್ನು ಮೇಣದ ಬತ್ತಿಯ

ಉರಿಯಿಂದ ಬಂದ ಮಾಡುತ್ತಾರೆ. ನಂತರ ಗೋಣಿ ಚೀಲ ಹೊಲಿದು ಅದಕ್ಕೆ ಸೆಗಣಿಯಿಂದ ಸಾರಿಸಿ ಗಡಗಂಚಿಗಳ ಮೇಲೆ ಚೀಲಗಳನ್ನು ಒಂದರ ಮೇಲೊಂದು ಇಡುತ್ತಿದ್ದಾರೆ.

ಭತ್ತ ಸಂಗ್ರಹಣೆಗೆ ಕಣಜಗಳು :

ಇನ್ನೊಂದು ಪ್ರಮುಖ ಬೆಳೆಯಾದ ಭತ್ತದ ಸಂಗ್ರಹಣೆಗೆ ಕಣಜಗಳು ಉತ್ತಮ ಸಾಧನಗಳಾಗಿವೆ. ೩ಫೂಟಿನಿಂದ ೧೦ ಫೂಟ್ ವ್ಯಾಸದ ಅಗಲವಾದ ಬಿದಿರಿನಿಂದ ಮಾಡಿದ (ಹೆಣೆದ) ತಟ್ಟೆಗಳನ್ನು ವೃತ್ತಾಕಾರವಾಗಿ ನೆಲದ ಮೇಲೆ ಗಳ ಹಾಗೂ ಸಣ್ಣ ಕಟ್ಟಿಗೆಗಳ ಆಧಾರಕ್ಕೆ ನಿಲ್ಲಿಸುತ್ತಾರೆ. ಈ ಕಣಜಗಳ ಎತ್ತರ ೧೦ ಫೂಟಿನಷ್ಟು ಇರಬಹುದು. ಅವುಗಳಲ್ಲಿ ಭತ್ತವನ್ನು ಸುರುವಿ ತುಂಬಿ ರಾಡಿಯಿಂದ ಮೆತ್ತಿ ನಂತರ ಸೆಗಣಿಯಿಂದ ಸಾರಿಸುತ್ತಾರೆ. ಮಲೆನಾಡಿನ ಹಳ್ಳಿಗಳಲ್ಲಿ ಈಗಲೂ ಕಣಜಗಳಲ್ಲೇ ರೈತರು ಭತ್ತವನ್ನು ಸಂಗ್ರಹಿಸಿಡುತ್ತಾರೆ. ಹೀಗೆ ಕಣಜಗಳಲ್ಲಿಟ್ಟ ಭತ್ತದ ಕಾಳನ್ನು ಹಾಳು ಮಾಡುವ ಸೊರಬ (ಒಂದು ಜಾತಿಯ ಕೀಟ) ದಿಂದ ರಕ್ಷಿಸಬಹುದು. ಎರಡು ಮೂರು ವರ್ಷಗಳ ತನಕ ಭತ್ತ ಕಣಜದಲ್ಲಿ ಸುರಕ್ಷಿತವಾಗಿರುತ್ತದೆ. ಕಣಜವೂ ಖರ್ಚಿಲ್ಲದ ಉತ್ತಮ ಸಾಧನವಾಗಿದೆ.

ಗೋದಿಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯಲಾಗುತ್ತಿಲ್ಲ. ಆದರೂ ಗೋದಿಯನ್ನು ನುಸಿಯ ಬಾಧೆಯಿಂದ ರಕ್ಷಿಸಲು ಬೇವಿನ ತಪ್ಪಲು ಹಾಗೂ ಕುರಳು ಬೂದಿಯನ್ನು ಉಪಯೋಗಿಸುತ್ತಾರೆ. ಗಡಗಂಚಿಗಳ (ರೈತರು ಗಡಗಂಚಿಗೆ ಗಡಂಚಿ ಎಂದು ಕರೆಯುತ್ತಾರೆ) ಮೇಲೆ ಗೋದಿಯ ಚೀಲಗಳನ್ನು ಒಂದರ ಮೇಲೊಂದು ಇಡುತ್ತಾರೆ. ೨೦ ಚೀಲಗಳ ತನಕ ಗಡಂಚಿಯು ಹೊರಬಲ್ಲದು. ಗಡಂಚಿಗಳನ್ನು ಗಾಳಿ ಬೆಳಕು ಬರುವ ಸ್ಥಳದಲ್ಲಿ ಮನೆಗಳಲ್ಲಿ ಇಡಬಹುದಾಗಿದೆ. ಗೋದಿಯನ್ನು ಒಕ್ಕಿದ ನಂತರ ರಾತ್ರಿ ತೆಳ್ಳಗೆ ಕಣದಲ್ಲಿ ಹರಡಬೇಕು. ಬೆಳಿಗ್ಗೆ ತಂಪು ಹವೆಯಿರುವಾಗ ಗೋದಿಯ ಮೇಲೆ ಬೇವಿನ ಹಸಿ ತಪ್ಪಲನ್ನು ಹರಡಬೇಕು. ಬೂದಿಯನ್ನು ಮೇಲೆ ಹರಡಬೇಕು. ನಂತರ ಗೋಣಿಯ ಚೀಲಗಳಲ್ಲಿ ಗೋದಿಯನ್ನು ಗಲ್ಲಿಸಿ ಗಲ್ಲಿಸಿ ತುಂಬಿ ಚೀಲದ ಬಾಯಿ ಮೇಲೆ ಮತ್ತಷ್ಟು ಬೇವಿನ ತಪ್ಪಲು ಹಾಕಿ ಚೀಲದ ಬಾಯಿ ಹೊಲಿಯಬೇಕು. ಹೊಲಿದ ಚೀಲಗಳು ಬಾರಿಸಿದರೆ ಖಣ್ ಎಂಬ ಶಬ್ದವಾಗಬೇಕು. ಇದರಿಂದ ಗೋದಿಯನ್ನು ನುಸಿ ಬಾಧೆಯಿಂದ ರಕ್ಷಿಸಬಹುದಾಗಿದೆ.

ಕಡಲೆ ಸಂಗ್ರಹಣೆಗೆ ತಪ್ಪಲುಗಳು :

ಕಡಲೆಯನ್ನು ಒಕ್ಕಿದ ನಂತರ ಕಡಲೆಯ ತಪ್ಪಲ (ಹುಳಿಯ)ನ್ನು ಕಡಲೆಯಲ್ಲಿ ಮಿಶ್ರ ಮಾಡಬೇಕು. ಗೋಣಿ ಚೀಲದ ತಳಕ್ಕೆ ಒಂದು ಕಿಲೋದಷ್ಟು ಕಡಲೆ ಹುಳಿ ಹಾಕಿ ಚೀಲ ತುಂಬಬೇಕು. ನಂತರ ಚೀಲದ ಬಾಯಿಯನ್ನು ಹೊಲಿಯುವಾಗ ಮತ್ತೆ ಒಂದು ಕಿಲೋದಷ್ಟು

ಕಡಲೆ ಹುಳಿ ಹಾಕಿ ಚೀಲವನ್ನು ಹೊಲಿದು ಗಡಂಚಿಯ ಮೇಲೆ ಇಡಬೇಕು. ಇದರಿಂದ ಕಡಲೆ ಕಾಳನ್ನು ಕೊರೆದು ತೂತು ಮಾಡಿ ಹಾಳು ಮಾಡುವ ಬುರಬುರಿ (ಕೀಟದ ಹೆಸರು)ಯ ಬಾಧೆಯಾಗುವುದಿಲ್ಲ. ವರ್ಷಗಟ್ಟಲೆ ಕಡಲೆಯನ್ನು ಬೀಜಕ್ಕೆ ಅಥವಾ ಮನೆ ಬಳಕೆಗೆ ಸಂಗ್ರಹಿಸಿಡಲು ಕಡಲೆ ಹುಳಿ ತುಂಬಾ ಪರಿಣಾಮಕಾರಿಯಾಗಿದೆ.

ತೊಗರಿ :

ತೊಗರಿಯನ್ನು ಒಕ್ಕಿದ ನಂತರ ಚೀಲದಲ್ಲಿ ತುಂಬಿ ಹೊಲಿಯುವ ಮೊದಲು ಒಂದು ಕೊಡದಷ್ಟು ನೀರನ್ನು ಚೀಲದಲ್ಲಿ ಸುರುವಬೇಕು. ನೀರು ಕೆಳಗೆ ಬಸಿದುಹೋಗುವುದು. ನಂತರ ಚೀಲದ ಬಾಯಿ ಹೊಲಿದು ಇಡಬೇಕು. ಇದರಿಂದ ಬುರಬುರಿಯ ಕಾಟದಿಂದ ತೊಗರಿಯನ್ನು ರಕ್ಷಿಸಬಹುದಾಗಿದೆ.

ಗಳಿಗೆಗಳಲ್ಲಿ ಸಹಿತ ಧಾನ್ಯಗಳನ್ನು ಕೆಡದಂತೆ ಇಡುತ್ತಾರೆ. ಇತ್ತಿತ್ತಲಾಗಿ ಈ ಗಳಿಗೆಗಳನ್ನು ಮಾಡುವವರು ಇಲ್ಲದ್ದರಿಂದಾಗಿ ಗಳಿಗೆಗಳ ಬಳಕೆ ಕಡಿಮೆಯಾಗಿದೆ. ಸಣ್ಣ ಸಣ್ಣ ಗಡಿಗೆ ಮತ್ತು ಹರಿವೆಗಳಲ್ಲಿ ಸಹಿತ ಕಾಳುಗಳನ್ನು ಕಾಳಿನ ಬೀಜಗಳನ್ನು ಕೆಡದಂತೆ ರಕ್ಷಿಸಿಡುತ್ತಾರೆ. ಬೀಜಗಳ ರಕ್ಷಣೆಗೆ ಬೀಜಗಳನ್ನು ರಾತ್ರಿಯಿಡಿ ಆರಲು ಇಟ್ಟು ಬೆಳಿಗ್ಗೆ ಬೂದಿಯನ್ನು ಮಿಶ್ರ ಮಾಡಿ ಗಡಿಗೆಗಳಲ್ಲಿ ಅಥವಾ ಹರಿವೆಗಳಲ್ಲಿ ತುಂಬಿ ರಾಡಿಯಿಂದ ಮೆತ್ತಿ ಇಡುತ್ತಾರೆ.

ಮೇಲೆ ತಿಳಿಸಿದ ಎಲ್ಲಾ ವಿಧಾನಗಳು ರೈತರ ಕೈಯಳತೆಯಲ್ಲಿ ಲಭ್ಯವಾಗುವಂತಹವು. ಸಾಂಪ್ರದಾಯಿಕ ಪದ್ಧತಿಗಳೆನಿಸಿದರೂ ವೈಜ್ಞಾನಿಕ ಅಂಶಗಳನ್ನು ಒಳಗೊಂಡಿವೆ. ಮಿತವ್ಯಯದಿಂದ ಆರ್ಥಿಕ ಹೊರೆಯಾಗದೆ ಉತ್ತಮ ಉಪಾಯಗಳಾಗಿದ್ದು, ಪರಿಸರಕ್ಕೆ, ಆರೋಗ್ಯಕ್ಕೆ ಹಾನಿಯಾಗದಂತಹ ಈ ಧಾನ್ಯ ಸಂಗ್ರಹಣಾ ವಿಧಾನಗಳು ಸುರಕ್ಷಿತ ವಿಧಾನಗಳಾಗಿವೆ.

※

ಕೀಟ ಹತೋಟಿಗೆ ಸುಲಭ ಉಪಾಯಗಳು

'ಯಾವ ಔಷಧಕೂ ಕೀಡಿ ಸಾಯವಲ್ಲುವು'. ಇದು ಸಾಮಾನ್ಯವಾಗಿ ಎಲ್ಲ ರೈತರ ಬಾಯಿಂದ ಬರುವ ಹತಾಶೆಯ ಮಾತು. ರಾಸಾಯನಿಕ ಕೀಟನಾಶಕಗಳು ಕೊನೆಯ ಅಸ್ತ್ರ ಆಗಿದ್ದು ಇದನ್ನು ಗಮನಿಸದ ರೈತರು ಕೀಟ ನಾಶಕಗಳೇ ಕೀಟಗಳನ್ನು ನಾಶ ಮಾಡಬಲ್ಲವು ಎಂಬ ನಂಬಿಕೆಯಿಂದ ಸಿಕ್ಕ ಸಿಕ್ಕ ಔಷಧಿಗಳನ್ನು ಬಳಸಿ ಬಳಸಿ ನಿಸರ್ಗದಲ್ಲಿ, ಕೀಟ ಪ್ರಪಂಚದಲ್ಲಿ ಅಸಮತೋಲನವಾಗುವ ಹಂತಕ್ಕೆ ತಲುಪಿದೆ. ರಾಸಾಯನಿಕ ಕೀಟನಾಶಕಗಳು ಕೀಟಗಳ ನಿಯಂತ್ರಣ ಮಾಡಬಲ್ಲವೇ ಹೊರತು ಕೀಟಗಳನ್ನು ಸಂಪೂರ್ಣವಾಗಿ ನಾಶ ಮಾಡಲಾರವು. ನಿಸರ್ಗದಲ್ಲಿ ಕೀಟ ಪ್ರಪಂಚದಲ್ಲಿ ಆಗಿರುವ ಅಸಮತೋಲನ ನೀಗಿ ಸಮತೋಲನ ಸಾಧ್ಯವಾಗಲು ಕೀಟನಾಶಕಗಳ ಬದಲಾಗಿ ಜೈವಿಕ ಕೀಟನಾಶಕಗಳ ಮತ್ತು ಜೈವಿಕ ಕೀಟ ಹತೋಟಿ ವಿಧಾನಗಳನ್ನು ಅನುಸರಿಸಿದಾಗಲೇ ಕೀಟ ಹತೋಟಿ ಸಾಧ್ಯ. ರೈತರೇ ಸ್ವತಃ ಕಂಡುಕೊಂಡಿರುವ ಹಲವಾರು ಕೀಟ ಹತೋಟಿ ವಿಧಾನಗಳು ಸಾಕಷ್ಟಿವೆ. ಅವುಗಳ ಪರಿಚಯ ಮಾಡಿಕೊಡುವುದೇ ಈ ಲೇಖನದ ಉದ್ದೇಶ.

೧. ಮಾಗಿ ಉಳುಮೆ ಮಾಡುವುದು.

೨. ಹಂಗಾಮಿಗನುಸರಿಸಿ ಬೆಳೆ ಮಾಡುವುದು

೩. ಹದ, ಭೆದೆ ನೋಡಿ ಗಳೆ ಹೊಡೆಯುವುದು ಮತ್ತು ಬಿತ್ತನೆ ಮಾಡುವುದು

೪. ಸಾವಯವ (ಸೆಗಣಿ) ಗೊಬ್ಬರದ ಬಳಕೆ

೫. ಪರ್ಯಾಯ ಬೆಳೆ ಮಾಡುವುದು.

೬. ಮಿಶ್ರ ಬೆಳೆ ಮಾಡುವುದು.

೭. ಕೀಟಗಳನ್ನು ಕೈಯಿಂದ ಆರಿಸುವುದು.

೮. ಗಿಡಗಳನ್ನು ಜಾಡಿಸಿ ಕೀಟಗಳು ಜಲ್ಲಿಯಲ್ಲಿ ಬೀಳುವಂತೆ ಮಾಡುವುದು.

೯. ಪಕ್ಷಿಗಳನ್ನು ಕೀಟಗಳೆಡೆಗೆ ಆಕರ್ಷಿಸುವ 'ಚರಗ' ಚೆಲ್ಲುವುದು.

೧೦. ಕೋಳಿಗಳನ್ನು ಬಿಡುವುದು.

೧೧. ಸಂಗಾತಿ ಬೆಳೆಗಳನ್ನು ಬೆಳೆಯುವುದು.

೧. ಮಾಗಿ ಉಳುಮೆ ಮಾಡುವುದು :

ಹಿಂಗಾರಿ ಬೆಳೆ ಕಟಾವಾದ ಕೂಡಲೆ ಗಳೆ ಹೊಡೆಯಬೇಕು. ಬಹಳ ದಿನಗಳವರೆಗೆ ಹೊಲವನ್ನು ಹಾಗೆ ಬಿಡಬಾರದು. ಹೊಲದಲ್ಲಿರುವ ಹತ್ತಿಯ ಗಿಡಗಳನ್ನು ಹತ್ತಿ ಬಿಡಿಸಿದ ಕೂಡಲೇ ಕಿತ್ತು ರೆಂಟೆ ಅಥವಾ ನೇಗಿಲ ಹೊಡೆಯಬೇಕು. ಹಾಗೆ ಮಾಡುವುದರಿಂದ ಹತ್ತಿಯ ಬೆಳೆಯಲ್ಲಿದ್ದ ಕೀಟಗಳ ಕೋಶಗಳು, ತತ್ತಿಗಳು ನಾಶವಾಗಿ ಕೀಟಗಳ ವಂಶ ಚಕ್ರ ಬೆಳೆಯಲಾರದು. ಬಿಸಿಲಿಗೆ ಮಣ್ಣಿನಲ್ಲಿರುವ ಕೀಟಗಳ ಕೋಶಗಳು ನಾಶವಾಗುತ್ತವೆ.

೨. ಹಂಗಾಮಿಗನುಸರಿಸಿ ಬೆಳೆ ಮಾಡುವುದು :

ಹಂಗಾಮಿಗನುಸರಿಸಿ ಬೆಳೆ ಮಾಡುವುದರಿಂದ ಕೀಟಗಳ ಸಂತತಿ ಹೆಚ್ಚಾಗದಂತೆ ತಡೆಯಬಹುದಾಗಿದೆ. ಉದಾಹರಣೆಗೆ ಹೇಳಬೇಕೆಂದರೆ ಮುಂಗಾರಿ ಹಂಗಾಮಿನಲ್ಲಿ ತೊಗರಿ, ಹತ್ತಿ ಮತ್ತು ಬದನೆಯಂತಹ ಬೆಳೆಗಳಿಗೆ ಕೀಟಗಳ ಹಾವಳಿ ಹೆಚ್ಚಾಗುತ್ತದೆ. ಕೀಟಗಳು ಸಾಯುವುದಿಲ್ಲ, ಯಾವ ಕೀಟನಾಶಕಗಳೂ ಪರಿಣಾಮಕಾರಿಯಾಗಲಾರವು. ಯಾಕೆಂದರೆ ಮುಂಗಾರಿ ಹಂಗಾಮಿನಲ್ಲಿ ಮೋಡ ಕವಿದ ವಾತಾವರಣವಿದ್ದು ಮಳೆಯೂ ಆಗಾಗ ಸಣ್ಣಗೆ ಆಗುತ್ತಿರುತ್ತದೆ. ಬಿಸಿಲು ಇರದು, ಇಂತಹ ವಾತಾವರಣವು ಕೀಟಗಳ ಬೆಳವಣಿಗೆಗೆ ಸಂತತಿಯ ಅಭಿವೃದ್ಧಿಗೆ ಅನುಕೂಲಕರವಾಗಿರುತ್ತದೆ. ಅದೇ ಬೆಳೆಗಳನ್ನು ಹಿಂಗಾರಿ ಹಂಗಾಮಿನಲ್ಲಿ ಬೆಳೆದರೆ ಆಕಾಶವು ಶುಭ್ರವಾಗಿರುತ್ತದೆ. ಚಳಿಗಾಲವಿರುವುದರಿಂದ ಚಳಿಯು ಕೀಟಗಳ ವೃದ್ಧಿಯಾಗಲು ಬಿಟುವುದಿಲ್ಲ. ಹೀಗಾಗಿ ಬೆಳೆಗಳು ಕೀಟದ ಬಾಧೆ ಇಲ್ಲದೆ ಬೆಳೆದು ಲಾಭದಾಯಕವಾಗಬಲ್ಲವು.

೩. ಹದ, ಬೆದೆ ನೋಡಿ ಗಳೆ ಹೊಡೆಯುವುದು ಮತ್ತು ಬಿತ್ತನೆ ಮಾಡುವುದು :

ಇದರಿಂದಲೂ ಕೀಟಗಳ ಹತೋಟಿಯಾಗುತ್ತದೆ. 'ಹದ ನೋಡಿ ಹರಗಬೇಕು. ಬೆದೆ ನೋಡಿ ಬಿತ್ತಬೇಕು.' ಬೀಜಗಳು ಚೆನ್ನಾಗಿ ನಾಟುತ್ತವೆ. ಬೆಳೆಗಳು ಆರೋಗ್ಯ ಪೂರ್ಣವಾಗಿ ಬೆಳೆಯುತ್ತವೆ. ಸದೃಢವಾಗಿ ಬೆಳೆಯುತ್ತವೆ.

೪. ಸಾವಯವ ಗೊಬ್ಬರಗಳ ಬಳಕೆ :

ರಾಸಾಯನಿಕ ಗೊಬ್ಬರಗಳ ಬದಲಾಗಿ ಸಾವಯವ ಗೊಬ್ಬರಗಳ ಬಳಕೆ ಮಾಡುವುದರಿಂದ ಕೀಟಗಳ ಕಾಟ ಕಡಿಮೆ ಆಗುತ್ತದೆ. ಸಾವಯವ ಗೊಬ್ಬರದಿಂದ ಬೆಳೆಗಳು ಸದೃಢವಾಗಿ ಮತ್ತು ಆರೋಗ್ಯಪೂರ್ಣವಾಗಿ ಬೆಳೆಯುತ್ತವೆ. ಸಾವಯವ ಗೊಬ್ಬರ ಹಾಕಿದ ಬೆಳೆಯು ನಿಧಾನವಾಗಿ ಬೆಳೆಯುತ್ತದೆ. ಆದ್ದರಿಂದ ಕೀಟ ಮತ್ತು ರೋಗಗಳ ಬಾಧೆ ತಪ್ಪುವುದು.

೫. ಪರ್ಯಾಯ ಬೆಳೆ ಮಾಡುವುದು :

ಹಿಂದಿನ ರೈತರು 'ಕಾಲಗ್ಗೆ' ಪದ್ಧತಿ ಅನುಸರಿಸುತ್ತಿದ್ದರು. ಒಂದೇ ಬೆಳೆಯನ್ನು ಪದೇ ಪದೇ ಅದೇ ಹೊಲದಲ್ಲಿ ಬೆಳೆಯಬಾರದು. ನಾಲ್ಕು ವರ್ಷಗಳಿಗೊಮ್ಮೆ ಬೆಳೆಗಳಿಗೆ

ಪರ್ಯಾಯವಾದ ಬೆಳೆ ಬೆಳೆಯಬೇಕು. ಉದಾಹರಣೆಗೆ ಈ ವರ್ಷ ಹತ್ತಿ ಬಿತ್ತಿದ ಹೊಲಕ್ಕೆ ಬರುವ ವರ್ಷಗಳಲ್ಲಿ ಬೇರೆ ಬೇರೆ ಬೆಳೆಗಳನ್ನು ಮಾಡಬೇಕು. ಐದನೇ ವರ್ಷಕ್ಕೆ ಹತ್ತಿಯನ್ನು ಬಿತ್ತಬಹುದು. ಹೀಗೆ ಮಾಡುವುದರಿಂದ ಬೆಳೆಗೆ ಕಾಟ ಕೊಡುವ ಕೀಟಗಳ ಸಂತತಿಯ ವಂಶ ಚಕ್ರದ ಪ್ರಕ್ರಿಯೆ ನಿಂತು ಕೀಟಗಳ ಹತೋಟಿ ಸಾಧ್ಯವಾಗುತ್ತದೆ.

೬. ಮಿಶ್ರ ಬೆಳೆ–ಅಕ್ಕಡಿ ಬೆಳೆ ಮಾಡುವುದು :

ಹಿಂದಿನ ರೈತರು ಅಕ್ಕಡಿ ಬೆಳೆ ಮಾಡುತ್ತಿದ್ದರು. ಅದೇ ಮಿಶ್ರ ಬೆಳೆ ಪದ್ಧತಿ. ಕೇವಲ ಹತ್ತಿ, ಕೇವಲ ಜೋಳ, ಕೇವಲ ತೊಗರಿ ಮತ್ತು ಕೇವಲ ಕುಸುಬೆಯನ್ನು ಇಡಿಯಾಗಿ ಬೆಳೆಯಬಾರದು. ಎರಡು ಸಾಲು ಶೇಂಗಾ ಒಂದು ಸಾಲು ಹತ್ತಿ ಹಾಕಬೇಕು. ಐದು ಸಾಲು ಕಡಲೆ, ಒಂದು ಸಾಲು ಕುಸುಬೆ, ಆರು ಸಾಲು ಜೋಳ, ಒಂದು ಸಾಲು ತೊಗರಿ ಹೀಗೆ ಮಿಶ್ರ ಬೆಳೆ ಮಾಡಿದಾಗ ಕೀಟಗಳು ಬೆಳೆಗಳ ಆಯಾಹಂತದಲ್ಲಿ ಒಂದೊಂದು ಬೆಳೆಗೆ ಅಲ್ಪ ಸ್ವಲ್ಪ ಕಾಟ ಕೊಡುತ್ತವೆ. ಮುಖ್ಯ ಬೆಳೆ ಕೀಟದ ಕಾಟವಿಲ್ಲದೆ ಬೆಳೆಯುತ್ತದೆ. ಆದ್ದರಿಂದ ಮಿಶ್ರಬೆಳೆ ಅಥವಾ ಅಕ್ಕಡಿ ಬೆಳೆ ಮಾಡುವುದರಿಂದ ಕೀಟಗಳ ಕಾಟ ಕಡಿಮೆಯಾಗುತ್ತದೆ.

೭. ಕೀಟಗಳನ್ನು ಕೈಯಿಂದ (ತೆಗೆಯುವುದು) ಆರಿಸುವುದು :

ಕೀಟಗಳು ಗಾತ್ರದಲ್ಲಿ ದೊಡ್ಡವು ಆಗಿದ್ದರೆ ಯಾವ ಔಷಧಿಯನ್ನು ಸಿಂಪಡಿಸಿದರೂ ಸಾಯುವುದಿಲ್ಲ. ಅಂತಹ ಸಂದರ್ಭದಲ್ಲಿ ಕೀಟಗಳನ್ನು ಕೈಯಿಂದ ಆರಿಸಿ ತೆಗೆಯುವುದು ಸುಲಭವೂ ಮಿತವ್ಯಯವೂ ಆಗುತ್ತದೆ. ಸಣ್ಣ ಹುಡುಗರು, ದೊಡ್ಡವರು ಕೈಯಲ್ಲಿ ಪ್ಲಾಸ್ಟಿಕ್ ಡಬ್ಬಿ ಹಿಡಿದುಕೊಂಡು ಕೀಟಗಳನ್ನು ಕೈಯಿಂದ ಆರಿಸಿ ತೆಗೆಯಬಹುದಾಗಿದೆ. ಹಿಂದಿನ ವರ್ಷ ಕಡಲೆ ಬೆಳೆಯಲ್ಲಿ ಕೀಟಗಳ ಬಾಧೆ ಹೆಚ್ಚಾಗಿದ್ದು ಹೀಲಿಯೋಥಿಸ್ ಕೀಟಗಳನ್ನು ಕೈಯಿಂದ ಆರಿಸಿ ಪ್ಲಾಸ್ಟಿಕ್ ಚೀಲಗಳಲ್ಲಿ ಸಂಗ್ರಹಿಸಿಕೊಂಡು ಹೋಗಿ ನೆಲದಲ್ಲಿ ಹುಗಿಯಲಾಯಿತು. ಇದೇ ಪ್ರಕಾರ ವಾರಕ್ಕೊಮ್ಮೆಯಂತೆ ಆರಿಸಿ ತೆಗೆಯಲಾಯಿತು. ಕೇವಲ ಆರು ಜನರು ಒಂದು ಎಕರೆ ಹೊಲದಲ್ಲಿರುವ ಕೀಟಗಳನ್ನು ಆರಿಸಿ ತೆಗೆದರು, ಕೀಟಗಳು ನಿಯಂತ್ರಣದಲ್ಲಿ ಬಂದು ಬೆಳೆ ಚೆನ್ನಾಗಿ ಬಂತು.

೮. ಕೈಯಿಂದ ತೊಗರಿ ಗಿಡಗಳಲ್ಲಿದ್ದ ಕೀಟಗಳನ್ನು ಜಾಡಿಸುವುದು :

ಹೀಲಿಯೋಥಿಸ್ ಕೀಟಗಳು ರಾಸಾಯನಿಕ ಕೀಟನಾಶಕಗಳಿಗೆ ಹೊಂದಿಕೊಂಡಿದ್ದರಿಂದ ಅವು ಸಾಯಲಾರದ ಹಂತಕ್ಕೆ ತಲುಪಿವೆ. ಹೀಗಾಗಿ ರೈತರು ರಾಸಾಯನಿಕ ಕೀಟನಾಶಕಗಳನ್ನು ಸಿಂಪಡಿಸಿ ಬೇಸತ್ತರು. ತೊಗರಿ ಗಿಡಗಳ ಟೊಂಗೆಗಳನ್ನು ಬಾಗಿಸಿ ಜಲ್ಲಿ (ದೊಡ್ಡ ಬುಟ್ಟಿ) ಗಳಲ್ಲಿ ಜಾಡಿಸಿ ಸಂಗ್ರಹಿಸಲಾಯಿತು. ನಂತರ ಜಲ್ಲಿಯಲ್ಲಿ ಸಂಗ್ರಹವಾದ ಕೀಟಗಳನ್ನು ಹೊಲದಿಂದ ದೂರ ಒಯ್ದು ನೆಲದಲ್ಲಿ ಹುಗಿಯಲಾಯಿತು. ಇದೇ ರೀತಿ ವಾರಕ್ಕೊಮ್ಮೆಯಂತೆ ನಾಲ್ಕು ಸಲ ಜಾಡಿಸಿದರೆ ಕೀಟಗಳು ನಿಯಂತ್ರಣದಲ್ಲಿ

ಬರುತ್ತವೆ. ಹೀಗೆ ಮಾಡಲು ಅಕ್ಕಡಿ ಬೆಳೆಯಾದರೆ ಒಬ್ಬ ವ್ಯಕ್ತಿ ಒಂದು ದಿನಕ್ಕೆ ಒಂದು ಎಕರೆ ತೊಗರಿ ಬೆಳೆಯಲ್ಲಿರುವ ಕೀಟಗಳನ್ನು ಜಾಡಿಸಬಲ್ಲ. ಸ್ವತಃ ಲೇಖಕನೇ ತನ್ನ ಹೊಲದಲ್ಲಿ ಹೀಗೆ ಮಾಡಿದ್ದಾನೆ. ಇಡೀ ಬೆಳೆಯಾಗಿದ್ದರೆ ೪ ಜನ ಕೂಲಿಕಾರರು ಬೇಕು. ಎಷ್ಟು ಮಿತವ್ಯಯ ನೋಡಿ!

೯. 'ಚರಗ' ಚೆಲ್ಲುವದು (ಪಕ್ಷಿಗಳನ್ನು ಕೀಟಗಳತ್ತ ಆಕರ್ಷಿಸುವ ಉಪಾಯ):

ಗುಬ್ಬಿ, ಬೆಳ್ಳಕ್ಕಿ ಮೊದಲಾದ ಪಕ್ಷಿಗಳು ಬೆಳೆಗಳನ್ನು ಬಾಧಿಸುವ ಕೀಟಗಳನ್ನು ತಿನ್ನುತ್ತವೆ. ಕೀಟಗಳತ್ತ ಪಕ್ಷಿಗಳನ್ನು ಆಕರ್ಷಿಸಲು ಕೀಟನಾಶಕ ಬಳಸಬಾರದು. ಚುರುಮುರಿ, ಅಕ್ಕಿ, ಜೋಳದ ಕಾಳುಗಳನ್ನು ಬೆಳೆಗಳಲ್ಲಿ ಚೆಲ್ಲಬೇಕು ಮತ್ತು ಚರಗ (ಆಹಾರ ಪದಾರ್ಥಗಳನ್ನು) ಚೆಲ್ಲಬೇಕು. ಆಗ ಪಕ್ಷಿಗಳು ಕಾಳು ಅಥವಾ ಆಹಾರ ಪದಾರ್ಥಗಳನ್ನು ತಿನ್ನಲು ಬರುತ್ತವೆ. ಅದೇ ಸಮಯದಲ್ಲಿ ಕೀಟಗಳ ವಾಸನೆ ಪಕ್ಷಿಗಳಿಗೆ ಬರುವುದರಿಂದ ಕೀಟಗಳನ್ನು ತಿನ್ನುತ್ತವೆ. ಕೀಟಗಳ ನಿಯಂತ್ರಣಕ್ಕೆ ಇದೊಂದು ಜೈವಿಕ ವಿಧಾನ. ಉತ್ತರ ಕರ್ನಾಟಕದಲ್ಲಿ ಕೆಲವು ಕಡೆ ಶೀಗಿ ಹುಣ್ಣಿಮೆಗೆ, ಕೆಲವು ಕಡೆ ಎಳ್ಳಮಾವಾಸ್ಯೆಗೆ ಚರಗ ಚೆಲ್ಲುವ ಧಾರ್ಮಿಕ ಆಚರಣೆ ಇದೆ. ಇದು ಕೇವಲ ಧಾರ್ಮಿಕ ಆಚರಣೆ ಅಲ್ಲ. ಹಬ್ಬ ಹುಣ್ಣಿಮೆಯ ಆಚರಣೆ ಅಲ್ಲ, ಜೈವಿಕ ಕೀಟ ಹತೋಟಿ ವಿಧಾನವೂ ಆಗಿದೆ. 'ಅಳ್ಳಾಂಬಲಿ' ಮತ್ತು 'ಕೆರ್ರ್ಯಾಂಬಲಿ' ಎಂಬ ಆಚರಣೆಗಳು ಬೆಳೆಗಳ ಆಯಾ ಹಂತದಲ್ಲಿ ಕೀಟಗಳನ್ನು ಪಕ್ಷಿಗಳಿಂದ ಆಕರ್ಷಿಸಿ ತಿನ್ನುವಂತೆ ಮಾಡುವ ವಿಧಾನವಾಗಿದೆ.

೧೦. ಕೋಳಿಗಳನ್ನು ಬಿಡುವುದು :

ಕಡಲೆ ಬೆಳೆಗಳಲ್ಲಿರುವ ಸಣ್ಣ ಸಣ್ಣ ಕೀಟಗಳಿಗೆ ಕೋಳಿಗಳನ್ನು ಕಡಲೆ ಹೊಲದಲ್ಲಿ ಬಿಡುವುದರಿಂದ ಕೀಟಗಳನ್ನು ಕೋಳಿಗಳು ಆರಿಸಿ ತಿನ್ನುತ್ತವೆ. ಕಡಲೆ ಬೆಳೆಯು ಕೋಳಿಗಳ ಬಾಯಿಗೆ ನಿಲುಕುವಷ್ಟೇ ಬೆಳೆದಿರುವುದರಿಂದ ಕೀಟಗಳನ್ನು ಆರಿಸಿ ತಿನ್ನುತ್ತದೆ. ಕೋಳಿಗಳನ್ನು ಹೊಲಕ್ಕೆ ಒಯ್ದ ನಂತರ ಕೋಳಿಗಳ ಮಾಲಕರಿಗೆ ಅವುಗಳನ್ನು ಮುಟ್ಟಿಸಿದರಾಯಿತು. ೧೯೯೦ ರಿಂದಲೂ ಹಲವಾರು ರೈತರು ಈ ವಿಧಾನ ಅನುಸರಿಸುತ್ತಿದ್ದಾರೆ.

೧೧. ಸಂಗಾತಿ ಬೆಳೆಗಳನ್ನು ಬೆಳೆಯುವುದರಿಂದಲೂ ಕೀಟ ಹತೋಟಿ ಸಾಧ್ಯ :

ಹತ್ತಿ ಬೆಳೆಯ ಸುತ್ತಲೂ ಗುರೆಳ್ಳು ಬಿತ್ತಬೇಕು. ಗುರೆಳ್ಳಿನ ಅರಿಷಿಣ ಬಣ್ಣದ ಹೂವಿಗೆ ಕೀಟಗಳು ಆಕರ್ಷಿತವಾಗಿ ಹತ್ತಿಗೆ ಕಾಟ ಕಡಿಮೆಯಾಗುತ್ತದೆ. ಅದೂ ಅಲ್ಲದೆ ಹತ್ತಿಯ ಸಾಲಿನಲ್ಲಿ ಅಲ್ಲಲ್ಲಿ ಬೆಂಡೆ ಹಾಕಿದರೆ ಬೆಂಡೆ ಗಿಡಕ್ಕೆ ಕೀಟಗಳು ಆಕರ್ಷಿತವಾಗಿ ಬೆಂಡೆ ಕಾಯಿತಿಂದು ಹತ್ತಿಯ ಕಾಯಿಗೆ ಕೀಟಗಳ ಬಾಧೆ ಕಡಿಮೆ ಆಗುತ್ತದೆ.

ದನಗಳ ಸೆಗಣಿ, ಮೂತ್ರ, ಬೇವು, ಹುಲುಗಲ, ಸೀತಾಫಲ ಮತ್ತು ಬೆಳ್ಳುಳ್ಳಿಯಂತಹ ಪ್ರಾಣಿಜನ್ಯ ಮತ್ತು ಸಸ್ಯಜನ್ಯ ವಸ್ತುಗಳು ಕೀಟನಾಶಕಗಳಾಗಿ ರಾಸಾಯನಿಕ ಕೀಟನಾಶಕಗಳಿಗೆ ಪರ್ಯಾಯವಾಗಿ ಬಳಸಬಹುದಾಗಿದೆ.

ಮೇಲೆ ವಿವರಿಸಲಾದ ಎಲ್ಲ ವಿಧಾನಗಳು ಪರಿಸರ ಸ್ನೇಹಿ ಆಗಿವೆ, ಸ್ವಾವಲಂಬಿ ಕೃಷಿಗೆ ಪೂರಕ ಆಗಿವೆ. ಸಾಲ ಮಾಡಿ ಬಂಡವಾಳ ಹಾಕಿ ಮಾಡುವ ಕೀಟ ಹತೋಟಿ ವಿಧಾನಗಳಲ್ಲ. ಖರ್ಚಿಲ್ಲದೆ ರೈತರ ಕೈಯಳತೆಯಲ್ಲಿ ದೊರಕುವ ವಿಧಾನಗಳಾಗಿವೆ. ಜನರ ಮತ್ತು ಜಾನುವಾರುಗಳ ಆರೋಗ್ಯದ ಮೇಲೆ ಯಾವುದೇ ದುಷ್ಪರಿಣಾಮ ಬೀರಲಾರವು. ಕೀಟ ಪ್ರಪಂಚದಲ್ಲಾಗಿರುವ ಅಸಮತೋಲನವನ್ನು ನಿವಾರಿಸಬಲ್ಲ ವಿಧಾನಗಳಾಗಿವೆ. ಈ ವಿಧಾನಗಳು ಜೈವಿಕ ಕೀಟ ಹತೋಟಿ ವಿಧಾನಗಳೆನಿಸಿವೆ. ಅಷ್ಟೇ ಅಲ್ಲ ಬೆಳೆಯ ಇಳುವರಿ ಹೆಚ್ಚಿಸುವ ಲಾಭದಾಯಕವಾದ ವಿಧಾನಗಳಾಗಿವೆ. ಬೆಳೆಗಳು ಹೂ ಬಿಟುವ ಹಂತದಲ್ಲಿ ಜೇನು, ದುಂಬಿ ಮತ್ತು ಪಾತರಗಿತ್ತಿಯಂತಹ ಉಪಕಾರಿ ಕೀಟಗಳು ಸಾಯಲಾರದೆ ಹೂವುಗಳ ಪರಾಗಸ್ಪರ್ಶ ಕ್ರಿಯೆಗೆ ಈ ಕೀಟಗಳು ದೊಡ್ಡ ಉಪಕಾರ ಮಾಡುತ್ತವೆ. ರಾಸಾಯನಿಕ ಕೀಟನಾಶಕ ಬಳಸಿದಾಗ ಇಂತಹ ಉಪಕಾರಿ ಕೀಟಗಳು ಸಾಯುತ್ತವೆ. ಅದರ ಬದಲು ಈ ವಿಧಾನಗಳನ್ನು ಅನುಸಿರಿಸದರೆ ಉಪಕಾರಿ ಕೀಟಗಳ ಸಂತತಿ ಸಾಯದೆ ವೃದ್ಧಿಯಾಗುತ್ತದೆ. ಇಂದಿನ ವಾತಾವರಣದಲ್ಲಿ ರಾಸಾಯನಿಕಕ್ಕೆ ಪರ್ಯಾಯವಾಗಿ ಜೈವಿಕ, ಸಸ್ಯಜನ್ಯ ಮತ್ತು ಪ್ರಾಣಿಜನ್ಯ ಕೀಟನಾಶಕಗಳಲ್ಲದೆ ಮೇಲೆ ವಿವರಿಸಿದ ಹಲವಾರು ವಿಧಾನಗಳು ಅನಿವಾರ್ಯವೂ ಹೆಚ್ಚು ಮಹತ್ವದವೂ ಆಗಿವೆ.

ಸೃಷ್ಟಿಯಲ್ಲಿ ಒಂದನ್ನೊಂದು ಕೊಂದು ತಿಂದು ಬದುಕುವ ಸೂತ್ರವಿದೆ. ಬೇಕಾದದ್ದು ಅಲ್ಪಾಯುಷಿ. ಬೇಡಾದದ್ದು ದೀರ್ಘಾಯುಷಿ ಬೇಕಾದದ್ದು ಎಷ್ಟು ಆರೈಕೆ ಮಾಡಿದರೂ ಬೇಗ ಬೆಳೆಯದು. ಬೇಡಾದದ್ದು ಆರೈಕೆ ಮಾಡದೆ ಬೆಳೆಯಬಲ್ಲದು. ಕೀಟಗಳ ಪ್ರಪಂಚದಲ್ಲೂ ಭಕ್ಷಕ ರಕ್ಷಕ ಕೀಟಗಳಿವೆ. ಉಪಕಾರಿ ಮತ್ತು ಅಪಕಾರಿ ಕೀಟಗಳೂ ಇವೆ. ಈ ಸೂತ್ರದಂತೆ ರಾಸಾಯನಿಕ ಕೀಟನಾಶಕಗಳನ್ನು ಬಳಸಿದ್ದರಿಂದ ನಮಗೆ ಬೇಕಾದ ಕೀಟಗಳೆಲ್ಲ ಸತ್ತು ಅವುಗಳ ಸಂತತಿ ನಿರ್ನಾಮ ಆಗಿವೆ. ಹೀಗಾಗಿ ನಮಗೆ ಬೇಡವಾದ ಕೀಟಗಳ ಚೆಲ್ಲಾಟ ಹೆಚ್ಚಾಗಿದ್ದು, ಪ್ರಕೃತಿಯಲ್ಲಾದ ಅಸಮತೋಲನವು ಅತಿಯಾಗಿದೆ. ಇಂತಹ ಸಂದರ್ಭದಲ್ಲಿಹಲವಾರು ದೃಷ್ಟಿಯಿಂದ ಮೇಲೆ ತಿಳಿಸಿದ ವಿಧಾನಗಳನ್ನು ನಮ್ಮ ರೈತರು ಅಳವಡಿಸಿಕೊಳ್ಳಬೇಕಿದೆ. ಹಾಗೆ ಅಳವಡಿಸಿಕೊಳ್ಳಲು ರೈತರು ಮನಸ್ಸು ಮಾಡಬೇಕು.

*

ಸಾಂವಿ - ಖರ್ಚಿಲ್ಲದೆ ಆದಾಯ ತರುವ ಬೆಳೆ

ಸಾಂವಿ, ಬರಗ ಮತ್ತು ನವಣೆ ಈ ಮೂರು ಒಂದೇ ಪ್ರಕಾರದ ಬೆಳೆಗಳಾಗಿವೆ. ಆಕಾರದಲ್ಲಿ ಸಣ್ಣ ಕಾಳುಗಳಾಗಿದ್ದು ಮುಂಗಾರು ಹಂಗಾಮಿನಲ್ಲಿ ಬೆಳೆಯುತ್ತವೆ. ಬರಗ ಎರಡೇ ತಿಂಗಳಿನಲ್ಲಿ ಕೊಯ್ಲಿಗೆ ಬಂದರೆ ಸಾಂವಿ, ನವಣೆ ಮೂರು ತಿಂಗಳಿಗೆ ಕೊಯ್ಲಿಗೆ ಬರುತ್ತವೆ. ಸಾಂವಿಯನ್ನು ಬಿತ್ತಲು ಜೂನ್ ತಿಂಗಳ ಮೊದಲನೆ ವಾರ ಸಕಾಲ. ಉಸುಕು ಮಿಶ್ರಿತ ಕೆಂಪು ಮಣ್ಣಿನ ಮಸಾರಿ ಜಮೀನಿನಲ್ಲಿ ಮತ್ತು ಕಲ್ಲಿನ ಹಕ್ಕಲು ಜಮೀನಿನಲ್ಲೂ ಬೆಳೆಯುತ್ತದೆ. ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಸಾಂವಿಯನ್ನು ಬೆಳೆಯುತ್ತಾರೆ. ಅತಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಇಳುವರಿ ಕೊಡಬಲ್ಲ ಸಾಂವಿ ರೈತರನ್ನು ಬರಗಾಲದ ಬವಣೆಯಿಂದ ಪಾರು ಮಾಡುವ ಬೆಳೆಯಾಗಿದೆ.

ಬೀಜಗಳ ರಕ್ಷಣೆ ಬಹಳ ಸುಲಭ :

ಸಾಂವಿಯ ಬೀಜಕ್ಕಾಗಿ ಯಾವುದೇ ಕಂಪನಿಯ ಮೊರೆ ಹೋಗಬೇಕಾಗಿಲ್ಲ. ಹೈಬ್ರಿಡ್ ಬೀಜದ ಮೊರೆ ಹೋಗದೆ ರೈತರು ಮನೆಯಲ್ಲೇ ಸಾಂವಿಯ ಬೀಜ ಸಂಗ್ರಹಿಸುತ್ತಾರೆ. ಸಾಂವಿಯ ಬೀಜ ಸಂಗ್ರಹಿಸುವದು ಬಹಳ ಸುಲಭ. ಹಿಂದಿನ ವರ್ಷ ಬೆಳೆದ ಸಾಂವಿಯ ಕಾಳುಗಳನ್ನೇ ಬೀಜವಾಗಿ ಮುಂದಿನ ಹಂಗಾಮಿಗೆ ಬಳಸಬಹುದಾಗಿದೆ. ಪ್ರತಿ ವರ್ಷ ಪೇಟೆಗೆ ಹೋಗಿ ಅವರು ಹೇಳಿದ ದರಕ್ಕೆ ಖರೀದಿಸದೆ ಎಷ್ಟೋ ವರ್ಷಗಳಿಂದ ಬೀಜ ರಕ್ಷಣೆ ಮಾಡಿ ಬಿತ್ತನೆ ಮಾಡುತ್ತಿದ್ದಾರೆ. ಬೀಜಗಳ ರಕ್ಷಣೆಗೆ ವಿಶೇಷ ಕಾಳಜಿ ಬೇಕಾಗಿಲ್ಲ. ಯಾವ ಕ್ರಿಮಿನಾಶಕಗಳ ಅಥವಾ ಕೀಟನಾಶಕಗಳ ಬಳಕೆ ಇಲ್ಲದೆ ಗೋಣಿ ಚೀಲಗಳಲ್ಲಿ ಸಂಗ್ರಹಿಸಿಡಲು ಬರುತ್ತದೆ. ಸಾಂವಿಯ ಕಾಳುಗಳಿಗೆ ಕೀಟ, ನುಸಿಗಳ ಬಾಧೆಯಾಗದು. ಸಾಂವಿ ಜವಾರಿ ತಳಿಯಾಗಿದ್ದು ಎಷ್ಟೋ ವರ್ಷಗಳಿಂದಲೂ ರೈತರೇ ಸಂಗ್ರಹಿಸಿದ ಬೀಜಗಳನ್ನು ಬಿತ್ತುತ್ತಿದ್ದರೂ ಇಳುವರಿ ಕಡಿಮೆಯಾಗಿಲ್ಲ. ಸಾಂವಿಯ ಬೆಳೆಗೆ ಯಾವುದೇ ಕೀಟ ಹಾಗೂ ರೋಗದ ಬಾಧೆಯಿಲ್ಲದೆ ಬೆಳೆಯುವುದು. ಹೀಗಾಗಿ ಸಾಂವಿಯ ಬೆಳೆಗೆ ವಿಶೇಷ ಆರೈಕೆ ಬೇಕಾಗಿಲ್ಲ.

ಬರಗಾಲದಲ್ಲೂ ಬದುಕಿಸುವ ಬೆಳೆ :

ಅಲ್ಪ ಮಳೆಯಾದರೂ ಸಾಂವಿ ಬೆಳೆಯುತ್ತದೆ. ಕಳೆದ ವರ್ಷ ಸಾಂವಿ ಬಿತ್ತಿದ ಒಂದು ತಿಂಗಳಿನ ನಂತರ ಮಳೆಯಾಗಲೇ ಇಲ್ಲ. ಒಂದೂವರೆ ತಿಂಗಳು ಮಳೆಯಾಗದೆ ಸಾಂವಿ ಒಣಗಿ ಹೋಗಿತ್ತು. ಅಷ್ಟಾದರೂ ಮಳೆಯಾದ ಕೂಡಲೆ ಪುನಶ್ಚೇತನ ಪಡೆದು ಹೊಡೆ ಹಾಕಿದ್ದು ಆಶ್ಚರ್ಯಕರ ಸಂಗತಿ. ಸಾಂವಿಯ ಹುಲ್ಲು ದನಗಳಿಗೆ ಉತ್ತಮ ಆಹಾರ (ಮೇವು) ಆಗಿದೆ. ಸಾಂವಿಯ ಕಾಳಿನ ಮೇಲಿನ ಸಿಪ್ಪೆ ದನಕರುಗಳಿಗೆ ತವುಡಾಗಿದೆ. ಭತ್ತದ ಹುಲ್ಲಿನ ಹಾಗೆ ಸಾಂವಿಯ ಹುಲ್ಲು ಬಣವೆಗೆ ಹೊದಿಸಲು ಉಪಯುಕ್ತವಾಗಿದೆ. ಬೇಸಾಯದ ಖರ್ಚಿಲ್ಲದೆ, ಅಲ್ಪ ಮಳೆಯಲ್ಲಿ ಅಧಿಕ ಇಳುವರಿ ಕೊಡಬಲ್ಲ ಸಾಂವಿ ರೈತರಿಗೆ ವರದಾನವಾಗಿದೆ. ಸಾಂವಿ ಸಂಪೂರ್ಣ ಸ್ವಾವಲಂಬಿ ಬೆಳೆಯಾಗಿದೆ. ಸಾಂವಿಯ ಕಾಳುಗಳು ಸಾಸಿವೆ ಕಾಳಿನಷ್ಟೆ ಗಾತ್ರದವು ಆಗಿವೆ. ಸಾಂವಿ ಹುಲ್ಲು ಎರಡರಿಂದ ಮೂರು ಅಡಿ ಎತ್ತರಕ್ಕೆ ಬೆಳೆಯುತ್ತದೆ. ಸಾಂವಿಯಲ್ಲಿ ಬೇರೆ ಬೇರೆ ತಳಿಗಳಿಲ್ಲ. ಸಾಂವಿಯ ಕೃಷಿ ಸಾವಯವ ಕೃಷಿಯಾಗಿದೆ. ಎಕರೆಗೆ ಕನಿಷ್ಠ ಆರಿಂದೞ ಕ್ವಿಂಟಲ್ ಇಳುವರಿ ಬರುತ್ತದೆ. ಧಾರಣೆಯೂ ಕ್ವಿಂಟಲ್‌ಗೆ ಏನಿಲ್ಲೆಂದರೂ ಕ್ವಿಂಟಾಲ್‌ಗೆ ಸಾವಿರ ರೂಪಾಯಿಗಳಷ್ಟಾಗಿದೆ.

ಯೋಗ್ಯ ಸಾಂವಿ ಭೋಗ್ಯ ಸಾಂವಿ....... :

ಸಾಂವಿಯ ಕಾಳಿನೊಳಗೆ ಇರುವ ಅಕ್ಕಿಯನ್ನು ಅನ್ನ, ಹುಗ್ಗಿ ಮತ್ತು ಇಡ್ಲಿ ಮಾಡುತ್ತಾರೆ. ಸಾಂವಿ ಅನ್ನ ಭತ್ತದ ಅನ್ನಕ್ಕಿಂತ ರುಚಿಕರವಾಗಿದೆ. ಸಾಂವಿಯ ಅಕ್ಕಿ ಆರೋಗ್ಯಕ್ಕೆ ಬಹಳ ಉತ್ತಮ ಆಹಾರ ಎನಿಸಿದೆ. ಇದರಲ್ಲಿ ವಾತ, ಪಿತ್ಥ ಮತ್ತು ಕಫದ ಅಂಶಗಳು ಇಲ್ಲ. ಪಿಷ್ಟದ ಅಂಶ ಬಹಳ ಕಡಿಮೆ ಇದೆ. ಸಕ್ಕರೆ ಕಾಯಿಲೆಯಿಂದ ಬಳಲುವವರಿಗೆ ಸಾಂವಿ ಅಕ್ಕಿ ಉತ್ತಮ ಆಹಾರ ಎನಿಸಿದೆ. ಸಕ್ಕರೆ ಕಾಯಿಲೆ ಅಷ್ಟೇ ಅಲ್ಲ ರಕ್ತದ ಒತ್ತಡ ಉಳ್ಳವರೂ ಧಾರಾಳವಾಗಿ ಉಣ್ಣಬಹುದು. ಬೊಜ್ಜು, ಮೈ ಉಳ್ಳವರಿಗೂ ಸಾಂವಿ ಅನ್ನ ಯೋಗ್ಯ ಆಹಾರವಾಗಿದೆ. ಕೊಬ್ಬಿನ ಅಂಶ (ಕೊಲೆಸ್ಟ್ರಾಲ್) ಕಡಿಮೆ ಇರುವದರಿಂದ ಸಾಂವಿ ಅಕ್ಕಿ ಉತ್ತಮ ಆರೋಗ್ಯಕ್ಕೆ ಹೇಳಿ ಮಾಡಿಸಿದಂತಿದೆ. ಒಟ್ಟಿನಲ್ಲಿ ಸಾಂವಿಯೂ ರಾಗಿಯ ಹಾಗೆ 'ಯೋಗ್ಯ ಸಾಂವಿ, ಭೋಗ್ಯ ಸಾಂವಿ, ಆರೋಗ್ಯವಂತ ಸಾಂವಿ' ಎನಿಸಿದೆ.

ಜನರ ಆರೋಗ್ಯಕ್ಕೆ ಉತ್ತಮ ಆಹಾರವಾಗಿರುವ ಸಾಂವಿ ಮಣ್ಣಿನ ಆರೋಗ್ಯವನ್ನು ರಕ್ಷಿಸುವ ಬೆಳೆಯಾಗಿದೆ. ಇಂತಹ ಸಾಂವಿಯನ್ನು ಉಳಿಸಿ (ಇದರ ಬೀಜಗಳನ್ನು ರಕ್ಷಿಸಿ), ಬೆಳೆಸಿ, ಬಳಸಿ ಉತ್ತಮ ಆರೋಗ್ಯಕ್ಕೆ ಪ್ರೇರಕವಾಗಿಸಿದ ರೈತ ಸಮುದಾಯಕ್ಕೆ ಧನ್ಯವಾದ ಹೇಳಲೇಬೇಕು. 'ಯಾರು ನನಗೆ ಸಾಟಿ' ಎಂದು ಹೈಟೆಕ್ ಯುಗದ ತಂತ್ರಜ್ಞಾನಕ್ಕೆ ಸವಾಲೆಸೆದ ಸಾಂವಿಯ ಬಗ್ಗೆ ಎಷ್ಟು ಬರೆದರೂ ಕಡಿಮೆಯೆ.

*

ಸಾವಯವ ಕೃಷಿಯ ಸಾಧ್ಯತೆಗಳು

ಒಕ್ಕಲುತನ ಸುಧಾರಿಸಿದ ಶಬ್ದವಾಗಿದೆ. 'ಕಮತ' ಎಂದು ಕರೆಯುತ್ತಿದ್ದ ನಾವೀಗ ಹಸಿರು ಕ್ರಾಂತಿಯ ಮೂಲಕ ಒಕ್ಕಲುತನದಲ್ಲಿ ಸುಧಾರಣೆ ತಂದು ಆಧುನಿಕ ಕೃಷಿ (ಒಕ್ಕಲುತನ) ಎಂದು ಕರೆಯುತ್ತಿದ್ದೇವೆ. ಇತ್ತೀಚೆಗೆ ಒಕ್ಕಲುತನಕ್ಕೆ ಎಷ್ಟು ಖರ್ಚು ಮಾಡಿದರೂ ಕಡಿಮೆಯೆ. ಸುಶಿಕ್ಷಿತ ಯುವಕರು ಒಕ್ಕಲುತನದಿಂದ ದೂರಾಗುತ್ತಿದ್ದು, ಪಟ್ಟಣಗಳ ಕಡೆಗೆ ಆಕರ್ಷಿತರಾಗಿದ್ದಾರೆ. ಬಹಳ ಜನರಿಗೆ ಒಕ್ಕಲುತನದಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆ. ಹೀಗಾಗಿ ಕೃಷಿ ಕೂಲಿಕಾರರದಂತೂ ದೊಡ್ಡ ಕೊರತೆ. ಕುಲಕಸುಬೆಂದು ಜೀವನೋಪಾಯಕ್ಕಾಗಿ ವ್ಯವಸಾಯ ಮಾಡುವುದು ಅನಿವಾರ್ಯವೂ ಆಗಿದೆ. ಕೆಲವೇ ತೋಟದ ಬೆಳೆಗಳು ಸಂಬಾರ ಪದಾರ್ಥದ ಬೆಳೆಗಳು ಹಣದ ಬೆಳೆಗಳಾಗಿವೆ. ಅಲ್ಲಿ ಸರಿಯಾದ ಯೋಜನೆ, ಮಾರ್ಗದರ್ಶನ ಸಮರ್ಪಕ ನಿರ್ವಹಣೆ ಇರುವುದರಿಂದ ಅಂಥ ಬೆಳೆಗಳು ನಿರೀಕ್ಷಿತ ಉತ್ಪಾದನೆ ಕೊಡುತ್ತಿವೆ. ಸಂಗ್ರಹಣೆ ಸುಲಭವಾಗಿ ಸಂಸ್ಕರಣಾ ವಿಧಾನಗಳನ್ನು ಅನುಸರಿಸಿ ಮಾರುಕಟ್ಟೆಯಲ್ಲಿ ಧಾರಣೆಯೂ ಸಿಕ್ಕು ಉದ್ಯಮದ ಸ್ವರೂಪ ಆ ಬೆಳೆಗಳಿಗೆ ಮಾತ್ರ ದೊರಕಿದೆ. ಉಳಿದೆಲ್ಲಾ ಬೆಳೆಗಳನ್ನು ಔದ್ಯಮಿಕ ನಿರ್ವಹಣಾ ಸೂತ್ರಗಳಿಗೆ ಅನ್ವಯಿಸಿದರೆ ಕೃಷಿ ಯಾರಿಗೂ ಬೇಸರವಾಗಲಿಕ್ಕಿಲ್ಲ. ಯಾರೂ ನಿರುದ್ಯೋಗಿಗಳೂ ಆಗಲಿಕ್ಕಿಲ್ಲ. ಆದರೆ ಪರಿಸ್ಥಿತಿಯು ಬೇರೆಯೇ ಆಗಿದ್ದು ಇಂದು ಒಕ್ಕಲುತನ ಸಮಸ್ಯೆಗಳ ಆಗರವೇ ಆಗಿದೆ.

ಒಂದು ಚೀಲ ಬೆಳೆದ ಹೊಲದಲ್ಲಿ ಹತ್ತು ಚೀಲ ಬೆಳೆಯುತ್ತಿದ್ದೇವೆ. ನೂರು ರೂಪಾಯಿಗೆ ಮಾರಾಟವಾಗುವ ಒಂದು ಚೀಲ ಕಾಳು ಐದು ನೂರು ರೂಪಾಯಿಗೆ ಮಾರಾಟವಾಗುತ್ತಿದೆ. ಟ್ರ್ಯಾಕ್ಟರ್‌ಗಳು ಬಂದಿವೆ. ಒಕ್ಕುವ ಯಂತ್ರಗಳು ಬಂದಿವೆ. ಪಾತಾಳದಲ್ಲಿರುವ ನೀರನ್ನು ಮೇಲೆತ್ತುವ ಸಬ್‌ಮರ್ಸಿಬಲ್ ಪಂಪುಗಳು ಬಂದಿವೆ. ಭೂಮಿ ಇದ್ದಷ್ಟೇ ಇದ್ದು ಜನಸಂಖ್ಯೆ ಹೆಚ್ಚಾಗುತ್ತಿದೆ ಎಂದು ಕೃಷಿಯಲ್ಲಿ ಆಧುನಿಕತೆ ತರಲೆಂದು ಹಸಿರು ಕ್ರಾಂತಿ ಮಾಡಲಾಯಿತು. ಹಸಿರು ಕ್ರಾಂತಿಯ ದುಷ್ಪರಿಣಾಮಗಳು ಒಂದಲ್ಲ ಹತ್ತಾರು.

ಇಂದು ಒಕ್ಕಲುತನದಲ್ಲಿ ನಿರಾಶೆ ಹುಟ್ಟಲು ಈ ಹಸಿರು ಕ್ರಾಂತಿಯ ದುಷ್ಪರಿಣಾಮಗಳೇ ಕಾರಣ ಎಂದರೆ ತಪ್ಪಾಗಲಿಕ್ಕಿಲ್ಲ. ಇಷ್ಟು ಗೊಬ್ಬರ, ಇಷ್ಟು ಕ್ರಿಮಿನಾಶಕಗಳು, ಹೈಬ್ರಿಡ್

ಬೀಜ, ಟ್ರ್ಯಾಕ್ಟರ್ ಉಳುಮೆ ಮಾಡಿ ಬಿತ್ತಿದರಾಯಿತು. ಇಷ್ಟು ಉತ್ಪನ್ನ ಬರುವುದೆಂಬ ಭರವಸೆ ಉಳಿದಿಲ್ಲ. ರಾಸಾಯನಿಕ ಗೊಬ್ಬರಗಳು ಮಣ್ಣನ್ನು ಕೆಡಿಸಿವೆ. ಕ್ರಿಮಿನಾಶಕಗಳು ಪರಿಸರವನ್ನು ಹಾಳು ಮಾಡಿವೆ. ಹೈಬ್ರಿಡ್ ಬೀಜಗಳು ಬರ ಬರುತ್ತಾ ಕಡಿಮೆ ಇಳುವರಿ ಕೊಡುತ್ತಿವೆ. ಗೊಬ್ಬರ ಕೀಟೌಷಧಿಗಳು, ಹೈಬ್ರಿಡ್ ಬೀಜಗಳ ಬೆಲೆಗಳಂತೂ ಒಮ್ಮೆಲೆ ಎರಡು ಪಟ್ಟು ಹೆಚ್ಚಾಗಿದ್ದು ಅದನ್ನು ಬಳಸದೆ ಉತ್ಪನ್ನ ಬರಲಾರದೆಂಬ ಭಾವನೆ ಮೂಡಿದೆ. ಕೃಷಿ ಕೂಲಿಕಾರರು ಹೆಚ್ಚು ಕೂಲಿ ಬೇಡುತ್ತಿದ್ದಾರೆ. ಕೃಷಿ ಉತ್ಪನ್ನಗಳ ಬೆಲೆಗಳು ಈ ಎಲ್ಲಾ ಉತ್ಪಾದನಾ ವೆಚ್ಚಗಳ ಏರಿಕೆಯ ಪ್ರಮಾಣದಲ್ಲಿ ಏರದೆ ಇಳಿಯುತ್ತಿದ್ದು ಅನಿಶ್ಚಿತ್ತತೆ ಹೆಚ್ಚಾಗಿದೆ. ಭೂಮಿತಾಯಿ ಇಂದು ಭೂಮಿಯಾಗಿದೆ. ಇದಕ್ಕೆಲ್ಲ ಕಾರಣವೇನು, ಎಲ್ಲಿ ತಪ್ಪಿದ್ದೇವೆ, ಎಲ್ಲಿ ನೋವಾಗಿದೆ, ಎಲ್ಲಿ ಸರಿಪಡಿಸಬೇಕು ಎಂಬುದನ್ನು ಆಲೋಚಿಸಬೇಕಿದೆ. ಸಾಂಪ್ರದಾಯಿಕ ವಿಧಾನಗಳೆಂದರೆ ಮತ್ತೆ ಮೂಢನಂಬಿಕೆ, ದೈವ, ಹಣೆಬರಹ ನಂಬಿ ಮಾಡುವ ಕಮತ ಅಲ್ಲ, ಆಧುನಿಕ ಕೃಷಿಗೆ ಪರ್ಯಾಯ ವಿಧಾನಗಳೆಂದೂ ಕರೆಯಬಹುದು.

ಸಹಜ ಕೃಷಿ ಇಲ್ಲಾ ಸಾವಯುವ ಕೃಷಿಯತ್ತ ಹೊರಳುವುದು ಇಂದು ಅನಿವಾರ್ಯವಾಗಿದೆ. ಅಂದರೆ ಪೂರ್ತಿಯಾಗಿ ಸಾಂಪ್ರದಾಯಿಕ ಕೃಷಿಯತ್ತ ಹೊರಳಬೇಕೆಂದಲ್ಲ ಹಾಗೆ ಹೊರಳುವುದು ಸುಲಭದ ಮಾತೂ ಅಲ್ಲ. ಯಾಕೆಂದರೆ ನಾವು ಬಿಸಿಲುಗುದುರೆಯ ಬೆನ್ನು ಹತ್ತಿ ಓಡಿ ಓಡಿ ದೂರ ಹೋಗಿದ್ದು ಸಾಕಷ್ಟು ದಣಿವೂ ನಮಗಾಗಿದೆ. ಒಮ್ಮೆಲೆ ಅಷ್ಟು ವೇಗದಿಂದ ಹಿಂದೆ ಬರಲು ಶಕ್ತಿಯೂ ಇಲ್ಲ. ನಿಧಾನವಾಗಿಯಾದರೂ ಹಿಂದಿರುಗಬೇಕಾಗಿದೆ ಎಂಬ ಮಾತನ್ನು ಒಪ್ಪಿಕೊಳ್ಳಬೇಕಾಗಿದೆ. ಅದಕ್ಕಾಗಿ ಹಿಂದಿನ ರೈತರು ಅನುಸರಿಸುತ್ತಿದ್ದ ಕೆಲವು ವಿಧಾನಗಳನ್ನು ಇಂದಿನ ಕೃಷಿಯಲ್ಲಿ ಅಳವಡಿಸಿಕೊಂಡರೆ ಕೆಲವಾದರೂ ಸಮಸ್ಯೆಗಳಿಗೆ ಪರಿಹಾರ ದೊರಕಬಲ್ಲದು. ಉತ್ಪಾದನಾ ವೆಚ್ಚವೂ ಕಡಿಮೆಯಾದೀತು. ಆ ವಿಧಾನಗಳೆಂದರೆ ಹದಾ, ಬೆದಿ, ಹಂಗಾಮು ಅತಿ ಮುಖ್ಯವಾದವು. ಸೆಗಣಿ ಗೊಬ್ಬರದ ಬಳಕೆ, ಮಣ್ಣಿನ ಹದಾ, ಪರಿಸರದ ಸಮತೋಲನವನ್ನು ಕಾಪಾಡುವ ಇನ್ನೂ ಹಲವಾರು ವಿಧಾನಗಳು ಇವೆ.

'ಹದ ನೋಡಿ ಹರಗು';

ಎಂಬುದು ಹಳೆಯ ಗಾದೆ ಮಾತು. ನಾವಿಂದು ಭೂಮಿಯ 'ಹದ'ವೆಂದರೇ ನೆಂಬುದೇ ತಿಳಿಯದವರಾಗಿದ್ದೇವೆ. ಬೆಳಕಾಗುವುದರಲ್ಲಿ ರೈತ ಹೊಲದಲ್ಲಿರುತ್ತಿದ್ದ. ಈಗ ಹತ್ತು ಗಂಟೆಯಾದರೂ ಹೊಲಕ್ಕೆ ಹೋಗುವುದಿಲ್ಲ. ಹೊಲದ ಹದವೆಂದರೆ ಹೊಲದ ಮಣ್ಣು ಬಿರುಸಾಗಿರಬಾರದು. ಹೊಲದಲ್ಲಿ ತೇವಾಂಶ ಹೆಚ್ಚಿದ್ದು ರಾಡಿಯೂ ಇರಬಾರದು. ಅಂತಹ ಸಂದರ್ಭ ನೋಡಿ ಗಳೆ ಹೊಡೆಯುವುದರಿಂದ ಭೂಮಿಯ ಮಣ್ಣನ್ನು ಮೃದುವಾಗಿರಿಸಲು ಬರುತ್ತದೆ. ಅಂಥ ಹೊಲದಲ್ಲಿ ಬೀಜಗಳು ಚೆನ್ನಾಗಿ ಬೆಳೆಯುತ್ತವೆ. ಹದ ಎಂದರೆ ಹೊಲದಲ್ಲಿ ಗೊಬ್ಬರ ಹಸಿ ಇರಬೇಕು. ಮಣ್ಣನ್ನು ಮುಟಿಗೆಯಲ್ಲಿ ಹಿಡಿದು ಉಂಡಿ ಮಾಡಿದರೆ ಉಂಡಿ ಆಗಬೇಕು ಅದು ಹದ ಬಂದ ಕಾಲ. ಬಿರುಸಾಗಿರಲಿ

ನೇಗಿಲ ಹೂಡಿ ಬಿಡುವರು. ಮೊದಲಿ ಮೂಕ ಬಸವಣ್ಣ ಹೂಡಿ ಹೊಡೆದದ್ದೆ ಹೊಡೆದದ್ದು. ಹೀಗಾಗಿ ಭೂಮಿ ಗಟ್ಟಿಯಾಗುತ್ತಿದ್ದು ಎತ್ತಿನ ಜೊತೆ ಗುದ್ದಾಟ ಬೇಡವೆಂದು ಟ್ರಾಕ್ಟರ್‌ಗಳನ್ನು ಸಾಲ ಮಾಡಿಕೊಂಡು ತರುವರು. ಟ್ರ್ಯಾಕ್ಟರ್ ಬೇಸಾಯದಿಂದ ಭೂಮಿಗೆ ಮಣ್ಣಿಗೆ ಎಷ್ಟಾದರೂ ಅನುಕೂಲವಿದೆ ಎಂಬುದನ್ನು ನಮ್ಮ ಕೃಷಿ ವಿಜ್ಞಾನಿಗಳು, ಸಂಶೋಧಕರು ಈಗಲೂ ಬಾಯಿ ಬಿಡುತ್ತಿಲ್ಲ.

'ಬೆದಿ' ನೋಡಿ ಬಿತ್ತು; ಎನ್ನುವುದು ಇನ್ನೊಂದು ಗಾದೆ ಮಾತು. ಬಿತ್ತುವಾಗ ಭೂಮಿ ಒಂದು ರೀತಿಯಲ್ಲಿ ಹದಮಾಡಿ ಇಟ್ಟಂತಾಗಿದ್ದು ಮಣ್ಣಿನಲ್ಲಿ ಬೀಜ ಚೆಲ್ಲಿದರೆ ತಾನೇ ಮಣ್ಣಲ್ಲಿ ಮುಳುಗಬೇಕೆಂದು ಹೇಳುತ್ತಾರೆ. ಭೂಮಿಯ ಮಣ್ಣು ಮೃದುವಾಗಿದ್ದರೆ ಮಾತ್ರ ಇದು ಸಾಧ್ಯ. ರಾಸಾಯನಿಕ ಗೊಬ್ಬರ ಬಳಸಿ ಬಳಸಿ ಭೂಮಿಯ ಮಣ್ಣು ಕೆಟ್ಟಿದೆ. ಅದಕ್ಕೆ ನಮ್ಮ ತಿಪ್ಪೆಯ ಗೊಬ್ಬರ ಅಲಕ್ಷ್ಯ ಮಾಡಿದ್ದೇ ಕಾರಣವಾಗಿದೆ. ಸಾವಯವ ಪದಾರ್ಥಗಳನ್ನು ಎಷ್ಟು ಸಾಧ್ಯವೋ ಅಷ್ಟನ್ನು ಮಣ್ಣಿಗೆ ಸೇರಿಸಬೇಕು. ಇದು ಸಾವಯವ ಕೃಷಿಯ ಮುಖ್ಯ ಉದ್ದೇಶ. ದಾರಿಯಲ್ಲಿ ಸೆಗಣಿ ಬಿದ್ದರೆ ಅದನ್ನು ಕಾಲಿನಿಂದ ಗುರ್ತಿಸಿ 'ಇದನ್ನು ನಾನು ಒಯ್ಯುತ್ತೇನೆ' ಎಂದು ಸಂಕೇತ ಮಾಡಿ ಹೋಗುತ್ತಿದ್ದರು. ಇಂದು ನೋಡಿದರೆ ಸಗಣಿ ಎಲ್ಲಿ ಬಿದ್ದರೂ ನೋಡುವವರಿಲ್ಲ. ಬಾಗಿಲಲ್ಲೇ ಸೆಗಣಿ ಬಿದ್ದರೂ ಮನೆಯಲ್ಲಿರುವ ಹೆಂಗಸರು ಗಂಡಸರು ನೋಡುವುದಿಲ್ಲ.

ಹಂಗಾಮಿಗನಸರಿಸಿ ಬೆಳೆ ಮಾಡುವದು :

ಹಂಗಾಮುಗಳಲ್ಲಿ ಎರಡು; ಮುಂಗಾರಿ ಹಾಗೂ ಹಿಂಗಾರಿ. ಬೆಳೆಗಳನ್ನು ಹಂಗಾಮಿಗೆ ಅನುಸರಿಸಿ ಮಾಡುವುದರಿಂದ ಕಳೆಗಳ ನಿಯಂತ್ರಣ ಮಾಡಲು, ಕೂಲಿಕಾರರ ಕೊರತೆ ನೀಗಿಸಲು, ಕೀಟ ಹಾಗೂ ರೋಗಗಳ ಬಾಧೆಯಿಂದ ಬೆಳೆಗಳನ್ನು ರಕ್ಷಿಸಲು ಬರುತ್ತದೆ. ಮುಂಗಾರಿ ಹಂಗಾಮಿನಲ್ಲಿ ಮಳೆಗಾಲವಿರುತ್ತದೆ. ಹಿಂಗಾರಿ ಹಂಗಾಮಿನಲ್ಲಿ ಚಳಿಗಾಲವಿರುತ್ತದೆ. ನಂತರ ಬೇಸಿಗೆ ಪ್ರಾರಂಭವಾಗುವುದು. ಮಳೆಗಾಲವಿರುವುದರಿಂದ ಮುಂಗಾರಿಯಲ್ಲಿ ಜೋಳ ಬಿತ್ತಿದರೆ ಕಳೆ ಕಸಗಳು ಹೆಚ್ಚುವುವು. ಕಾಳು ಕರ್‍ರಗಾಗುತ್ತದೆ. ಒಕ್ಕುವ ಸಮಯದಲ್ಲಿ ಒಕ್ಕಣೆ ಮಾಡಲು ಮಳೆಗಾಲವಿದ್ದು ಕೊಯ್ಲು ಮತ್ತು ಒಕ್ಕಣೆಗೆ ತೊಂದರೆಯಾಗುತ್ತದೆ. ಅದೇ ಜೋಳವನ್ನು ಹಿಂಗಾರಿಯಲ್ಲಿ ಬಿತ್ತಿದರೆ ಹಿಂಗಾರಿಯಲ್ಲಿ ಚಳಿ ಇರುವುದರಿಂದ ಸುಳಿ ಬೀಳುವ, ಹೇನು ನುಸಿಗಳ ಕಾಟ, ಕಾಳು ಕೊರೆವ ಕೀಟದ ಹಾವಳಿ ಇಲ್ಲದೆ, ಕಳೆಕಸಗಳ ಸಮಸ್ಯೆ ಇಲ್ಲದೆ ಉತ್ತಮ ರೀತಿಯ ಬೆಳೆ ಬರುವುದು ಹಾಗೂ ಕೊಯ್ಲಿನ ಸಂದರ್ಭದಲ್ಲಿ ಒಕ್ಕುವಾಗ ಮಳೆ ಇಲ್ಲದಿರುವುದರಿಂದ ಅನುಕೂಲಕರವಾಗುವುದು. ಮುಂಗಾರಿನಲ್ಲಿ ಮಳೆ ಬರುವದೆಂಬ ಭಯದಿಂದ ಕೂಲಿಗಳು ಕೇಳಿದಷ್ಟು ಹಣ ಕೊಟ್ಟು ಕೊಯ್ಲು ಮಾಡಬೇಕಾಗುತ್ತದೆ. ಹಿಂಗಾರಿಯಲ್ಲಿ ಯಾವ ಭಯವೇ ಇಲ್ಲ. ಹೆಚ್ಚಾಗಿ ಹಿಂಗಾರಿ ಬೆಳೆಗಳು ಹುಟ್ಟಲು ಅನುಕೂಲಕರ ತೇವಾಂಶವಿದ್ದರೆ ಸಾಕು. ಚಳಿಯ ವಾತಾವರಣದಲ್ಲೇ ಬೆಳೆಯುತ್ತದೆ.

ಇನ್ನೊಂದು ಉದಾಹರಣೆ ಎಂದರೆ ಡಿ.ಸಿ.ಎಚ್. ಹತ್ತಿಯನ್ನು ಮುಂಗಾರಿಯಲ್ಲಿ ಬೆಳೆಯುವುದರಿಂದ ಕಳೆ ಕಸಗಳ ಸಮಸ್ಯೆ, ರೋಗ ಕೀಟಗಳ ಉಪದ್ರವ, ಹತ್ತಿ ಬಿಡಿಸುವಾಗ ಮೇಲೆ ಮಳೆಯಾದೀತೆಂಬ ಭಯವಿರುತ್ತದೆ. ಅದರ ಬದಲಾಗಿ ಜೈಧರ ಹತ್ತಿಯನ್ನು (ಹಿಂಗಾರಿಯಲ್ಲಿ ಈಗಲೂ ಕುಂದಗೋಳ ತಾಲೂಕಿನಲ್ಲಿ ರೈತರು ಬೆಳೆಯುತ್ತಿರುವಂತೆ) ಬೆಳೆದರೆ, ಕಳೆ ಕಸಗಳ ಬಾಧೆ ಇರದು, ರೋಗ ಕೀಟಗಳ ಬಾಧೆ ಇರದು, ಕೊಯ್ಲಿಗೆ ಬಂದಾಗ ಮಳೆ ಇರುವುದಿಲ್ಲ. ಹೀಗೆ ಹಲವಾರು ರೀತಿಯ ಲಾಭಗಳು ರೈತರಿಗೆ ಆಗುತ್ತವೆ. ಆದರೆ ಇಂದಿನ ಹೈಬ್ರಿಡ್ (ಸಂಕರಣ) ತಳಿಗಳ ಬೆಳೆಗಳಿಗೆ, ಆಧುನಿಕ ಕೃತಿ, ಪದ್ಧತಿಯಲ್ಲಿ ಇದು ಸಾಧ್ಯವಿಲ್ಲ. ಇದು ಸಾಧ್ಯವಾಗುವುದು ಜವಾರಿ ಬೀಜಗಳನ್ನು ಬಿತ್ತಿದರೆ ಮಾತ್ರ ಮೇಲಿನ ಅನುಕೂಲತೆ ಸಿಗುತ್ತದೆ. ಹಿಂದಿನವರು ಅಷ್ಟೇ ಏಕೆ ಇಂದಿಗೂ ಸಾಕಷ್ಟು ರೈತರು ಜವಾರಿ ಬೀಜಗಳನ್ನು ಹಂಗಾಮಿಗನುಸರಿಸಿಯೇ ಬೆಳೆಯುತ್ತಿದ್ದಾರೆ. ಈ ಸಂಕರಣ ತಳಿಯ ಬೀಜಗಳು ಯಾವುದೇ ಹಂಗಾಮಿನಲ್ಲಿಯೂ ಬೆಳೆಯಬಲ್ಲವು. ಆದರೆ ಸಮಸ್ಯೆಗಳು ಬಹಳ. ಹದಾ, ಬೆದಿ, ಹಂಗಾಮು ಮತ್ತು ಹವಾಮಾನಗಳನ್ನು ಒಕ್ಕಲುತನ ಮಾಡುವವರು ಅನುಸರಿಸಿದರೆ ಸಾಕಷ್ಟು ಸಮಸ್ಯೆಗಳ ಪರಿಹಾರ ಸಾಧ್ಯವಿದೆ.

ಇಂದು ಪರಿಸರದಲ್ಲಿರುವ ಉಪಯೋಗಿ ಕೀಟಗಳ ಸಂಖ್ಯೆಯು ವಿಪರೀತ ಕೀಟೌಷಧಿಗಳನ್ನು, ರಾಸಾಯನಿಕ ಔಷಧಿಗಳನ್ನು ಬಳಸಿದ್ದರಿಂದ ನಸಿಸಿ ಹೋಗಿದೆ. ಪರಿಸರದಲ್ಲಿ ಅಸಮತೋಲನವಾಗಿದೆ. ಬೇಕಾದದ್ದು, ಬೇಡವಾದದ್ದು ಎರಡನ್ನೂ ನಮ್ಮ ಹೊಲದಲ್ಲಿ ನಾಶಮಾಡಿರುವುದರಿಂದ ಬೇಡಾದುದ್ದರ ಸಂಖ್ಯೆ ಮಿತಿಮೀರಿ ಹೆಚ್ಚುತ್ತಿದೆ. ಇಲಿ ಕೊಲ್ಲಲು ಬೆಕ್ಕು ಸಾಕುವುದು ಸಾಮಾನ್ಯ ಸಂಗತಿ. ಈಗ ನಾವು ಇಲಿ ಬೆಕ್ಕುಗಳನ್ನೆರಡನ್ನು ಕೊಂದಿದ್ದೇವೆ. ಯಾವಾಗಲೂ ನಮಗೆ ಬೇಡಾದದ್ದೇ ಹೆಚ್ಚು ದೊರಕುವುದು. ಸಮುದ್ರ ಮಥನ ಮಾಡಿದಾಗ ವಿಷವೇ ದೊರಕಿದಂತೆ, ಹೊಲದಲ್ಲಿ ಪೈರಿನ ಜೊತೆಗೆ ಯಾವ ಉಪಚಾರವನ್ನು ಮಾಡದೆ ಕಳೆಕಸಗಳು ಹುಟ್ಟಿ ಬೆಳೆಯುತ್ತವೆಯಲ್ಲಾ! ಈ ಕೀಟಗಳ ಹಾವಳಿ ತಡೆಯಲೆಂದೇ, ಪರಿಸರ ನಿರ್ಮಲವಾಗಿರಲೆಂದೇ, ವಿಷ ರಹಿತ ಅನ್ನ ಉಣ್ಣಲೆಂದೇ ಹಿಂದಿನವರು ಬೆಳೆಗಳನ್ನು ಹವಾಮಾನ ಹಾಗೂ ಹಂಗಾಮಿಗನುಸರಿಸಿ ಬೆಳೆಯುತ್ತಿದ್ದರು. ಈ ವಿಧಾನಗಳು ಸಾಂಪ್ರದಾಯಿಕವಾಗಿದ್ದರೂ ಇದರಲ್ಲಿ ವೈಜ್ಞಾನಿಕ ಸತ್ಯವೂ ಇದೆ. ಜವಾರಿ ಬೀಜಗಳನ್ನು ಎಷ್ಟೋ ವರ್ಷಗಳಿಂದ ನಾವು ಬಿತ್ತುತ್ತಿದ್ದೇವೆ. ಆ ಬೀಜಗಳನ್ನು ಸಂಗ್ರಹಿಸಿಡುವುದೂ ಅಷ್ಟೇ ಮಹತ್ವದ ಸಂಗತಿ. ಬೀಜಗಳಲ್ಲಿ ವಿಷ (ಬಿ.ಎಚ್.ಸಿ. ಮೆಲಾಥಿಯಾನ್) ಬೆರೆಸಿ ಇಡುವ ಇಂದಿನ ವಿಧಾನಕ್ಕೆ ಬದಲಾಗಿ ಬೀಜಗಳನ್ನು ಚೆನ್ನಾಗಿ ಒಣಗಿಸಿ ತಂಪಿನಲ್ಲಿಟ್ಟು ನಂತರ ಬೂದಿ ಮತ್ತು ಬೇವಿನ ತಪ್ಪಲುಗಳೊಡನೆ ಬೆರಸಿ ಗಡಿಗೆಗಳಲ್ಲಿ ಇಡುತ್ತಿದ್ದರು. ಈಗಲೂ ಜವಾರಿ ಬೀಜಗಳನ್ನು ಹಾಗೆ ಇಡುತ್ತಾರೆ. ಹುರುಳಿ, ಹೆಸರು, ಅಲಸಂದಿ, ಜೋಳ, ಗೋಧಿ, ಕುಸುಬೆ, ಮಡಕೆ, ಅವರಿ, ಸಾಸವಿ, ನವಣೆ, ಸೆಜ್ಜೆ, ಕಡಲೆ ಹೀಗೆ ಹಲವಾರು ಜವಾರಿ ಬೀಜಗಳನ್ನು ಸಾಂಪ್ರದಾಯಿಕವಾಗಿ ಸಂಗ್ರಹಿಸಿಟ್ಟವುಗಳನ್ನು

ಬೆಳೆಯಲಾಗುತ್ತಿದೆ. ಸಂಕರಣ ತಳಿಯ ಬೀಜಗಳಂತೆ ಪ್ರತಿವರ್ಷ ಪೇಟೆಗೆ ಹೋಗಿ ಅವರು ಹೇಳಿದ ದರಕ್ಕೆ ಕೊಂಡು ತಂದು ಬಿತ್ತುವ ಸಮಸ್ಯೆಯೇ ಇಲ್ಲ.

ಬೆಳೆಗಳ 'ಕಾಲಗ್ಯೆ' ಪದ್ಧತಿ ಅನುಸರಿಸುವುದು :

ನಾವಿಂದು ಹತ್ತಿ ಬಿತ್ತಿದ ಹೊಲಕ್ಕೆ ಹತ್ತು ವರ್ಷಗಳಿಂದಲೂ ಹತ್ತಿಯನ್ನೇ ಬಿತ್ತುತ್ತಿದ್ದೇವೆ. ಇದರಿಂದ ಬೆಳೆಗೆ ಕೀಟಗಳ ಬಾಧೆ ಹೆಚ್ಚಾಗಿ ಇಳುವರಿ ವರ್ಷದಿಂದ ವರ್ಷಕ್ಕೆ ಕಡಿಮೆಯಾಗಲು ಕಾರಣವಾಗಿದೆ. ಇದನ್ನು ತಪ್ಪಿಸಲು ಒಮ್ಮೆ ಹತ್ತಿ ಹಾಕಿದ ಹೊಲಕ್ಕೆ ನಾಲ್ಕು ವರ್ಷಗಳವರೆಗೆ ಅಲ್ಲಿ ಹತ್ತಿಯನ್ನು ಬಿತ್ತಬಾರದು. ಕೆಲವು ಬೆಳೆಗಳು ಆಳವಾದ ಬೇರು ಬಿಡುತ್ತವೆ. ಕೆಲವು ಬೆಳೆಗಳು ಆಳವಾದ ಬೇರು ಬಿಡುವುದಿಲ್ಲ. ಹೀಗೆ ಈ ಸಂಗತಿಯನ್ನು ಗಮನಿಸಿ ಬೆಳೆ ಪರಿವರ್ತನೆ ಮಾಡುವುದು ಒಳ್ಳೆಯ ವಿಧಾನವಾಗಿದೆ. ಅಕ್ಕಡಿ ಬೆಳೆಗಳು 'ಮಿಶ್ರ' ಬೆಳೆಗಳನ್ನು ಬೆಳೆಯುವುದು ಇನ್ನೊಂದು ಸಾಂಪ್ರದಾಯಿಕ ವಿಧಾನ. ಉದಾಹರಣೆಗೆ ಎರಡು ಸಾಲು ಜೋಳ ಒಂದು ಸಾಲು ಹೆಸರು ಇಲ್ಲಾ ಮಡಿಕೆ ಮತ್ತೆ ಎರಡು ಸಾಲು ಜೋಳ ಒಂದು ಸಾಲು ತೊಗರಿ. ತೊಗರಿಯಲ್ಲೇ ಪುಂಡಿ ಹಾಗೂ ಅಲಸಂದಿಯನ್ನು ಕೂಡಿಸಿ ಬಿತ್ತುತ್ತಿದ್ದರು. ಇದರಿಂದ ಸಾರಜನಕವನ್ನು ಬೇರಿನ ಗಂಟುಗಳಲ್ಲಿ ಸಂಗ್ರಹಿಸಿಡುವ ದ್ವಿದಳ ಧಾನ್ಯಗಳ ಬೆಳೆಗಳು ಏಕದಳ ಧಾನ್ಯದ ಬೆಳೆಗಳಿಗೆ ಸಹಕಾರಿಯಾಗಿವೆ. ಅದರಂತೆ ಕುಸುಬೆಯನ್ನು ಅಕ್ಕಡಿ ಬೆಳೆಯಾಗಿ ಗೋಧಿ ಮತ್ತು ಕಡಲೆಯಲ್ಲಿ ಬೆಳೆಯಲಾಗುತ್ತಿದೆ. ಈ ಎಲ್ಲಾ ವಿಧಾನಗಳು ಸಾಂಪ್ರದಾಯಿಕ ಎನಿಸಿದರೂ ಆಧುನಿಕ ಕೃಷಿಗೆ ಪರ್ಯಾಯ ವಿಧಾನಗಳು ಆಗುವುದರಲ್ಲಿ ಸಂಶಯವೇ ಇಲ್ಲ.

ಹೊಲದ ಫಲವತ್ತತೆಯನ್ನು ಹೆಚ್ಚಿಸುವ ಕ್ರಮಗಳು :

ಮೊದಲನೆಯದಾಗಿ, ತಿಪ್ಪೆ ಗೊಬ್ಬರ ಬಳಸುವದು. ಎರಡನೆಯದಾಗಿ ಕೆರೆಗಳಲ್ಲಿ ತುಂಬಿದ ಹೂಳು ಮಣ್ಣನ್ನು ಹೊಲಕ್ಕೆ ಹೇರುವುದು. ಮೂರನೆಯದಾಗಿ ಕುರಿ ತರುಬಿಸುವುದು. ನಾಲ್ಕನೆಯದಾಗಿ ಸೆಣಬು ಮತ್ತು ಅಲಸಂದೆಯಂತಹ ಬೆಳೆಗಳನ್ನು ಬೆಳೆದು ಹೂವು ಕಾಯಿ ಆಗುವ ಹಂತದಲ್ಲಿ ಮುಗ್ಗು ಹೊಡೆಯಬೇಕು. ಅಂದರೆ ಸೆಣಬು ಅಲಸಂದಿ ಗಿಡಗಳನ್ನು ಬಡ್ಡೆಗೆ ಹಚ್ಚಿ ಕತ್ತರಿಸಿ ಹೊಲದಲ್ಲಿ ಹರಡಿ ಎತ್ತಿನ ಮೂಲಕ ಹರಗಿ ಮಣ್ಣಲ್ಲಿ ಸೇರುವಂತೆ ಮಾಡಬೇಕು. ಹೊಲಗಳಿಗೆ ಬೇವಿನ ಹಿಂಡಿ, ಕುಸುಬೆ, ಶೇಂಗಾದ ಹಿಂಡಿಯನ್ನು ಹಾಕುವುದರಿಂದ ಹೊಲದ ಫಲವತ್ತತೆ ಹೆಚ್ಚುವುದು. ಇದೂ ಅಲ್ಲದೆ, ವರ್ಷದಲ್ಲಿ ಒಂದೇ ಬೆಳೆ ಮಾಡುವುದರಿಂದಲೂ ಇಳುವರಿ ಹೆಚ್ಚಿಸಬಹುದಾಗಿದೆ. ವರ್ಷಕ್ಕೆ ಹಿಂಗಾರಿ, ಮುಂಗಾರಿ ಹಂಗಾಮಿನಲ್ಲಿ ಎರಡು ಬೆಳೆ ತೆಗೆಯದೆ ಒಂದೇ ಬೆಳೆ ತೆಗೆಯಬೇಕು. ಹೀಗೆ ಮಾಡುವುದರಿಂದ ಭೂಮಿಗೆ ವಿಶ್ರಾಂತಿ ಸಿಕ್ಕು ಹೊಲ ಖಾರವಾಗಿ ಬೆಳೆ ಚೆನ್ನಾಗಿ ಬರುತ್ತದೆ.

*

ಬಹುಪಯೋಗಿ ಬೇವು

'ಬ್ಯಾಸಿಗೆ ದಿವಸಕ ಬೇವಿನ ಮರತಂಪ' ಎಂದು ಜನಪದ ಕವಿಗಳು ಹಾಡಿದ್ದಾರೆ. ಬೇವಿನ ಮರದ ನೆರಳಿಗೆ ಕುಳಿತರೆ ಬಿಸಿಲಿನ ತಾಪವು ಇಲ್ಲದಾಗುವುದು. ಉಳಿದ ಗಿಡಗಳಿಗಿಂತ ಬೇವಿನ ಮರದ ನೆರಳು ದಟ್ಟವಾಗಿರುತ್ತದೆ. ಬೇವಿನ ಹೂವು ಸಹಿತ ಸುಗಂಧಭರಿತವಾಗಿರುತ್ತದೆ. ಬೇವು ಹೂವು ಬಿಡುವದು ಬೇಸಿಗೆಯಲ್ಲೇ. ಬೇವಿನ ಮರವು ವಾತಾವರಣದ ಮಾಲಿನ್ಯ ತಡೆಯಬಲ್ಲದು ಹಾಗೂ ವಾತಾವರಣವನ್ನು ಪರಿಶುದ್ಧ ಮಾಡಬಲ್ಲದು. ಬೇವು ಕರಾವಳಿ ಪ್ರದೇಶದ ಹೊರತಾಗಿ ಎಲ್ಲ ಪ್ರದೇಶದಲ್ಲೂ ಚೆನ್ನಾಗಿ ಬೆಳೆಯಬಲ್ಲದು. ಬೇವಿನ ಬೀಜಗಳನ್ನು ಪಕ್ಷಿಗಳು ಪ್ರಸಾರ ಮಾಡುತ್ತವೆ. ಬೇವಿನ ಹಣ್ಣನ್ನು ಕಾಗೆ ತಿಂದು ತನ್ನ ಮಲದ ಮೂಲಕ ಬೀಜವನ್ನು ಚೆಲ್ಲಿದಾಗ ಆ ಬೀಜ ಹುಟ್ಟಿ ಉತ್ತಮ ರೀತಿಯಲ್ಲಿ ಬೇವಿನ ಗಿಡ ಬೆಳೆಯುತ್ತದೆ. ಮಳೆ ಕಡಿಮೆಯಾಗುವ ಪ್ರದೇಶದಲ್ಲೂ ಬೇವು ಬೆಳೆಯಬಲ್ಲದು. ಬೇವಿನ ಎಲೆ , ಹೂವು, ಬೀಜ ಮತ್ತು ಕಟ್ಟಿಗೆಗಳು ಹಲವಾರು ರೀತಿಯಲ್ಲಿ ರೈತರಿಗೆ ಉಪಯುಕ್ತವಾಗಿವೆ. ಬೇವಿನ ಎಲೆಗಳಿಂದ ಉತ್ತಮ ಸಾವಯವ ಗೊಬ್ಬರವಾಗುತ್ತದೆ. ಬೇವಿನ ಎಲೆಯ ಹೊಗೆಯು ಸೊಳ್ಳೆಗಳನ್ನು ಓಡಿಸಬಲ್ಲ ಸೊಳ್ಳೆ ನಿವಾರಕ ಔಷಧಿಯಾಗಿದೆ ಮತ್ತು ಬೇವಿನ ಎಲೆಗಳನ್ನು ಕಾಳುಗಳ ರಕ್ಷಣೆಗೆ ಉಪಯೋಗಿಸಲಾಗುತ್ತದೆ. ಬೂದಿಯಲ್ಲಿ ಬೇವಿನ ಎಲೆಗಳನ್ನು ಕೂಡಿಸಿ ಕಾಳುಗಳ ಚೀಲದಲ್ಲಿ ಮಿಶ್ರಣ ಮಾಡಿದರೆ ನುಶಿಯಂತಹ ಕೀಟಗಳು ಕಾಳುಗಳತ್ತ ಸುಳಿಯಲಾರವು. ಬೇವಿನ ಬೀಜದಿಂದ ಎಣ್ಣೆ ತೆಗೆಯಲು ಬರುತ್ತದೆ. ಈ ಬೇವಿನ ಎಣ್ಣೆಯು ಕೀಟನಾಶಕವಾಗಿ ರಾಸಾಯನಿಕ ಕೀಟ ನಾಶಕಗಳ ಬದಲಾಗಿ ಬಳಸಲು ಬರುತ್ತದೆ. ಈ ಕೀಟನಾಶಕವು ಅತ್ಯಂತ ಪರಿಣಾಮಕಾರಿ ಹಾಗೂ ಜೈವಿಕ ಕೀಟನಾಶಕವೂ ಆಗಿದೆ.

'ಆಜಾಧಿರಿಕ್ತಾ' ಎಂಬ ಔಷಧಿಯ (ವಿಷಕಾರಿ) ಗುಣವುಳ್ಳ ಬೇವು ಕ್ರಿಮಿಕೀಟಗಳನ್ನು ಬೆಳೆಯುತ್ತ ಸುಳಿಯದಂತೆ ಮಾಡಬಲ್ಲದು. ಬೇವಿನ ಎಲೆ, ಬೀಜ ಮತ್ತು ಎಣ್ಣೆಗಳು ಕೀಟನಾಶಕ ಗುಣ ಹೊಂದುವುದರ ಜೊತೆಗೆ ಬೆಳೆಗಳಿಗೆ ಪೋಷಕಾಂಶಗಳನ್ನು ಒದಗಿಸಬಲ್ಲ ಗೊಬ್ಬರವಾಗಿದೆ. ಬೇವಿನ ಹಿಂಡಿ (ಬೀಜದಿಂದ ಎಣ್ಣೆ ತೆಗೆದು ಉಳಿದದ್ದು) ಉತ್ತಮ ಗೊಬ್ಬರವಾಗಿದೆ. ಹೊಲದ ಫಲವತ್ತತೆ ಹೆಚ್ಚಿಸಬಲ್ಲದು ಹೊಲದಲ್ಲಿರುವ ಗೆದ್ದಲು ಹುಳುಗಳ ನಿಯಂತ್ರಣಕ್ಕೆ ಬೇವಿನ ಹಿಂಡಿ ಪರಿಣಾಮಕಾರಿ ಔಷಧಿಯಾಗಿದೆ ಮತ್ತು ಉತ ಷ್ಟ ಸತ್ವವುಳ್ಳ ಗೊಬ್ಬರವೂ ಆಗಿದೆ. ರಾಸಾಯನಿಕ ಗೊಬ್ಬರ, ರಾಸಾಯನಿಕ ಕೀಟನಾಶಕಗಳಿಗೆ

ಪರ್ಯಾಯವಾಗಿ ಬೇವಿನ ಹಿಂಡಿ, ಬೇವಿನ ಎಣ್ಣೆಗಳನ್ನು ಬಳಸಬಹುದಾಗಿದೆ. ಬೇವಿನ ಕಟ್ಟಿಗೆಯ ತೊಲೆ, ಕಂಬ ಮತ್ತು ಹಲಗೆಗಳು ದೀರ್ಘ ಕಾಲ ಬಾಳಿಕೆ ಬರುತ್ತವೆ. ಸಾಗವಾನಿಯ ತರುವಾಯ ಬೇವು ಇಮಾರತಿಯ ಕಟ್ಟಿಗೆಯಾಗಿದೆ ಬೇವಿನ ತೊಲೆ, ಕಂಬ, ಹಲಗೆಗಳಿಗೆ ಹುಳಗಳ (ಕೀಟಗಳ) ಬಾಧೆಯಾಗದು.

ಬೇವಿನ ಮರದ ಕೆಳಗೆ ಬೆಳೆಯು ಉಳಿದ ಮರಗಳಿಗಿಂತ ಚೆನ್ನಾಗಿ ಬೆಳೆಯುತ್ತದೆ. ಜಾಲಿ, ಮಾವು, ಮೊದಲಾದ ಗಿಡಗಳ ಕೆಳಗೆ ಯಾವ ಬೆಳೆಯೂ ಬರುವುದಿಲ್ಲ. ಆದರೆ ಬೇವಿನ ಗಿಡದ ಕೆಳಗೆ ಎಲ್ಲಾ ಬೆಳೆಗಳೂ ಅಬಾಧಿತವಾಗಿ ಬೆಳೆಯುತ್ತವೆ. ರೋಗ ಮತ್ತು ಕೀಟಗಳ ಬಾಧೆ ಇಲ್ಲದೆ ಸದೃಢವಾಗಿ ಬೆಳೆಯು ಬರುತ್ತದೆ. ಬೆಳೆಗಳಿಗೆ ರಾಸಾಯನಿಕ ಕೀಟನಾಶಕಗಳನ್ನು ಬಳಸುವುದರಿಂದ ದುಷ್ಪರಿಣಾಮಗಳಾಗುತ್ತವೆ. ಆದರೆ ಬೇವಿನ ಎಣ್ಣೆ ಬೆಳೆಗಳಿಗೆ ಸಿಂಪಡಿಸಿದರೆ ಉಪಕಾರಿ ಕೀಟಗಳು ಉಳಿದು ಅಪಕಾರಿ ಕೀಟಗಳಷ್ಟೇ ಸಾಯುತ್ತವೆ. ಬೇವಿನ ಎಣ್ಣೆ (ಕಷಾಯ)ವನ್ನು ರೈತರೇ ತಯಾರಿಸಿಕೊಳ್ಳಲು ಬರುತ್ತದೆ. ಯಾವುದೇ ಕಂಪನಿಗಳಿಗೆ ಹೋಗಿ ಔಷಧಿ ತರುವ ಅವಶ್ಯಕತೆ ಇಲ್ಲ. ರೈತರ ಹೊಲದಲ್ಲೇ ಬೇವು ಸಿಗುತ್ತದೆ. ಹತ್ತಿಯ ಕಾಯಿ ಕೊರಕ ಕೀಟ ಹತೋಟಿಗೆ ಪುನಃ ಪುನಃ ಪೆರಾಥ್ರಾಯಿಡ್ ಕೀಟನಾಶಕಗಳನ್ನು ಬಳಸಿದ್ದರಿಂದ ಕೀಟಗಳು ಸಾಯದೆ, ದುಷ್ಪರಿಣಾಮವಾಗಿ ಬಿಳಿ ನೊಣದಂತಹ ಕೀಟಗಳು ಯಾವ ಔಷಧಿಯನ್ನು ಸಿಂಪಡಿಸಿದರೂ ಸಾಯಲಾರದೆ ಹೆಚ್ಚು ಹೆಚ್ಚು ಬೆಳೆಯನ್ನು ಬಾಧಿಸುತ್ತವೆ. ಅಂತಹ ಬಿಳಿ ನೊಣವನ್ನು ನಾಶ ಮಾಡಬಲ್ಲ ಶಕ್ತಿ ಬೇವಿಗಿದೆ.

ತೆಂಗಿನ ಮರಕ್ಕೆ ಮುಳುವಾದ ನುಶಿ ಪೀಡೆ ನಿವಾರಣೆಗೆ ಬಳಸಿದ ರಾಸಾಯನಿಕ ಕೀಟನಾಶಕಗಳು ದುಷ್ಪರಿಣಾಮ ಬೀರಿವೆ. ಇಂಥ ಗಂಭೀರ ಪರಿಸ್ಥಿತಿಯಲ್ಲಿ ತೆಂಗಿನ ಗಿಡದ ಉಳಿವಿಗೆ ಹಾಗೂ ನುಶಿ ಪೀಡೆ ನಿವಾರಣೆಗೆ ಬೇವಿನ ಎಣ್ಣೆ ಮತ್ತು ಬೇವಿನ ಹಿಂಡಿ ಪರಿಣಾಮಕಾರಿ ಔಷಧಿ ಎಂದು ಹೇಳಲಾಗುತ್ತಿದೆ. ಒಟ್ಟಿನಲ್ಲಿ ಬೇವು ರೈತರಿಗೆ ಬಹು ಉಪಯೋಗಿ ಮರವಾಗಿದೆ. ಬೇವು ರೈತರ ಕಲ್ಪವೃಕ್ಷ ಎನಿಸಿದೆ. ಬೇವು ಕೇವಲ ಸಸ್ಯಗಳ ರಕ್ಷಣೆಗೆ ಪೋಷಕಾಂಶಗಳನ್ನು ಒದಗಿಸುವುದಲ್ಲದೆ ಮನುಷ್ಯರಿಗೆ ಬರುವ ಕಾಯಿಲೆಗಳನ್ನು ಗುಣಪಡಿಸಬಲ್ಲದು. ಯುಗಾದಿಯ ಹೊಸ ದಿನದಂದು ಬೇವು-ಬೆಲ್ಲ ತಿನ್ನುತ್ತಾರೆ. ಬದಲಾದ ಋತುಮಾನಕ್ಕೆ ಬೇವು-ಬೆಲ್ಲ ತಿನ್ನುವದು ಆರೋಗ್ಯದ ದೃಷ್ಟಿಯಿಂದ ಹಿತಕರ. ಅದೂ ಅಲ್ಲದೆ ಬೇವು-ಬೆಲ್ಲ ಜೀವನದಲ್ಲಿ (ಹೊಸ ವರ್ಷದಲ್ಲಿ) ಬರಲಿರುವ ಸುಖ-ದುಃಖಗಳ ಸಂಕೇತವೆನಿಸಿದೆ. ಸುಖ ದುಃಖಗಳನ್ನು ಸಮಾಧಾನದಿಂದ ಸ್ವೀಕರಿಸಬೇಕೆ ಬೇವು-ಬೆಲ್ಲ ತಿನ್ನುವದರ ಸಂಕೇತವಾಗಿದೆ. ಬೇವು ಅಧರಕ್ಕೆ ಕಹಿಯಾದರೂ ಉದರಕ್ಕೆ ಸಿಹಿಯಾಗಿದೆ. ಇದು ಕಹಿ ಬೇವಿನ ಸಿಹಿ ಗುಣ. ಇಂದಿಗೂ ಹಳ್ಳಿಯ ಜನರು ಹಲ್ಲುಜ್ಜಲು ಬೇವಿನ ಕಡ್ಡಿಯನ್ನೇ ಬಳಸುತ್ತಾರೆ. ಎಷ್ಟೋ ಜನ ಯೋಗ ಸಾಧನೆ ಮಾಡುವವರು ಬೇವಿನ ತಪ್ಪಲಿನ ರಸ ಕುಡಿಯುತ್ತಿದ್ದರು.

ಮಣ್ಣು ಮತ್ತು ನೀರಿನ ರಕ್ಷಣೆಗೆ ತಡೆಗೋಡೆಗಳು

'ಮಲೆನಾಡಿಗೆ ಮಳೆ ಬಹಳ. ಆದರೆ ಕುಡಿಯಲು ನೀರಿಲ್ಲ' ಇದು ಗ್ರಾಮೀಣ ಜನರ ಗಾದೆ ಮಾತು. ಮಳೆಗಾಲದಲ್ಲಿ ಸಾಕಷ್ಟು ಮಳೆ ಬರುತ್ತದೆ. ಬಿದ್ದ ಮಳೆಯ ನೀರೆಲ್ಲ ಹೊಲ ಗದ್ದೆಗಳಲ್ಲಿ ತುಂಬಿ, ಹೊಳೆ ಹಳ್ಳಗಳಲ್ಲಿ ಮಹಾಪೂರ ಬಂದು ಸಮುದ್ರಕ್ಕೆ ಸೇರುತ್ತದೆ. ಮಳೆಗಾಲ ಮುಗಿದ ನಂತರ ಕ್ರಮೇಣ ಕೆರೆ, ಬಾವಿ, ಹಳ್ಳ ಮತ್ತು ನದಿಗಳ ನೀರಿನ ಪ್ರಮಾಣ ಕಡಿಮೆಯಾಗುತ್ತದೆ. ಬೇಸಿಗೆ ಬಂದ ಹಾಗೆ ನೀರಿನ ಮೂಲಗಳು ಬರಿದಾಗಿ ಒಣಗುತ್ತವೆ. ತೋಟದ ಬೆಳೆಗಳಿಗೆ ನೀರಿನ ಕೊರತೆಯಾಗುತ್ತದೆ. ಆ ಕೊರತೆಯನ್ನು ನೀಗಲು ರೈತರು ಕೊಳವೆ ಬಾವಿಗಳನ್ನು ತೋಡಿಸುತ್ತಿದ್ದಾರೆ. ಹೆಚ್ಚು ಹೆಚ್ಚು ಕೊಳವೆ ಬಾವಿಗಳನ್ನು ತೋಡಿದ್ದರಿಂದಾಗಿ ಭೂಗರ್ಭದ ಆಳದಲ್ಲಿರುವ ನೀರಿನ ಮಟ್ಟ ಇನ್ನೂ ಕೆಳಗೆ ಹೋಗುತ್ತಿದೆ. ೩೦೦ ರಿಂದ ೬೦೦ ಅಡಿಗಳಷ್ಟು ಆಳವಾದ ಕೊಳವೆ ಬಾವಿಗಳನ್ನು ತೋಡಿದರೂ ಕೆಲವು ಕೊಳವೆ ಬಾವಿಗಳಲ್ಲಿ ನೀರು ಬರುತ್ತಿಲ್ಲ. ಇದೊಂದು ಗಂಭೀರ ಸಮಸ್ಯೆಯಾಗಿದೆ. ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ತೋಟಗಾರಿಕೆಗೆ ಹೋಗಲಿ, ಕುಡಿಯುವ ನೀರಿಗೂ ಹಾಹಾಕಾರ ಎದ್ದಿದೆ. ಇದಕ್ಕೆ ರಭಸದಿಂದ ಬೀಳುವ ಮಳೆಯ ನೀರು ವ್ಯರ್ಥವಾಗಿ ಹರಿದುಹೋಗದಂತೆ ತಡೆಯುವುದೇ ಯೋಗ್ಯ ಪರಿಹಾರವಾಗಬಲ್ಲದು.

ಮಳೆಯ ಒಂದೊಂದು ಹನಿ ನೀರು ಸಹ ಅತ್ಯಮೂಲ್ಯವಾಗಿದೆ. ಮಳೆಯ ನೀರನ್ನು ಇಂಗಿಸಲು ಹಲವಾರು ಮಾರ್ಗೋಪಾಯಗಳಿವೆ: ೧) ತಡೆಗೋಡೆಗಳ ನಿರ್ಮಾಣ, ೨) ಇಳುಕಲಿಗೆ ಅಡ್ಡವಾಗಿ ಉಳುಮೆ ಮಾಡುವುದು, ೩) ಇಳುಕಲಿಗೆ ಅಡ್ಡವಾಗಿ ಅಲ್ಲಲ್ಲಿ ಬದುವುಗಳ ನಿರ್ಮಾಣ ಮತ್ತು ಹಾಳೆಯ ಹುಲ್ಲನ್ನು ಬೆಳೆಯುವುದು. ಹೀಗೆ ಮಾಡುವುದರಿಂದ ಬೂಮಿಯ ಮೇಲ್ಮಣ್ಣಿನ ರಕ್ಷಣೆಯಾಗುತ್ತದೆ. ಮಳೆಯ ನೀರು ಭೂಮಿಯಲ್ಲಿ ಇಂಗಿ ತೇವಾಂಶವನ್ನು ಬಹಳ ದಿನಗಳವರೆಗೆ ರಕ್ಷಿಸಲು ಸಹಾಯವಾಗುತ್ತದೆ. ಅಂತರ್ಜಲದ ಮಟ್ಟ ಹೆಚ್ಚುತ್ತದೆ. ಮತ್ತು ಹೆಚ್ಚಾದ ನೀರು ಮಾತ್ರ ಹರಿದು ಹೋಗುತ್ತದೆ. ನೀರಿನ ವೇಗ ಕಡಿಮೆಯಾಗುತ್ತದೆ. ಕೆರೆ, ಬಾವಿ, ಹಳ್ಳ ಮತ್ತು ನದಿಗಳಲ್ಲಿ ಬೇಸಿಗೆಯಲ್ಲೂ ನೀರು ನಿಲ್ಲುತ್ತದೆ. ಇಂತಹ ಒಂದು ಪ್ರಯತ್ನವನ್ನು ಕಾಸರಗೋಡು ಜಿಲ್ಲೆಯ ಏತಡ್ಕ ಗ್ರಾಮದಲ್ಲಿ ರೈತರೆ ಸ್ವಯಂ ಸ್ಫೂರ್ತಿಯಿಂದ ಕೈಗೊಂಡಿದ್ದಾರೆ. ಇದೊಂದು ಮಾದರಿಯ ಕ್ರಮವಾಗಿದ್ದು ಉಳಿದ ರೈತರೂ ಅನುಕರಣೆ ಮಾಡಲು ಯೋಗ್ಯವಾಗಿದೆ.

ನೆರಪ್ಪಾಡಿ ನದಿಗೆ ಅಲ್ಲಲ್ಲಿ ಮಣ್ಣು ಮತ್ತು ಕಲ್ಲಿನ ಗೋಡೆಗಳನ್ನು ನಿರ್ಮಿಸಿದ್ದಾರೆ. ನವೆಂಬರ ಅಥವಾ ಡಿಸೆಂಬರ ತಿಂಗಳಿನಲ್ಲಿ ಮಳೆಯ ಪ್ರಮಾಣ ಕಡಿಮೆಯಾದಾಗ ಈ ಕಟ್ಟೆಗಳನ್ನು ನಿರ್ಮಿಸುತ್ತಾರೆ. ಒಂದೊಂದು ತಡೆಗೋಡೆಗೆ ಇಪ್ಪತ್ತೈದು ಸಾವಿರ ಹಣ ಖರ್ಚಾಗಿದೆ. ಈ ಖರ್ಚನ್ನು ರೈತರೇ ನಿಭಾಯಿಸಿದ್ದಾರೆ. ಎಕರೆವಾರು ಇಂತಿಷ್ಟು ಎಂದು ದರ ನಿಗದಿ ಮಾಡಿ ಹಣ ಸಂಗ್ರಹಿಸುತ್ತಾರೆ. ಈ ತಡೆಗೋಡೆಗಳ ನರ್ಮಾಣದಿಂದಾಗಿ ನದಿಯ ೨ ಕಿ.ಮೀ. ಆಸುಪಾಸಿನಲ್ಲಿರುವ ಕೆರೆ, ಬಾವಿ, ಕೊಳವೆ ಬಾವಿಗಳ ನೀರಿನ ಮಟ್ಟ ಹೆಚ್ಚಾಗಿದೆ. ಒಂದೊಂದು ತಡೆಗೋಡೆಯಿಂದ ಇಪ್ಪತ್ತು ಎಕರೆಗಳಷ್ಟು ಸ್ಟ್ಯಾಂಡರ್ಡ್ ಜಮೀನಿಗೆ ನೀರಾವರಿ ಸೌಲಭ್ಯ ದೊರಕಿದೆ. ಅಡಿಕೆ, ತೆಂಗು, ಮೆಣಸು ಮತ್ತು ಬಾಳೆ ಬೆಳೆಗೆ ಸಂದಿಗ್ಧ ಹಂತಗಳಲ್ಲಿ ನೀರಿನ ಪೂರೈಕೆಯಾಗುತ್ತಿದೆ. ಪ್ರಮುಖ ವಾಣಿಜ್ಯ ಬೆಳೆಯಾದ ಅಡಿಕೆ ಬೆಳೆಯು ಇಳುವರಿಯು ಪ್ರಮಾಣ ಕುಂಠಿತವಾಗದಂತೆ ನೀರಾವರಿ ಅನುಕೂಲತೆಯಾಗಿದೆ. ಡಿಸೆಂಬರ್‌ನಿಂದ ಮೇ ತಿಂಗಳಿನವರೆಗೆ ನೀರು ನಿಲ್ಲಿಸಿ ಬೆಲೆಗಳಿಗೆ, ದನಕರುಗಳಿಗೆ ಬಳಕೆ ಮಾಡಿಕೊಳ್ಳುತ್ತಾರೆ. ಇದೊಂದು ಜಲಮರುಪೂರಣ ವಿಧಾನವಾಗಿದೆ. ಸರಕಾರದ ಕಡೆಗೆ ನೋಡುತ್ತ ಕೂರದೆ ರೈತರೇ ತಮ್ಮ ಸಮಸ್ಯೆಗೆ ಪರಿಹಾರ ಕೈಗೊಂಡ ಕ್ರಮವಾಗಿದೆ ಎಂದು ಇಲ್ಲಿಯ ರೈತರು ಉತ್ಸಾಹದಿಂದ ಹೇಳುತ್ತಾರೆ.

☼

ಮಿಶ್ರ ಬೆಳೆ ಬೇಸಾಯ

ವಾಣಿಜ್ಯ ಬೆಳೆಗಳು ಹೆಚ್ಚು ಹಣ ಕೊಡಬಲ್ಲವು. ಇದೊಂದೇ ಕಾರಣದಿಂದಾಗಿ ರೈತರು ಒಂದೇ ಬೆಳೆಯನ್ನು ಬೆಳೆಯತೊಡಗಿದರು. ಅದೇ ಹೊಲದಲ್ಲಿ ಮತ್ತೆ ಮತ್ತೆ ಭತ್ತವನ್ನೋ, ಕಬ್ಬನ್ನೋ, ತಂಬಾಕನ್ನೋ, ಬದನೆಯನ್ನೋ, ಬೆಳೆದರು. ಇದರಿಂದಾಗಿ ಹಲವಾರು ದುಷ್ಪರಿಣಾಮಗಳಾದವು. ಅಧಿಕ ಇಳುವರಿ ಕೊಡುವ ಹತ್ತಿ, ಭತ್ತ, ಟೊಮ್ಯಾಟೋ ಮತ್ತು ಕಬ್ಬನ್ನು ಬೆಳೆಯುವತ್ತ ವಿಜ್ಞಾನಿಗಳು ರೈತರನ್ನು ಆಕರ್ಷಿಸಿದರು. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕು ಇದಕ್ಕೆ ಉತ್ತಮ ನಿದರ್ಶನ ಎನಿಸಿದೆ. ಡಿಸಿಎಚ್ ಹತ್ತಿಯನ್ನು ನೀರಾವರಿ ಮತ್ತು ಒಣಬೇಸಾಯದಲ್ಲಿ ಬೆಳೆಯತೊಡಗಿದ ರೈತರು ಆರಂಭದಲ್ಲಿ ಉತ್ತಮ ಇಳುವರಿ ಪಡೆದರಷ್ಟೇ ಅಲ್ಲ ಉತ ಷ್ಟ ಗುಣಮಟ್ಟದ ಹತ್ತಿಯನ್ನು ಬೆಳೆದರು. ಅದು ಬಹಳ ವರ್ಷ ಉಳಿಯಲಿಲ್ಲ. ಅದಕ್ಕೆ ಕಾರಣ ಹತ್ತಿಯನ್ನೇ ಪ್ರತಿವರ್ಷ ಬಿತ್ತಿದ ಹೊಲದಲ್ಲಿ ಬೆಳೆಯತೊಡಗಿದ್ದು ರೈತರಿಗೆ ಈ ಬೆಳೆ ಎಷ್ಟು ಉತ್ತಮ ಎನಿಸಿತ್ತೋ ಅಷ್ಟೇ ಕೆಟ್ಟ ಬೆಳೆ ಎನಿಸಿತು. ಉಳಿದ ಬೆಳೆಗಳನ್ನು ಮಾಡುವುದನ್ನೇ ಬಿಟ್ಟರು. ಹತ್ತಿ ಬೆಳೆದು ಹಾಳಾಗಿ ಹೋದರು. ಹಿಲೀಯೊಥಿಸ್ ಕೀಟದ ಹಾವಳಿಗೆ ತುತ್ತಾಗಿ ಹತ್ತಿ ಬೆಳೆ ಒಂದೇ ಅಲ್ಲ. ಎಲ್ಲ ಬೆಳೆಗಳಿಗೂ ಈ ಕೀಟ ಬಾಧಿಸುವಂತಾಯಿತು. ಇದರಂತೆ ನೀರಾವರಿ ಪ್ರದೇಶದಲ್ಲಿ ಭತ್ತ ಬೆಳೆಯುವುದಾಗಲಿ, ಕಬ್ಬು ಬೆಳೆಯುವುದಾಗಲಿ ಒಂದೇ ಬೆಳೆಯನ್ನು ಮಾಡಿದ ಹೊಲದಲ್ಲಿ ಮತ್ತೆ ಮತ್ತೆ ಅದೇ ಬೆಳೆ ಮಾಡಿ ರೈತರು ಹಾನಿಗೊಳಗಾದರು. ಇದನ್ನೆಲ್ಲ ಹೋಗಲಾಡಿಸಲು ಮಿಶ್ರಬೆಳೆ ಮಾಡುವುದೇ ಉತ್ತಮ ಪರಿಹಾರ ಎನಿಸಿದೆ.

ಒಂದು ಹೊಲದಲ್ಲಿ ಒಂದೇ ಬೆಳೆ ಬೆಳೆದಾಗ ಕೀಟಗಳ ವಂಶ ವೃದ್ಧಿಯಾಗುತ್ತದೆ. ಬೆಳೆದ ಫಸಲು ಕೀಟಗಳಿಗೆ ಆಹಾರವಾಗಿ ರೈತರು ಹಾನಿಗೊಳಗಾಗುತ್ತಾರೆ. ಒಂದೇ ಬೆಳೆ ಮಾಡುವುದರಿಂದ ಬೆಳೆಗಳು ಅದೇ ಸತ್ವವನ್ನು ಹೀರಿ ಭೂಮಿ ಬಡವಾಗುತ್ತದೆ. ಆದ್ದರಿಂದ ಪರ್ಯಾಯ ಬೆಳೆಗಳನ್ನು ಮಾಡುವುದಾಗಲಿ, ಮಿಶ್ರ ಬೆಳೆ ಮಾಡುವುದಾಗಲಿ ಅನಿವಾರ್ಯ ಎನಿಸಿದೆ. ಬೆಳೆಗಳಲ್ಲಿ ಏಕದಳ ಮತ್ತು ದ್ವಿದಳ ಧಾನ್ಯಗಳ ಬೆಳೆಗಳಿವೆ. ಜೋಳ, ಗೋವಿನಜೋಳ, ಗೋಧಿ, ಸಾಂವಿ, ಭತ್ತದಂತಹ ಬೆಳೆಗಳು ಏಕದಳ ಧಾನ್ಯಗಳಾಗಿವೆ. ಕಡಲೆ, ಹೆಸರು, ಉದ್ದು, ಶೇಂಗಾ, ತೊಗರಿ ಮೊದಲಾದವು ದ್ವಿದಳ

ಧಾನ್ಯಗಳಾಗಿವೆ. ಮಿಶ್ರ ಬೆಳೆ ಮಾಡುವುದರಿಂದ ರೈತರು ಹೆಚ್ಚು ಇಳುವರಿ ಪಡೆಯಲು ಸಾಧ್ಯವಿದೆ ಮತ್ತು ಉತ್ಪಾದನಾ ವೆಚ್ಚ ಕಡಿಮೆಯಾಗುತ್ತದೆ. ಹೊಲದ ಫಲವತ್ತತೆ ಕಡಿಮೆ ಆಗಲಾರದು.

ಅಕ್ಕಡಿ ಬೆಳೆ :

ಮಿಶ್ರ ಬೆಳೆಗೆ ಇನ್ನೊಂದು ಹೆಸರು ಅಕ್ಕಡಿ ಬೆಳೆ. ಅಕ್ಕಡಿ ಬೆಳೆಯಲ್ಲಿ ದಿಂಡಕ್ಕಡಿ ಮತ್ತು ಅಕ್ಕಡಿ ಬೆಳೆ ಎಂದು ಎರಡು ಪ್ರಕಾರಗಳಿವೆ. ಎರಡು ಸಾಲು ಶೇಂಗಾ ಇಲ್ಲವೇ ಹೆಸರು ಹಾಕಿ ಒಂದು ಸಾಲು ಹತ್ತಿ ಬೆಳೆಯುವುದಕ್ಕೆ ದಿಂಡಕ್ಕಡಿ ಎಂದು ಕರೆಯುತ್ತಾರೆ. ಎರಡು ಸಾಲು ಜೋಳ ಒಂದು ಸಾಲು ಹೆಸರು ಮತ್ತೆ ಎರಡು ಸಾಲು ಜೋಳ ನಂತರ ಒಂದು ಸಾಲು ತೊಗರಿ ಹಾಕುವುದು ಅಕ್ಕಡಿ ಬೆಳೆ ಎನಿಸುತ್ತದೆ. ಅದರಂತೆ ಗೋಧಿಯಲ್ಲಿ ಒಂದು ಸಾಲು ಕುಸುಬೆ ಬೆಳಯುವುದೂ ಅಕ್ಕಡಿ ಬೆಳೆ ಎನಿಸುತ್ತದೆ. ಐದು ಸಾಲು ಕಡಲೆ ಇಲ್ಲವೆ ಐದು ಸಾಲು ಗೋಧಿ ನಂತರ ಒಂದು ಸಾಲು ಕುಸುಬೆ ಬೆಳೆಯುತ್ತಾರೆ. ಇದು ಪಂರಪರಾಗತವಾಗಿ ಬಂದ ಮಿಶ್ರಬೆಳೆ ಪದ್ಧತಿಯಾಗಿದ್ದು, ಕೃಷಿಯಲ್ಲಿ ಆಧುನಿಕತೆ ಅಳವಡಿಸಿಕೊಳ್ಳಲು ಹೋಗಿ ಅನಾಹುತ ಆಗಿದೆ. ಹೀಗೆ ಮಿಶ್ರ ಬೆಳೆ ಮಾಡುವುದು, ಲಾಭದಾಯಕ ಹಾಗೂ ಹೊಲಕ್ಕೆ ಹೊಲದ ಮಣ್ಣಿಗೆ ಹಿತಕಾರಕ ಎನಿಸಿದೆ. ಏಕದಳ, ದ್ವಿದಳ ಬೆಳೆಗಳ ಮಿಶ್ರಣದಿಂದಾಗಿ ಬೆಳೆಗಳು ಪೋಷಕಾಂಶಗಳನ್ನು ಹೀರಿಕೊಳ್ಳುವಲ್ಲಿ ಸ್ಪರ್ಧೆ ಇರಲಾರದು. ಕೀಟ ಹಾಗೂ ರೋಗಗಳ ಬಾಧೆ ಕಡಿಮೆಯಾಗುವುದು. ಬೆಳೆಗಳು ಒಂದು ಬೆಳೆ ಕಟಾವು ಆದ ನಂತರ ಇನ್ನೊಂದು ಕಟಾವಿಗೆ ಬರುತ್ತವೆ. ಉದಾಹರಣೆಗೆ ಶೇಂಗಾ, ಹೆಸರು, ಜೋಳದಂತಹ ಬೆಳೆಗಳು ಮೊದಲು ಕಟಾವಿಗೆ ಬರುತ್ತವೆ. ಹತ್ತಿ ನಂತರ ಕಟಾವಿಗೆ ಬರುತ್ತದೆ. ಅದರಂತೆ ಗೋಧಿ, ಕಡಲೆ ಹಿಂಗಾರಿಯಲ್ಲಿ ಬೇಗ ಕಟಾವಿಗೆ ಬಂದರೆ ಕುಸುಬೆ ನಂತರ ಕಟಾವಿಗೆ ಬರುತ್ತದೆ.

ಸಂಗಾತಿ ಬೆಳೆಗಳು :

ಈ ಮಿಶ್ರ ಬೆಳೆಗಳು ಸಂಗಾತಿ ಬೆಳೆಗಳೂ ಆಗಿವೆ. ಒಂದು ಬೆಳೆ ಇನ್ನೊಂದು ಬೆಳೆಗೆ ಪೂರಕ ಹಾಗೂ ಪ್ರೇರಕ ಎನಿಸಿದೆ. ಇಲ್ಲಿ ಪೋಷಕಾಂಶಗಳ ಕೊರತೆಯಾಗದು. ಬದಲಾಗಿ ದ್ವಿದಳ ಧಾನ್ಯಗಳಲ್ಲಿರುವ ಬೇರಿನ ಗಂಟಿನಲ್ಲಿ ಸಾರಜನಕದ ಸತ್ವ ಇದ್ದು ಅದು ಪಕ್ಕದ ಸಾಲಿನಲ್ಲಿ ಬೆಳೆದ ಏಕದಳ ಧಾನ್ಯದ ಬೆಳೆಗೆ ಪೂರಕವಾಗಿದೆ. ಕಡಲೆಗೆ ಬೇಕಾದ ಸತ್ವಗಳು ಪೋಷಕಾಂಶಗಳು ಕುಸುಬೆಗೆ ಬೇಕಿಲ್ಲ. ಅವುಗಳಲ್ಲಿ ಒಂದು ರೀತಿಯ ಸಹಬಾಳ್ವೆ. ಇದೆ. ಇದೇ ಮಾತು ಜೋಳ, ತೊಗರಿ, ಹೆಸರು ಬೆಳೆಗಳಿಗೂ ಅನ್ವಯಿಸುತ್ತದೆ. ಈ ಸಂಗಾತಿ ಬೆಳೆಗಳಲ್ಲಿ ಹಲವಾರು ವೈವಿಧ್ಯಮಯ ಬೆಳೆಗಳನ್ನೂ ಬೆಳೆಯಬಹುದಾಗಿದೆ. ಅದೂ ಒಂದೇ ಹೊಲದಲ್ಲಿ. ಉದಾಹರಣೆಗೆ ಹೇಳಬೇಕಾದರೆ ಉಳ್ಳಾಗಡ್ಡೆ, ಸಬ್ಬಸಗಿ, ಕೋತಂಬರಿ,

ಬದನೆ, ಬೆಳ್ಳುಳ್ಳಿ ಹೀಗೆ ಮಿಶ್ರ ಬೆಳೆ ಮಾಡಬಹುದಾಗಿದೆ. ಅದರಂತೆ ಜೋಳ, ಹೆಸರು, ಅಲಸಂದೆ, ತೊಗರಿ, ಪುಂಡಿ ಮೊದಲಾದ ಬೆಳೆ ಮಿಶ್ರಬೆಳೆ ಮಾಡಬಹುದು. ಸಾಂವಿ ಬಿತ್ತಿದ ಹೊಲದಲ್ಲಿ ತೊಗರಿಯನ್ನು ಅಕ್ಕಡಿ ಬೆಳೆಯಾಗಿ ಹಾಗೂ ಸಾಂವಿ ಹೊಡೆ ಹಾಕುವ ಸಂದರ್ಭದಲ್ಲಿ ಅದರ ಸಾಲಿನ ನಡುವೆ ಹುರುಳಿಯನ್ನು ಬಿತ್ತುತ್ತಾರೆ. ಶೇಂಗಾ ಬಿತ್ತಿದ ಹೊಲದಲ್ಲಿ ಜೈಧರ ಹತ್ತಿ, ಜೈಧರ ಹತ್ತಿಯಲ್ಲಿ, ಬಿಳಿ ಜೋಳ, ಹುರುಳಿ, ಅಗಸೆ ಬಿಳಿ ಎಳ್ಳು ಸಹಿತ ಮಿಶ್ರ ಬೆಳೆ ಮಾಡಬಹುದಾಗಿದೆ. ಮೆಣಸಿನ ಗಿಡದಲ್ಲಿ ಜೈಧರ ಹತ್ತಿಯನ್ನು ಮಿಶ್ರ ಬೆಳೆಯನ್ನಾಗಿ ಬೆಳೆಯಲಾಗುತ್ತದೆ. ಇಷ್ಟೆಲ್ಲಾ ಮಿಶ್ರಬೆಳೆ ಮಾಡಿದರೂ ಇಳುವರಿಯಲ್ಲಿ ಹೆಚ್ಚು ಕಡಿಮೆಯಾಗದು. ಒಂದು ಬೆಳೆಯ ಧಾರಣೆ ಕುಸಿದರೆ, ಇನ್ನೊಂದು ಬೆಳೆಗಾದರೂ ಧಾರಣೆ ಸಿಗುತ್ತದೆ.

ಪರ್ಯಾಯ ಬೆಳೆಗಳು :

ಮುಂಗಾರಿನಲ್ಲಿ ಒಂದು ಬೆಳೆ ಮಾಡಿದ ನಂತರ ಹಿಂಗಾರಿಯಲ್ಲಿ ಬೇರೆ ಬೆಳೆ ಮಾಡಬೇಕು. ಇದೂ ಸಾಂಪ್ರದಾಯಿಕ ಒಕ್ಕಲುತನದ ಕ್ರಮವಾಗಿದೆ. ಮಲೆನಾಡಿನಲ್ಲಿ ಈಗಲೂ ಭತ್ತವನ್ನು ಬೆಳೆದು ನಂತರ ಹಿಂಗಾರಿಯಲ್ಲಿ ಕಡಲೆ, ಅಗಸೆ, ಹೆಸರು, ಅವರೆಯಂತಹ ಬೆಳೆಗಳನ್ನು ಕಡೇ ಫಲ ಎಂದು ಈಗಲೂ ಬೆಳೆಯಲಾಗುತ್ತಿದೆ. ಮುಂಗಾರಿಯಲ್ಲಿ ಹೆಸರು ಬೆಳೆದ ಹೊಲದಲ್ಲಿ ಹಿಂಗಾರಿಯಲ್ಲಿ ಜೋಳದ ಬೆಳೆ ಚೆನ್ನಾಗಿ ಬರುತ್ತದೆ. ಅದರಂತೆ ಶೇಂಗಾ ಬೆಳೆದ ಹೊಲದಲ್ಲಿ ಗೋಧಿ ಚೆನ್ನಾಗಿ ಬರುತ್ತದೆ. ಇದೇ ಮಾತು ಹಸಿರುಕ್ರಾಂತಿಯ ಕೊಡುಗೆಗಳಾದ ಹೈಬ್ರಿಡ್ ತಳಿಯ ಬೆಳೆಗಳಿಗೆ ಅನ್ವಯಿಸಲಾಗದು. ಯಾಕೆಂದರೆ ಒಂದೇ ಬೆಳೆ ಒಂದು ಹೊಲಕ್ಕೆ ಸೀಮಿತವಾಗಿದೆ.

ಪ್ರಯೋಜನಗಳು: ಮಿಶ್ರ ಬೆಳೆ ಮಾಡುವುದರಿಂದ ಬೆಳೆಗಳು ಒಂದಾದ ನಂತರ ಇನ್ನೊಂದು ಕಟಾವಿಗೆ ಬರುತ್ತವೆ. ಹೀಗಾಗಿ ಕೃಷಿ ಕೂಲಿಕಾರರ ಅಭಾವಯಿರುವ ಇಂದಿನ ದಿನಗಳಲ್ಲಿ ಮಿಶ್ರ ಬೆಳೆ ಹೆಚ್ಚು ಪ್ರಯೋಜನಕಾರಿ ಎನಿಸಿದೆ. ಒಂದು ಬೆಳೆ ನಷ್ಟವಾದರೆ ಇನ್ನೊಂದು ಬೆಳೆ ಬಂದೇ ಬರುವುದೆಂಬ ಭರವಸೆ ಇರುತ್ತದೆ. ಆಯಾ ಸಂದರ್ಭಕ್ಕನುಸರಿಸಿ ಬೆಳೆಗಳು ಮಾಗಿ ನಿರಂತರ ಉತ್ಪನ್ನ ಬರುತ್ತದೆ. ಹೀಗೆ ಮಾಡಿದಾಗ ನಿರಂತರ ಆದಾಯ ಬರುತ್ತದೆ. ದನಕರುಗಳಿಗೆ ಮೇವು ದೊರಕುತ್ತದೆ.

ಎತ್ತಿನ ಬೇಸಾಯ ಸೂಕ್ತ ಮತ್ತು ಮಿತವ್ಯಯ

ಎತ್ತೊಮ್ಮೆ ಹೂಡುವುದು ಮತ್ತೊಮ್ಮೆ ಹರಗುವುದು
ಬಿತ್ತೊಮ್ಮೆ ಹರಗಿ ಕಳೆದೆಗೆದರಾ ಬೆಳೆಯು ಎತ್ತಗೈಯುದ್ದ ಸರ್ವಜ್ಞ

ಗಳೆ ಹೊಡೆಯಲು, ಬಿತ್ತಲು, ಎಡೆಕುಂಟೆ ಹೊಡೆಯಲು, ಹರಗಲು ಎತ್ತುಗಳು ಸೂಕ್ತ ಎಂದು ಸರ್ವಜ್ಞ ಕವಿ ಎತ್ತುಗಳ ಮಹತ್ವವನ್ನು ಕೊಂಡಾಡಿದ್ದಾನೆ. ಎತ್ತುಗಳನ್ನು ಮೇಯಿಸುವುದು, ಮೈ ತೊಳೆಯುವುದು, ಗಳೆ ಹೂಡಿ ಆ ಮೇರಿಯಿಂದ ಈ ಮೇರೆಗೆ ತಿರುವಿಗೊಮ್ಮೆ ತಾನೂ ನಡೆದಾಡುವದು ಬೇಸರ ಎಂಬ ಭಾವನೆಯಿಂದಾಗಿ ರೈತರು ಬೇಸಾಯಕ್ಕೆ ಟ್ರಾಕ್ಟರ ಖರೀದಿಸುವ ಉಮೇದಿನಲ್ಲಿದ್ದಾರೆ. ೨೦೦೬ ಟ್ರಾಕ್ಟರುಗಳ ಭರಾಟೆಯ ವರ್ಷ. ಮನೆಗೊಂದು ಮರ ನೆಡಿ ಎಂಬ ಮಾತಿನ ಬದಲಾಗಿ ಮನೆಗೊಂದು ಟ್ರಾಕ್ಟರ್ ಇಡಿ ಎಂಬಂತೆ ಪಕ್ಕದ ಮನೆಯವ ಟ್ರಾಕ್ಟರ ತಂದರೆ ತಾನೂ ತಂದೇ ಬಿಡುವ ಹಠ ತೊಡುತ್ತಾರೆ. ಆದರೆ ಟ್ರಾಕ್ಟರ್‌ಗಳು ಯಾವ ಕಾಲಕ್ಕೂ ಮಿತವ್ಯಯ ಅಲ್ಲ, ಹೊಲದ ಮಣ್ಣಿಗೆ ಸೂಕ್ತವೂ ಅಲ್ಲ.

ಟ್ರಾಕ್ಟರ್‌ಗಳು ಎತ್ತಿನಂತೆ ಅಡ್ಡಡ್ಡ ಗಳೆ ಹೊಡೆಯಲು ಬರುವುದಿಲ್ಲ. ಎಡೆಕುಂಟೆ (ಮಧ್ಯಂತರ ಬೇಸಾಯ) ಹೊಡೆಯಲು ಬರುವುದಿಲ್ಲ. ಯಾವುದೇ ಬೆಳೆ ಮಾಡಬೇಕಾದರೆ ಒಮ್ಮೆ ಉದ್ದುದ್ದ ಮತ್ತು ಅಡ್ಡಡ್ಡವಾಗಿ ಮತ್ತೊಮ್ಮೆ ಗಳೆ ಹೊಡೆಯಬೇಕು. ಟ್ರಾಕ್ಟರ್‌ನಿಂದ ಗಳೆ ಹೊಡೆಯುವಾಗ ನೀರು ಮತ್ತು ಮಣ್ಣಿನ ರಕ್ಷಣೆಗಿರುವ ಒಡ್ಡು ಮತ್ತು ಹಾಳೆಗಳು ಅಡೆತಡೆಯಾಗುವವೆಂದು ಈ ವ್ಯವಸ್ಥೆಯನ್ನೇ ನಾಶ ಮಾಡಲಾಗುತ್ತಿದೆ. ತುಂಡು ಹೊಲಗಳಲ್ಲಿ ಮತ್ತು ಸಣ್ಣ ರೈತರಿಗೆ ಟ್ರಾಕ್ಟರ್‌ಗಳು ಪ್ರಯೋಜನಕಾರಿಯಲ್ಲ. ಟ್ರಾಕ್ಟರ್‌ನಂತೆ ಎತ್ತುಗಳಿಗೆ ಪರವಾನಿಗೆ, ಲೈಸನ್ಸ್, ತೆರಿಗೆ ಕಟ್ಟಬೇಕಾಗಿಲ್ಲ. ಮೇಸ್ತ್ರಿ ಗ್ಯಾರೇಜು ಬೇಕಾಗಿಲ್ಲ. ಮೂರ್‍ನಾಲ್ಕು ಲಕ್ಷಗಟ್ಟಲೆ ಬಂಡವಾಳ ಎತ್ತಿಗೆ ಬೇಕಾಗಿಲ್ಲ.

ಬೆಳೆಗಳಿಗೆ ಬೇಕಾದ ಎಲ್ಲ ಪೋಷಕಾಂಶಗಳೂ ಹೊಲದ ಮೇಲ್ಮಣ್ಣಿನಲ್ಲೇ ಲಭ್ಯ ಇವೆ. ಆದ್ದರಿಂದ ಆಳವಾಗಿ ಗಳೆ ಹೊಡೆಯಬೇಕಾದ ಅವಶ್ಯಕತೆಯಿಲ್ಲ. ಒಂದು ಜೋಡಿ ಎತ್ತಿಗೆ ಜವಾರಿ ಆದರೆ ೨೦ ಸಾವಿರ ಬೇಕು. ಮೂಡಲಿ ಆದರೆ ೩೦ ರಿಂದ ೩೫

ಸಾವಿರ ಬೇಕು. ಚಕ್ಕಡಿಗೆ ೨೦ ಸಾವಿರ ಬೇಕು. ಎತ್ತುಗಳನ್ನು ಒಮ್ಮೆ ಖರೀದಿಸಿದರೆ ಇಪ್ಪತ್ತು ವರ್ಷಗಳ ತನಕ ಗಳೆ ಹೊಡೆಯಬಲ್ಲವು. ಚಕ್ಕಡಿಯೂ ಅಷ್ಟೇ ತಾಳಿಕೆ ಬರುತ್ತದೆ. ಎತ್ತುಗಳು ಹೆಜ್ಜೆ ಇಡಲು ನಾಲ್ಕೈದು ಇಂಚು ಜಾಗ ಬೇಕು. ಅದೂ ಮುಂದಿನ ಹೆಜ್ಜೆ ಇಟ್ಟಲ್ಲೇ ಹಿಂದಿನ ಹೆಜ್ಜೆ ಇಡುತ್ತದೆ. ಹೀಗಾಗಿ ಎತ್ತುಗಳಿಂದ ಗಳೆ ಹೊಡೆದರೆ ಹೊಲದ ಮಣ್ಣು ಟ್ರಾಕ್ಟರ್‌ನಿಂದ ಹೊಡೆದಾಗ ಆದಂತೆ ಗಟ್ಟಿಯಾಗಲಾರದು. ಎತ್ತುಗಳಿಗೆ ಡಿಸಾಯಿಲ್ ಮತ್ತು ಆಯಿಲ್ ಖರೀದಿಸಬೇಕಾಗಿಲ್ಲ. ಬಹಳ ಎಂದರೆ ಹೊಲದಲ್ಲೇ ಬೆಳೆದ ಹುರುಳಿ, ಮೆಕ್ಕೆಜೋಳ ಮತ್ತು ನವಣೆಗಳ ಹಿಟ್ಟನ್ನು ತಿನಿಸುತ್ತಾರೆ. ಎತ್ತುಗಳು ಟ್ರಾಕ್ಟರ್‌ದಂತೆ ದುರಸ್ತಿಗೆ ಬರಲಾರವು. ಸಣ್ಣ ಪುಟ್ಟ ಕಾಯಿಲೆಗಳು ಬಂದರೆ ರೈತರೆ ಉಪಚಾರ ಮಾಡಬಲ್ಲರು. ಇಲ್ಲದಿದ್ದರೆ ಪಶು ಚಿಕಿತ್ಸಾಲಯಗಳಿಗೆ ಒಯ್ದು ಉಪಚರಿಸಬಹುದು. ಇದೆಲ್ಲಾ ವರ್ಷಕ್ಕೊಮ್ಮೆ ಆದರೆ ಮುಗಿಯಿತು.

ಚಕ್ಕಡಿಗಳು ಐದಾರು ಕ್ವಿಂಟಲ್‌ನಷ್ಟು ಭಾರ ಹೊರಬಲ್ಲವು. ಇದರ ದುರಸ್ತಿಗೆ ಹೊಲದಲ್ಲೇ ಇರುವ ಜಾಲಿ ಗಿಡದ ಟೊಂಗೆ ಕಡಿದು ಒಯ್ದು ಬಡಿಗತನ ಮಾಡುವ (ಊರಲ್ಲೇ ಇರುವ)ವನಿಗೆ ಕೊಟ್ಟರೆ ಸರಿ ಮಾಡಿ ಕೊಡುವನು. ಚಕ್ಕಡಿಯ ಗಾಲಿಗಳು ಕೇವಲ ಮೂರಿಂಚಿನಷ್ಟು ಅಗಲವಿದ್ದು ಚಕ್ಕಡಿ ಹಾಯ್ದು ಹೋದ ಹೊಲದಲ್ಲಿ ಗಳೆ ಹೊಡೆದರೆ ಅಲ್ಲಿ ಬೆಳೆ ಬಂದೇ ಬರುವುದು ಮತ್ತು ಹೊಲ ಗಟ್ಟಿಯಾಗಲಾರದು. ಚಕ್ಕಡಿಗಳನ್ನು ಬೆಳೆಗಳನ್ನು ನಡುವೆ ಮಾಡಿ ಬೆಳೆಗಳಲ್ಲೇ ನಡೆಸಬಹುದು. ಆದರೆ ಟ್ರಾಕ್ಟರ್‌ನ್ನು ಚಕ್ಕಡಿಯಂತೆ ಬೆಳೆಗಳಲ್ಲಿ ಒಯ್ಯಲಾಗದು. ಒಯ್ದರೆ ಒಂದು ಅಕ್ಕಡಿಯಷ್ಟು ಹೊಲದ ಬೆಳೆ ನಾಶವಾಗುತ್ತದೆ. ಏಕೆಂದರೆ ಟ್ರಾಕ್ಟರ್ ಗಾಲಿಗಳು ಎರಡು ಅಡಿಯಷ್ಟು ಅಗಲವಿರುತ್ತವೆ. ಚಕ್ಕಡಿಗಳು ರೈತರ ಹೊಲಕ್ಕೆ ಗೊಬ್ಬರ ಹೇರಲು, ಧವಸ ಧಾನ್ಯಗಳನ್ನು ಹೇರಿಕೊಂಡು ಮನೆಗೆ ತರಲು, ಸಮೀಪದ ಊರಿಗೆ ಜಾತ್ರೆ, ನಿಬ್ಬಣ ಮತ್ತು ಬೀಗರ ಮನೆಗಳಿಗೆ ಹೋಗಿ ಬರಲು ಅನುಕೂಲಕರವಾಗಿವೆ. ಚಕ್ಕಡಿಗಳು ಹಳ್ಳ, ಕೊಳ್ಳ, ಸರೋವರ, ತಗ್ಗು ದಿನ್ನೆಯ ಕಚ್ಚಾ ರಸ್ತೆಯಲ್ಲೂ ಹೋಗಬಲ್ಲವು. ಆದರೆ ಟ್ರಾಕ್ಟರ್‌ಗಳು ಹಾಗೆ ಹೋಗುವುದಿಲ್ಲ.

"ಅಪ್ಪ ಬಸವಣ್ಣನ ಸೆಗಣಿಯ ಬಳದರ ಗಂಧದ ನಾತ ನಾರ್‍ಯಾವ"; ಟ್ರಾಕ್ಟರ್‌ಗೆ ಹಾಕಿದ ಡಿಸಾಯಿಲ್, ಆಯಿಲ್‌ಗಳು ಸುಟ್ಟು ಹೊಗೆ ಉಗುಳುತ್ತದೆ. ಪರಿಸರ ಹಾಳು ಮಾಡುತ್ತದೆ. ಮನುಷ್ಯರ ಆರೋಗ್ಯವನ್ನು ಕೆಡಿಸುತ್ತದೆ. ಆದರೆ ಎತ್ತುಗಳು ನಾವು ತಿಂದು ಬಿಟ್ಟ ಹುಲ್ಲು, ಕಣಿಕೆ, ಹೊಟ್ಟುಗಳನ್ನು ತಿನ್ನುತ್ತವೆ. ಮತ್ತು ಪ್ರತಿಯಾಗಿ ಸೆಗಣಿ, ಗ್ವಾತ (ಮೂತ್ರ)ವನ್ನು ಕೊಡುತ್ತವೆ. ದನಗಳ ಸೆಗಣಿ ಮತ್ತು ಗ್ವಾತದಲ್ಲಿ ಔಷಧೀಯ ಗುಣಗಳಿವೆ. ಯಾವುದೇ ಚರ್ಮರೋಗಗಳನ್ನು ಈ ಸೆಗಣಿ ಗ್ವಾತ ಗುಣಪಡಿಸುವುದು. ಅಂತೆಯೇ ಹಳ್ಳಿಯ ಮಹಿಳೆಯರು ಎತ್ತಿನ ಸೆಗಣಿ ಬಳಿಯುವುದರಿಂದ ಗಂಧದ ವಾಸನೆ ಬರುತ್ತದೆ ಎಂದು ಹಾಡಿದ್ದಾರೆ. ಈ ಸೆಗಣಿ ಮೂತ್ರಗಳಲ್ಲಿರುವ ವಾಸನೆಯನ್ನು ತಿರಸ್ಕಾರದಿಂದ ಕಾಣದೆ ಪವಿತ್ರ ಭಾವನೆಯಿಂದ ನೋಡುತ್ತಾರೆ. ಈ ಸೆಗಣಿ ಮತ್ತು ಗ್ವಾತದಿಂದ

ಉತ ಷ್ಟವಾದ ಸಾವಯವ ಗೊಬ್ಬರವಾಗಿ ಮಾರ್ಪಡಿಸಿ ಹೊಲಕ್ಕೆ ಹಾಕಿದರೆ, ಬೆಳೆಗಳು ರೋಗರಹಿತವಾಗಿ ದಷ್ಟಪುಷ್ಟವಾಗಿ ಬೆಳೆದು ಉತ್ತಮ ಇಳುವರಿ ಬರುತ್ತದೆ. ಹದ ನೋಡಿ ಹರಗಲು ಬೆದೆ ನೋಡಿ ಬಿತ್ತಲು, ಬೆಳೆಸಾಲು ಮಾಡಲು, ಎಡೆಕುಂಟೆ ಹೊಡೆಯಲು ಕಣ ಮಾಡಿ ಒಕ್ಕಲು ಮತ್ತು ಚಕ್ಕಡಿಯನ್ನು ಎಳೆಯಲು ಹೀಗೆ ಏನೆಲ್ಲಾ ಅಗತ್ಯಗಳನ್ನು ಯಾವುದೇ ಖರ್ಚಿಲ್ಲದೆ ಪೂರೈಸುವ ಎತ್ತುಗಳು ರೈತರ ಮಿತ್ರ ಆಗಿವೆ. ಅಷ್ಟೇ ಅಲ್ಲ ರೈತರ ಆರಾಧ್ಯ ದೈವ ಆಗಿವೆ. ಎತ್ತುಗಳು ಸ್ವಾವಲಂಬಿ ಮತ್ತು ಸಾವಯವ ಕೃಷಿಗೆ ಅವಶ್ಯಕ ಹಾಗೂ ಪೂರಕ ಆಗಿವೆ.

"ಎತ್ತು ಇಲ್ಲದ ರೈತನಿಗೆ ಎದೆ ಇಲ್ಲ":

ಎಂಬ ಗಾದೆ ಮಾತಿದೆ. ಎತ್ತಿನಿಂದ ರೈತನಿಗೆ ಧೈರ್ಯ ಸ್ಥೈರ್ಯ ಬರುತ್ತದೆ. ಉತ್ತಮ ಎತ್ತುಗಳಿದ್ದರೆ ಅವುಗಳನ್ನು ಚೆನ್ನಾಗಿ ಪೋಷಣೆ ಮಾಡಿದರೆ ಗಳೆ ಹೊಡೆಯುವುದು, ಬೆಳೆ ಮಾಡುವುದು ಅಸಾಧ್ಯವೇನಲ್ಲ. ಎತ್ತುಗಳು ವಯಸ್ಸಾದರೂ ಅವುಗಳು ಗೊಬ್ಬರ ಕೂಡುತ್ತಲೇ ಇರುತ್ತವೆ. ಅಂತೆಯೇ ಎತ್ತುಗಳನ್ನು ಸಾಯುವ ತನಕ ಜೋಪಾನ ಮಾಡಿ ಸತ್ತರೆ ಹೊಲದಲ್ಲೇ ಹುಗಿಯುತ್ತಾರೆ. ಪ್ರತಿ ರೈತನೂ ತಾನು ಮಲಗುವ ನಡುಮನೆಯ ಕೆಳಗೆ ಹಕ್ಕೆ ಮಾಡಿ ಎತ್ತುಗಳನ್ನು ಗೋದಣಿಗೆ ಕಟ್ಟುತ್ತಾನೆ. ಎದ್ದ ಕೂಡಲೇ ಎತ್ತುಗಳ ಮುಖ ನೋಡಬೇಕು ಮತ್ತು ಎತ್ತುಗಳು ಮೇವು ತಿನ್ನುತ್ತಿರಬೇಕಾದರೆ ಕೊರಳಲ್ಲಿರುವ ಗಂಟೆಗಳ ನಾದ ರೈತನ ಕಿವಿಗೆ ಕೇಳುತ್ತಿರಬೇಕು. ಎತ್ತುಗಳು ಶಿವನ ವಾಹನ ನಂದಿಯ ಅವತಾರ ಎಂದೇ ರೈತರು ನಂಬಿದ್ದಾರೆ. 'ಬಸವಣ್ಣ' ಎಂದು ಗೌರವಪೂರ್ವಕವಾಗಿ ಕರೆಯುತ್ತಾರೆ. ಪ್ರತಿ ಸೋಮವಾರ ಎತ್ತುಗಳಿಗೆ ರಜೆ. ಆ ದಿವಸ ಎತ್ತುಗಳ ಮೈ ತೊಳೆದು ಪೂಜೆ ಮಾಡುತ್ತಾರೆ. ಯಾವದೇ ಗಳೆ ಹೊಡೆಯುವುದಾಗಲಿ, ಹೊಲಗೆಲಸಕ್ಕೆ ಎತ್ತುಗಳನ್ನು ಉಪಯೋಗಿಸುವುದಿಲ್ಲ.

ಒಂದು ಅಂದಾಜಿನಂತೆ ಶೇ. ೬೦ರಷ್ಟು ಭೂಮಿಯನ್ನು ಎತ್ತುಗಳೇ ಗಳೆ ಹೊಡೆಯುತ್ತವೆ. ಪ್ರತಿ ವರ್ಷ ೬೦ ಲಕ್ಷ ಟನ್ ಡಿಸಾಯಿಲ್ ಉಳಿಸುತ್ತವೆ. ಅಷ್ಟೇ ಪ್ರಮಾಣದ ವಿದೇಶಿ ವಿನಿಮಯ ಉಳಿತಾಯವಾಗುತ್ತದೆ. ಡಿಸಾಯಿಲ್ ಧಾರಣೆ ಪ್ರತಿ ವರ್ಷ ಏರುತ್ತಲೇ ಇದೆ. ಮುಂದೊಂದು ದಿನ ನಮ್ಮ ದೇಶಕ್ಕೆ ಡಿಸಾಯಿಲ್ ಕೊಡಬೇಕಾದರೆ ದನಗಳ ಮಾಂಸ ಕಳಿಸಿದರೆ ಕೊಡುವುದಾಗಿ ಅರಬ ರಾಷ್ಟ್ರಗಳು ಕರಾರು ಹಾಕಿದರೆ, ದೇಶದ ಪಶು ಸಂಪತ್ತು ನಾಶವಾಗಿ ಹೋಗುವುದು. ಆಗ ಅವರು ಡಿಸಾಯಿಲ್ ಕೊಡಲಾರರು. ಅಷ್ಟೊತ್ತಿಗೆ ದೇಶದಲ್ಲಿ ಎತ್ತುಗಳೆಲ್ಲ ನಿರ್ನಾಮ ಆಗಿರುತ್ತವೆ. ಗಳೆ ಹೊಡೆಯುವದೆಂತು? ಎಂಬ ಪ್ರಶ್ನೆ ಎದುರಾಗದೆ ಇರದು.

*

ಮೇಟಿವಿದ್ಯೆ

'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಮೇಲು' ಸರ್ವಜ್ಞ ಕವಿಯು ಮೇಟಿ ವಿದ್ಯೆಯ ಮಹತ್ವವನ್ನು ಹೆಮ್ಮೆಯಿಂದ ಹಾಡಿದ್ದಾನೆ. ಮೇಟಿ ಒಕ್ಕಲುತನದ ಸಂಕೇತ. ಅದರಂತೆ ಮೇಟಿ ವಿದ್ಯೆ ಒಕ್ಕಲುತನದ ವೃತ್ತಿಯ ಸಂಕೇತ ಎನಿಸಿದೆ. ಮೇಟಿ ವಿದ್ಯೆ ಕಲಿಯಲು ಯಾವ ಶಾಲೆಗೂ ಹೋಗಬೇಕಾಗಿಲ್ಲ. ಯಾವುದೇ ಡೊನೇಶನ್ ಕೊಡಬೇಕಾಗಿಲ್ಲ. ಫೀ ಕೊಡಬೇಕಾಗಿಲ್ಲ. ಮೇಟಿ ವಿದ್ಯೆ ಕಲಿಯಲು ಹೊಲವೇ ಶಾಲೆಯಾಗಿದೆ. ಅನುಭವಿ ರೈತನ ಮಾರ್ಗದರ್ಶನದಲ್ಲಿ ಕಾಯಕಷ್ಟಕ್ಕೆ ಹೆದರದೇ ಶ್ರಮಪಡಲು ಮುಂದಾಗಬೇಕು. ಅವನಿಗೆ ಪ್ರಕೃತಿಯೇ ಶಿಕ್ಷಕ. ಹಂಗಾಮಿಗನುಸರಿಸಿ ಬೆಳೆ ಮಾಡುತ್ತಿರಬೇಕು. ಮಳೆಯನ್ನು ನಂಬಿ ದುಡಿಯಬೇಕು. ಹದ ನೋಡಿ ಹರಗಿ ಬೆದೆ ನೋಡಿ ಬಿತ್ತಬೇಕು. ಮೇಟಿ ವಿದ್ಯೆ ಕಲಿತವ ಯಾವ ನೌಕರಿಗೂ ಹೋಗಬೇಕಾಗಿಲ್ಲ. ಆತನಿಗೆ ರಜೆ ಇಲ್ಲ. ಭತ್ಯೆ ಇಲ್ಲ. ಪಗಾರವೂ ಇಲ್ಲ. ತನ್ನ ಜೀವನ ನಿರ್ವಹಣೆಯ ಜೊತೆಗೆ ದನಕರು ಪ್ರಾಣಿ ಪಕ್ಷಿಗಳಿಗೂ ಅನ್ನದಾತ ಒಕ್ಕಲಿಗನಾಗಿದ್ದಾನೆ. ಒಕ್ಕಲಿಗನನ್ನು ರಾಷ್ಟ್ರಕವಿ ಕುವೆಂಪು ಅವರೂ 'ನೇಗಿಲಯೋಗಿ' ಎಂದು ಕರೆದಿದ್ದಾರೆ.

ವರ್ತುಲಾಕಾರದ ಕಣದ ನಡುವೆ ಮೇಟಿಯನ್ನು ನಿಲ್ಲಿಸಿರುತ್ತಾರೆ. ಸೆಗಣಿಯಿಂದ ಸಾರಿಸಿ ಕಣದ ತುಂಬ ಜೋಳದ ತೆನೆಗಳನ್ನು ಹರಡಿ ಒಣಗಿಸುತ್ತಾರೆ. ಮೇಟಿಗೆ ಎತ್ತುಗಳನ್ನು ಕಟ್ಟಿ ಹಂತಿ ಹೊಡೆಯುತ್ತಾರೆ. ಹಂತಿ ಹೊಡೆಯುವಾಗ ಹಂತಿಯ ಪದಗಳನ್ನು ಹಾಡುತ್ತಾರೆ. ನಂತರ ಕಂಕಿಯನ್ನು ಬೆರೆಸಿ ತೆಗೆದು ಮ್ಯಾಟದ ಮೇಲೆ ಹತ್ತಿ ತೂರುತ್ತಾರೆ. ಇದರಿಂದ ಸುಂಕ, ಸೊರಗು ಮತ್ತು ಜೊಳ್ಳು-ಕಾಳುಗಳು ಹಾರಿ ಹೋಗುತ್ತವೆ. ಉಳಿದಿರುವ ಉತ್ತಮ ಕಾಳುಗಳನ್ನು ಮದ ಮಾಡಿ ನಂತರ ಮೇಟಿ ಸುತ್ತ ಸುರುವಿ ರಾಶಿ ಹಾಗುತ್ತಾರೆ. ಹಿಗ್ಗಿನಿಂದ ಸುಗ್ಗಿ ಮಾಡುವ ರೈತರು 'ಹುಲಿಗಿ' ಎಂದು ಅನ್ನುತ್ತಿರುತ್ತಾರೆ. ಅಂದರೆ ತಮ್ಮ ರಾಶಿಯು ಹುಲುಸಾಗಲಿ ಎಂಬ ಆಶಯ ಇರಬಹುದು. ಜೋಳದಂತೆ ಕಡಲೆ, ತೊಗರಿ, ಹುರುಳಿ ಮತ್ತು ಗೋದಿಗಳನ್ನು ಕಣದಲ್ಲಿ ಒಕ್ಕುತ್ತಾರೆ. ಹೀಗಾಗಿ ಮೇಟಿ ರೈತರಿಗೆ ಗೌರವದ ಸಂಕೇತವೆನಿಸಿರಲು ಸಾಕು. ಮೇಟಿಯನ್ನು ಶುಭ ದಿನದಂತು ನಡೆಸಿ ಸುಗ್ಗಿ ಮುಗಿದ ನಂತರ ಕೀಳುತ್ತಾರೆ.

'ನಮ್ಮ ಹಳ್ಳಿಯ ಊರಾ ನಮಗ ಪಾಡ ಯಾತಕವ್ವಾ ಹುಬ್ಬಳ್ಳಿ ಧಾರವಾಡಾ' ಎಂದು ಕವಿ ಆನಂದಕಂದರು ಹಾಡಿನಂತೆ ತನ್ನ ಹಳ್ಳಿಯಲ್ಲೇ ರೈತರು ನೆಮ್ಮದಿಯನ್ನು ಸ್ವರ್ಗವನ್ನು ಕಂಡುಕೊಂಡಿದ್ದರು. ಗೀಗೀ ಪದ, ಹಂತಿಹಾಡು, ಸೋಬಾನ ಪದ, ಬೀಸು ಕಲ್ಲಿನ ಪದ, ಕೋಲಾಟದ ಪದ, ಲಾವಣಿ ಪದ, ದೊಡ್ಡಾಟ ಮತ್ತು ಸಣ್ಣಾಟ ಮೊದಲಾದ ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಹಳ್ಳಿಗಳು ಜನಪದ ಸಾಹಿತ್ಯದ ಕಣಜಗಳಾಗಿದ್ದವು. ದುಡಿಮೆಯ ದಣಿವನ್ನು ಜೀವನದ ಕಷ್ಟಗಳನ್ನು, ಮರೆಯಲು ಹಿಗ್ಗಿನಿಂದ ಹಾಡಿ ಸುಗ್ಗಿ ಮಾಡುತ್ತಿದ್ದರು.

ಒಕ್ಕುವ ಯಂತ್ರಗಳ ಬಳಕೆಯಿಂದಾಗಿ, ಕಣ ಮಾಡುವ, ಒಕ್ಕುವ ಶ್ರಮ ರೈತರಿಗೆ ಬೇಕಾಗಿಲ್ಲ. ಒಕ್ಕುವ ಯಂತ್ರದ ಮೂಲಕ ನೇರವಾಗಿ ಗೋಣಿ ಚೀಲದಲ್ಲಿ ಸ್ವಚ್ಛವಾದ ಕಾಳನ್ನು ತುಂಬಬಹುದಾಗಿದೆ. ಶ್ರಮದ ಆಯಾಸವನ್ನು ಮರೆಯಲು ಹಾಡುತ್ತಿದ್ದ ಹಂತಿಯ ಪದಗಳನ್ನು ಹಾಡುವ ಕೊರಳ ಕಂಠ ಮೂಕವಾಗಿದೆ. ಹಿಗ್ಗಿನಿಂದ ಸುಗ್ಗಿ ಮಾಡುವ ಸಂಭ್ರಮ ಇಂದಿಲ್ಲದಾಗಿದೆ. ಸಾಂಸ್ಕೃತಿಕ ಬದುಕಿನ ಚಹರೆಯು ಅಕರಾಳ ವಿಕರಾಳ ಆಗಿದೆ. ಯಾಂತ್ರೀಕೃತ ಒಕ್ಕಲುತನದ ಮೂಲಕ ರೆಂಟೆ, ಕುಂಟೆ, ಎತ್ತು ಚಕ್ಕಡಿಗಳೂ ಕಣ್ಮರೆಯಾಗುತ್ತಿವೆ. ಹಸಿರು ಕ್ರಾಂತಿಯ ಫಲವಾಗಿ ಹೈಬ್ರಿಡ್ ಬೀಜಗಳ ಬಳಕೆ, ರಾಸಾಯನಿಕ ಕೀಟ ನಾಶಕಗಳ ಮತ್ತು ರಾಸಾಯನಿಕ ಗೊಬ್ಬರಗಳ ಬಳಕೆ ಅನಿವಾರ್ಯವಾಗಿದೆ. ಯಾವುದೇ ಖರ್ಚಿಲ್ಲದೆ ಮಾಡುತ್ತಿದ್ದ ಸಾಂಪ್ರದಾಯಿಕ ಒಕ್ಕಲುತನದ ಬದಲಾಗಿ ಬಂಡವಾಳ ಹಾಕಿ ಮಾಡುವ ವ್ಯಾಪಾರಿ ವೃತ್ತಿಯಾಗುತ್ತಿದೆ. ಅತ್ತ ವೈಜ್ಞಾನಿಕ ಒಕ್ಕಲುತನದ ಬೆನ್ನು ಹತ್ತಲು ಆಗದೆ ಇತ್ತ ಸಾಂಪ್ರದಾಯಿಕ ಒಕ್ಕಲುತನದತ್ತ ಹಿಂತಿರುಗಲೂ ಆಗದೆ ತ್ರಿಶಂಕು ಸ್ಥಿತಿಗೆ ರೈತರು ತಲುಪಿದ್ದಾರೆ.

ರೈತರು ಹೆಚ್ಚು ಹೆಚ್ಚು ಬಂಡವಾಳ ಹಾಕಿ ಹೆಚ್ಚು ಬೆಳೆದ ಟೊಮೆಟೋ, ಆಲೂಗಡ್ಡೆ, ಉಳ್ಳಾಗಡ್ಡೆ, ಹಾಲು ಕಬ್ಬು ಏನೆಲ್ಲಾ ಬೆಳೆದ ರೈತರ ಉತ್ಪನ್ನಗಳು 'ಕಾಸಿಗೆ ಪಂಚೇರಾಗಿ' ಕಾಲಕಸವಾದವು. ಹಾದಿಗೆ ಚೆಲ್ಲಿ, ಹೆದ್ದಾರಿಯಲ್ಲಿ ಸುರುವಿ, ಹೊಲದಲ್ಲೇ ಕಬ್ಬನ್ನು ಬೆಂಕಿ ಹಚ್ಚಿ ಸುಟ್ಟರು. ಮಾಡಿದ ಸಾಲ ತೀರಿಸಲಾಗದೆ ಹತಾಶೆಯಿಂದ ಮಾನಕ್ಕಂಜಿ ಆತ್ಮಹತ್ಯೆಗೆ ಮುಂದಾಗುತ್ತಿದ್ದಾರೆ. ಸಮೃದ್ಧಿಯ ಸಮಸ್ಯೆ ಇದಾದರೆ ಇನ್ನೊಂದು ಕಡೆಗೆ ನಂಬಿದ ಮಳೆ ಕಣ್ಣು ಮುಚ್ಚಾಲೆ ಆಟವಾಡಿದ್ದಾರಿಂದಾಗಿ ಬರಗಾಲದ ಬವಣೆ ಅನುಭವಿಸಬೇಕಾಗಿದೆ. ಹೀಗಾಗಿ ಪಟ್ಟಣದ ಕಡೆಗೆ ಉದ್ಯೋಗಗಳನ್ನರಸಿ ರೈತರು, ರೈತ ಕೂಲಿಕಾರರು ಗುಳೆ ಹೋಗುತ್ತಿದ್ದಾರೆ. ಹೆಚ್ಚು ಬೆಳೆದ ಕೊರಗು ಒಂದೆಡೆ, ಇನ್ನೊಂದೆಡೆ ಬೆಳೆಯದೇ ಇದ್ದ ಕೊರಗು. ಇವೆರಡಕ್ಕೂ ಮಿಗಿಲಾಗಿ ಸಾಲ ಮಾಡಿ ಬಂಡವಾಳ ಹಾಕಿ ಸಾಲ ತೀರಿಸಲಾಗದ ಕೊರಗು ರೈತರನ್ನು ಒಕ್ಕಲುತನದಿಂದ ದೂರ ಹೋಗುವಂತೆ ಮಾಡುತ್ತಿವೆ. ಇದೆಲ್ಲದಕ್ಕೂ ವಿಶ್ವ ವ್ಯಾಪಾರ ಒಪ್ಪಂದವೇ ಕಾರಣ ಎಂದು ಹೇಳಲಾಗುತ್ತಿದೆ.

ಇಂದಿನ ಸಂದರ್ಭದಲ್ಲಿ 'ನನ್ನ ಪಾಡು ನನ್ನ ಮಕ್ಕಳಿಗೂ ಬೇಡ' ಎಂದು ಅನುಭವಿ ರೈತನೂ ಅನ್ನುವಂತಾಗಿದೆ. ರೈತರ ಮಕ್ಕಳು ಸಹಿತ ಒಕ್ಕಲುತನ ಮಾಡಲು ಹಿಂಜರಿಯುತ್ತಿದ್ದಾರೆ. ಇನ್ನು ಬೇರೆ ವೃತ್ತಿಯನ್ನವಲಂಬಿಸಿದವರ ಮಕ್ಕಳಂತೂ ಕೃಷಿಯ ಕಡೆಗೆ ಹೊರಳಿಯೂ ನೋಡಲಾರರು. ಹಳ್ಳಿಯಲ್ಲಿರುವ ರೈತ ಕೂಲಿಕಾರರು ಪಟ್ಟಣಗಳಲ್ಲಿರುವ ಹೆಚ್ಚು ಕೂಲಿ ದೊರಕುವ ಕೆಲಸ ಕಾರ್ಯಗಳತ್ತ ಆಕರ್ಷಿತರಾಗುತ್ತಿದ್ದಾರೆ. ಹೀಗಾಗಿ ಒಕ್ಕಲುತನದಲ್ಲಿ ಕೃಷಿ ಕೂಲಿಕಾರರ ಅಭಾವ ತಲೆದೋರಿದೆ. ಇಂದಿನ ಯುವಕರಲ್ಲಿ ಬಹುಜನರಿಗೆ ಕಾಯಕಷ್ಟ ಬೇಕಾಗಿಲ್ಲ. ಒಕ್ಕಲುತನ ಮಾಡುವವರೂ ಮನಸ್ಸು ಮಾಡುತ್ತಿಲ್ಲ. ಸಿಪಾಯಿ ನೌಕರಿ ಇದ್ದರೆ ಸಾಕು ಅಂತಹ ಯುವಕನಿಗೆ ಹೆಣ್ಣು ಕೊಡಲು ಮುಂತಾಗುತ್ತಿದ್ದಾರೆ. ಕಂಪ್ಯೂಟರ್ ಯುಗದಲ್ಲಿ ಕೋಟಿ ಕೋಟಿ ವಿದ್ಯೆಗಳು! ಆದರೆ ಕೋಟಿ ಕೋಟಿ ಉದ್ಯೋಗಾವಕಾಶಗಳಿಲ್ಲ! ಶಿಕ್ಷಣ ವ್ಯವಸ್ಥೆಯಲ್ಲಿ ಕೃಷಿ ಕುರಿತ ಪಠ್ಯ ಕ್ರಮಗಳೂ ಕಣ್ಮರೆಯಾಗುತ್ತಿವೆ. ಕೃಷಿಯಲ್ಲಿ ಆಸಕ್ತಿ ಮೂಡಿಸುವ, ಭರವಸೆ ಹುಟ್ಟಿಸುವ ಪ್ರಯತ್ನಗಳೇ ಅಪರೂಪವಾಗಿವೆ. ಕೃಷಿಯೂ 'ಒಂದು ಪವಿತ್ರ ಉದ್ಯೋಗ' ಎಂಬ ಭಾವನೆ ಆಗಲಿ 'ಕೃಷಿಯೂ ಗೌರವದ ವೃತ್ತಿ' ಎಂಬ ಸಾರ್ವತ್ರಿಕ ಅಭಿಪ್ರಾಯವಾಗಲಿ ಕೇಳಿ ಬರುತ್ತಿಲ್ಲ. 'ಎಲ್ಲ ವೃತ್ತಿಗಳೂ ಶ್ರೇಷ್ಠ. ಎಲ್ಲ ವೃತ್ತಿಗಳೂ ಕಾಯಕಗಳು. ಯಾವುದೇ ದುಡಿಮೆ ಇರಲಿ ಮೇಲು-ಕೀಳು ಅನ್ನಬಾರದು' ಎಂಬ ಶರಣರ ಕಾಯಕ ತತ್ವ ಪ್ರಸ್ತುತ ಸನ್ನಿವೇಶದಲ್ಲಿ ಹೆಚ್ಚು ಅರ್ಥಪೂರ್ಣ ಎನಿಸದೆ ಇರದು.

*

ನುಗ್ಗೆ ತಂದ ಹಿಗ್ಗು

ನನ್ನದು ಒಂದೂವರೆ ಎಕರೆ ಹೊಲದಲ್ಲಿ ಸಣ್ಣ ತೋಟ. ಅದರಲ್ಲಿ ಮಾವು, ಪೇರಲ, ಚಿಕ್ಕು ಹಣ್ಣಿನ ಗಿಡಗಳು, ಕರಿಬೇವು, ಗುಲಾಬಿ ಗಿಡಗಳು. ತೋಟದ ಸುತ್ತಲೂ ಎರಡು ಬದಿಗೆ ಸಾಗವಾನಿ ಗಿಡಗಳ ಸಾಲು, ಇನ್ನೆರಡು ಬದಿಗೆ ಟೆಂಗಿನ ಗಿಡಗಳ ಸಾಲು. ಲಿಂಬೆ, ಹಲಸುಗಳೂ ಇವೆ. ಇಲ್ಲಿ ಯಾವುದೇ ಆಧುನಿಕ ಮತ್ತು ರಾಸಾಯನಿಕ ಕೃಷಿ ಪರಿಕರಗಳನ್ನು ನಾನು ಬಳಕೆ ಮಾಡಿಲ್ಲ. ಸಂಪೂರ್ಣ ಸಾವಯವ ಪದ್ಧತಿ ಅಳವಡಿಸಿರುವೆ. ಡ್ರಿಪ್ (ಹನಿ)ನೀರಾವರಿಯಾಗಲಿ, ತುಂತುರು ನೀರಾವರಿಯಾಗಲಿ ಬಳಸಿಲ್ಲ. ತೋಟದಲ್ಲಿ ಮಾವಿನ ಗಿಡಗಳ ಸಾಲಿನ ನಡುವೆ ಅಂತರ ಬಹಳ ಇದ್ದು ಅವು ಬೆಳೆದು ದೊಡ್ಡವು ಆಗುವತನಕ ನಡುವೆ ಒಂದೊಂದು ಸಾಲು ಬಾಳೆ ಬೆಳೆಯುವ ವಿಚಾರ ಮಾಡಿದ್ದೆ. ಅದರಂತೆ ಎರಡು ವರ್ಷ ಬಾಳೆ ಬೆಳೆದೆ. ಬಾಳೆಯ ಬೆಳೆಗೆ ನೀರು ಬಹಳ ಬೇಕು. 'ನನ್ನ ನೀರಾಗ ನಿಂದರಿಸಿದರೆ ನಿನ್ನನ್ನು ಊರಾಗ ನಿಲ್ಲಿಸುವೆ.' ಇದು ಬಾಳೆ ಬೆಳೆದವನಿಗೆ ಹೇಳುವ ಮಾತು. ಕೊಳವೆ ಬಾವಿಯ ನೀರು ಕಡಿಮೆಯಾಗತೊಡಗಿತು. ಹೀಗಾಗಿ ಬಾಳೆ ಬೆಳೆ ಬಾಡತೊಡಗಿತು. ಮಾವಿನ ಗಿಡಗಳು ಬೆಳೆದು ಸಾಲಿಗೆ ಸಾಲು ಕೂಡಲು ಇನ್ನೂ ಹತ್ತು ವರ್ಷಗಳಾದರೂ ಬೇಕು. ಅಲ್ಲಿಯವರೆಗೆ ನಡುವೆ ಏನನ್ನಾದರೂ ಬೆಳೆಯಬೇಕೆಂದು ಆಲೋಚಿಸತೊಡಗಿದೆ. ಕಡಿಮೆ ನೀರಿನಲ್ಲಿ ಬೆಳೆಯುವ ಬೆಳೆಗಳ ಬಗ್ಗೆ ವಿಚಾರಿಸಲಾಗಿ ನುಗ್ಗೆಯ ಪ್ರಸ್ತಾಪ ಬಂತು.

ನುಗ್ಗೆ ಹಾಕುವ ಪೂರ್ವದಲ್ಲಿ ಬಾಳೆಹಚ್ಚುವಾಗ ನನಗೆದುರಾದ ಸಮಸ್ಯೆಯನ್ನು ನಿಮ್ಮ ಮುಂದೆ ಇಡುವದು ಸೂಕ್ತ ಎನಿಸುತ್ತದೆ. 'ಬಾಳೆ ಬೆಳೆ ಬೆಳೆಯಲು 'ಒಮ್ಮು' ಬರಬೇಕು.' ಎಂಬುದು ಒಂದು ಮೂಢನಂಬಿಕೆ. 'ಒಮ್ಮು ಬರದಿದ್ದರೆ ಬಾಳೆ ಹಚ್ಚಿದರೆ ಕಾಡಾಟ ಹೆಚ್ಚುವದು. ಆದ್ದರಿಂದ ಯಾರಿಗೆ ಒಮ್ಮು ಬಂದಿದೆಯೋ ಅವರಷ್ಟೇ ಹಚ್ಚಬೇಕು' ಎಂದು ಅನೇಕರು ಸಲಹೆ ಕೊಟ್ಟರು. ಸಲಹೆ ಎಂದರೆ ಸಲಹೆ ಅಲ್ಲ. ಎಚ್ಚರಿಕೆ ಕೊಟ್ಟರು, ಅಷ್ಟೇ ಅಲ್ಲ ನನ್ನನ್ನು ಅಂಜಿಸಿದರು ಕೂಡಾ. ಹಳ್ಳಿಯ ಜನರು ಮೂಢನಂಬಿಕೆಗಳಲ್ಲಿ ಇಟ್ಟ ನಂಬಿಕೆ ಶ್ರದ್ಧೆಗಳನ್ನು ದೇವರಲ್ಲಿ ಇಟ್ಟಿರುವ ನಂಬಿಕೆ ಮತ್ತು ಶ್ರದ್ಧೆಯಷ್ಟೇ ಬಲವಾಗಿ ಇಟ್ಟಿದ್ದಾರೆ. ಬಾಳೆ ಬೆಳೆಸಲು ಒಮ್ಮು ಬರಬೇಕೆನ್ನುವವರು ತಿನ್ನಲೂ ಒಮ್ಮು ಬರಬೇಕೆನ್ನುವದಿಲ್ಲ. ಬಾಳೆ ಹಣ್ಣು ಒಮ್ಮು ಬಂದವರಷ್ಟೇ ತಿನ್ನುವದಿಲ್ಲವಲ್ಲ! ಬಾಳೆ ಬೆಳೆ ಬೆಳೆಯಲು ಮಾತ್ರ ಹೊತ್ತಿಗೆ ಕೇಳಬೇಕು. ಪಂಚಾಂಗ ಕೇಳಬೇಕು. ಅದನ್ನು ಹಚ್ಚಿದರೆ ಒಳಿತಾಗುವದೋ

ಕೆಡುಕಾಗುವದೋ ಕೇಳಿ ಒಳಿತಾಗುವದಾದರೆ ಹಚ್ಚಬೇಕು. ಇಲ್ಲದಿದ್ದರೆ ಇಲ್ಲ. ಇದೆಂತಹ ಮೂಢನಂಬಿಕೆ. ಇದೆಂತಹ ಕಂದಾಚಾರ? ನನ್ನ ಅನುಮಾನಕ್ಕೆ ಪರಿಹಾರವಾಗಲಿ, ಪ್ರಶ್ನೆಗೆ ಉತ್ತರವಾಗಲಿ ದೊರಕಲೇ ಇಲ್ಲ.

ನನ್ನದು ಒಂದು ರೀತಿಯ ಹುಂಬಗುತ್ತಿಗೆಯ ಸ್ವಭಾವ. ಆದರೆ ಹುಂಬತನ ಅಲ್ಲ. ಮಾಡಬಾರದೆಂದು ಅಂದದ್ದನ್ನು ಮಾಡಿಯೇ ತೀರಬೇಕು. ಇದೇ ಹಠ ಸಾಧಿಸಲು ಯಾರು ಏನು ಹೇಳಿದರೂ ಮಾಡಿಯೇ ತೀರುವ ನಿರ್ಧಾರ ಮಾಡಿದೆ, ನನ್ನ ಅಪ್ಪನಂತೂ 'ಮಾತು ಕೇಳದ ಮಗ' ಎಂದು ಸಿಡಿಮಿಡಿಗೊಂಡು ನನ್ನ ಬಗ್ಗೆ ಒಂದಲ್ಲ ಒಂದು ರೀತಿಯ ತಿರಸ್ಕಾರ ಮಾಡತೊಡಗಿದ್ದ. ಭೂಮಿಯಲ್ಲಿ ಬೆಳೆ ಬೆಳೆಯಲು ಆತಂಕ ಪಡುವದು ಸರಿಯಲ್ಲ. ಬೆಳೆ ಮಾಡಲು ಹೊಲದಲ್ಲಿ ದುಡಿಯಲು ಮಾತು ಕೇಳದಿದ್ದರೆ ತಪ್ಪೇನಲ್ಲ. ಯಾವ ಪಂಚಾಂಗದವರ ಬಳಿಗೆ ಹೋಗಲಿಲ್ಲ. ಕೂಡಲೇ ಬಾಳೆ ಸಸಿ ತಂದು ಸಣ್ಣ ಸಣ್ಣ ತಗ್ಗು ತೆಗೆದು ಮುಂದೆ ಮುಂದೆ ನೀರು ಬಿಟ್ಟು ಬಾಳೆ ಸಸಿ ಹಚ್ಚಿದರಾಯಿತೆಂದು ನೀರು ಬಿಟ್ಟಿದ್ದೆ. ಪಕ್ಕದ ಹೊಲದವನ ಹತ್ತಿರ ನನ್ನ ಅಪ್ಪ ಹೋಗಿ, 'ನಮ್ಮ ಮನ್ಯಾಗಿನ್ಯಾವರಿಗೆ ಬಾಳಿ ಹಚ್ಚಾಕ ಒಮ್ಮ ಬಂದಿಲ್ಲಾ ಅದಕ್ಕ ನೀ ಹೋಗೆ ಬಾಳಿ ಸಸಿ ಹಚ್ಚಿ ಬರೋಗು ಅಂವಾ ಕೇಳವಲ್ಲಾ. ಅವಗ ಹಚ್ಚಬ್ಯಾಡಂತ ಹೇಳು' ಎಂದು ಕಳಿಸಿಕೊಟ್ಟದ್ದ.

ಅಪ್ಪ ಕಳಿಸಿದ್ದ ಪಕ್ಕದ ಹೊಲದವನಿಗೆ 'ನೀನೇ ಎಲ್ಲಾ ಬಾಳೆಸಸಿ ಹಚ್ಚಿದೆನೆಂದು' ಹೇಳು ಎಂದು ನಾನೇ ಎಲ್ಲಾ ಬಾಳೆ ಸಸಿ ಹಚ್ಚಿದೆ. ಬಾಳೆ ಬೆಳೆದು ದೊಡ್ಡದಾಯಿತು. ಗೊನೆ ಹಾಕಿತು. ಅದು ದೊಡ್ಡ ದೊಡ್ಡ ಬಾಳೆ ಗೊನೆಗಳು. ಗಿಡಕ್ಕೆ ಭಾರವಾಗಿ ಬಗ್ಗಿದವು. ಗಿಡಗಳು ಗಾಳಿಗೆ ಮುರಿದು ಬಿದ್ದಾವೆಂದು ಕಟ್ಟಿಗೆಯ ಆಸರೆ ಕೊಟ್ಟೆ ಒಂದೊಂದು ಗೊನೆಯಲ್ಲಿ ೧೭೦ ರಿಂದ ೨೪೦ ಕಾಯಿಗಳು! ದಪ್ಪ ದಪ್ಪ ಬಾಳೆಯ ಹಣ್ಣುಗಳೂ ಅಷ್ಟೇ ಮಧುರ. ಎರಡು ಹಣ್ಣು ತಿಂದರೆ ಹೊಟ್ಟೆ ತುಂಬಬೇಕು. ಒಂದು ವರ್ಷ ಕಳೆಯುವಷ್ಟರಲ್ಲಿ ಕೊಳವೆ ಬಾವಿ ನೀರು ಕಡಿಮೆಯಾಗಿತ್ತು. ಹೀಗಾಗಿ ಬಾಳೆ ಸಾಲಿನಲ್ಲಿ ನುಗ್ಗೆ ಬೀಜ ಹಾಕುವ ನಿರ್ಧಾರ ಮಾಡಿದ್ದೆ. ಅಯ್ಯೋ ನುಗ್ಗಿ ಹಾಕಬ್ಯಾಡೋ ಹೊಲದಾಗ' ಎಂದು ಅಪ್ಪ ಅವ್ವ ಇಬ್ಬರೂ ಹೇಳಿದರು. ನನ್ನ ಹೆಂಡತಿಯೂ 'ನುಗ್ಗಿ ನುಗ್ಗ ನುಗ್ಗ ಮಾಡೆ ಕೈ ಬಿಡತ್ತೈತೆಂತರೀ' ಎಂದಳು. 'ನುಗ್ಗಿ ಬೆಳ್ಯಾಕ ಹೊಂಟಿಯಂತಲ್ಲೋ ನಿನಗೇನ ಬುದ್ದಿ ಐತಿಲ್ಲೋ ಕಲತ್ತೇನನ್ನು ದಿಮಾಕಿನ್ಯಾಗ ತಂದಿ ತಾಯಿ ಮಾತ ಕೇಳವಲ್ಲೆಂತ' ಎಂದು ಕೆಲವರಂದರು.' 'ನಾ ನುಗ್ಗೋ ನೀ ನುಗ್ಗೋ' ಅಂತ ಹಿರ್‍ಯಾರು ಹೇಳತಾರು. ನುಗ್ಗಿರ ಹಾಳಾಗಬೇಕು ಇಲ್ಲಾ ನುಗ್ಗೆ ಹಾಕಿದವನರ ನುಗ್ಗಾಗಬೇಕು. ಹಿರ್‍ಯಾರ ಹೇಳಿದ್ದು ಸುಳ್ಳಾಗೂದಿಲ್ಲ' ಎಂದು ಒಬ್ಬೊಬ್ಬರು ಒಂದು ರೀತಿಯಲ್ಲಿ ಹೇಳತೊಡಗಿದರು. 'ಹೊತ್ತಿಗೆ ಹೇಳುವವರಿಗೆ ಪಂಚಾಂಗ ಹೇಳುವವರಿಗೆ ಏನು ಗೊತ್ತು ಹೊಲದಲ್ಲಿ ಬೆಳೆಯನ್ನು ಮಾಡುವದು' ಎಂದು ಬಾಳೆ ಬೆಳೆದ ಖುಷಿಯಲ್ಲಿ ನುಗ್ಗೆ ಹಾಕಲು ಮುಂದಾಗಿದ್ದೆ. 'ಬಾಳೆ ಹಣ್ಣಿನ ಪಲಾ ನುಗ್ಗಿಯಂಗಲ್ಲ' ಎಂದು ಕಡ್ಡಿ ಮುರಿದಂತೆ ಹೇಳುತ್ತಲೇ ಇದ್ದರು.

ಭೂಮಿಯಲ್ಲಿ ಇದನ್ನೇ ಬೆಳೆಯಬೇಕು. ಇದನ್ನು ಬೆಳೆಯಬಾರದೆಂದು ಕಾಯ್ದೆ ಮಾಡಿದವರು ನಾವೇ. ಅದು ಕಾಯ್ದೆ ಅಲ್ಲ ಕಾನೂನು ಅಲ್ಲ. ತಲೆಮಾರಿನಿಂದ ತಲೆಮಾರಿಗೆ ಹಿಂದೊಮ್ಮೆ ನಮ್ಮಜ್ಜನಿಗೆ ಹೀಗಾಗಿತ್ತು ಎಂಬ ಮಾತನ್ನು ಹೇಳುತ್ತ ಬಂದಿದ್ದಾರೆ. ಅದನ್ನೇ ನಂಬಿಕೊಂಡು ಮದುವೆ ಮಂಟಪದಲ್ಲಿ ಬೆಕ್ಕನ್ನು ಹಿಡಿದು ತಂದು ಬುಟ್ಟಿ ಮುಚ್ಚಿಡುವ ಸಂಪ್ರದಾಯಕ್ಕೆ ನಗಬೇಕೋ ಅಳಬೇಕೋ ತಿಳಿಯದು. ಒಂದೊಂದು ಪ್ರದೇಶದ ಮಣ್ಣು ಹವಾಗುಣ, ಮಳೆಯ ಪ್ರಮಾಣ ಅನುಸರಿಸಿ ಬೆಳೆಗಳನ್ನು ಮಾಡಬೇಕೆಂದು ಹೇಳಿದ್ದರೆ ಅದು ಒಪ್ಪತಕ್ಕ ಮಾತು. ಅರಣ್ಯದಲ್ಲಿ ಸಾವಿರಾರು ಜಾತಿಯ ಗಿಡಮರಗಳು, ಬಳ್ಳಿ, ಕಂಟಿ ಕಸ ತಾವಾಗೇ ಬೆಳೆಯುತ್ತವೆ ಅಲ್ಲವೆ? ಯಾರೂ ಇದನ್ನೇ ಬೆಳೆಯಬೇಕೆಂದು ಹೇಳಲಾರರು. ಆಲೋಚನೆ ಮಾಡಿ ಮಾಡಿ 'ಏನಾದರೂ ಆಗುವದಿದ್ದರೆ ನನಗೇ ಆಗಲಿ ಅನುಭವಿಸಲು ನಾನು ತಯ್ಯಾರಾಗಿರುವೆ' ಎಂದು ಎಲ್ಲರಿಗೂ ಹೇಳತೊಡಗಿದ್ದೆ, ಔಷಧಿಗಳ ಆಗರವಾಗಿರುವ ನುಗ್ಗೆಯಂತಹ ಬೆಳೆ ಮಾಡಲು ಎಷ್ಟೊಂದು ವಿರೋಧ! ಎಷ್ಟು ತೊಡಕುಗಳು! ಕೆಡಕು ಮಾಡುವ ಗುಣ ಮನುಷ್ಯನಿಗಿದೆ ಹೊರತು ಸಸ್ಯಗಳಿಗಿಲ್ಲ. ನುಗ್ಗೆ ಮಕ್ಕಳ ಬೆಳವಣಿಗೆಗೆ ಬೇಕಾದ ಕ್ಯಾಲ್ಸಿಯಂ ಒದಗಿಸುತ್ತದೆ. ಏ ಮತ್ತು ಬಿ ಜೀವನ ಸತ್ವಗಳು ಇದರಲ್ಲಿ ಹೇರಳವಾಗಿವೆ. ಇರುಳುಗಣ್ಣಿನ ತೊಂದರೆ ನಿವಾರಿಸಬಲ್ಲದು.

ಒಂದು ದಿನ ಸಾಯಂಕಾಲ ನುಗ್ಗೆ ಬೀಜಗಳನ್ನು ಬಾಳೆ ಗಿಡದ ಸಾಲಿನಲ್ಲಿ ಹಾಕುತ್ತಿದ್ದೆ. ನನ್ನ ಮಗ ಬಂದವನೇ 'ಅವೆಂತಹ ಬೀಜ ಯಾತಕ್ಕೆ ಉಪಯೋಗ' ಎಂದು ಕೇಳಿ ತಾನೂ ಬೀಜ ಹಾಕುವೆನೆಂದ. ಅವನ ಕುತೂಹಲಕ್ಕೆ 'ಇವು ನುಗ್ಗೆ ಬೀಜ. ಕಾಯಿ ಆಗುತ್ತವೆ. ಸಾರುಮಾಡಲು ಬಳಸುತ್ತಾರೆ. ನುಗ್ಗೆ ಸಾರು ರುಚಿಯಾಗಿರುತ್ತೆ' ಎಂದೆ. ಆತ ಮನೆಗೆ ಹೋಗಿ ಸುಮ್ಮನೆ ಇರದೆ ಮನೆಮಂದಿಗೆಲ್ಲ 'ಸಾರು ಮಾಡೂ ಬೀಜಾ ಹಾಕಿದೇವು' ಎಂದು ಹೇಳಿದ್ದ. ಮನೆಮಂದಿಗೆಲ್ಲ ನುಗ್ಗೆಯ ಬೀಜಗಳೆಂಬುದು ಖಾತ್ರಿಯಾಗಿತ್ತು. 'ಅಂವಾ ಏನ ಮಾಡಿದರೂ ಚೊಲೋ ಅಕ್ಕೃತಿ ಅಂತ ನುಗ್ಗಿ ಹಾಕೇದಾನು ನೋಡವಂತ್ಯಾ ನುಗ್ಗಾಗೆ ಹೊಕ್ಕಾನು, ಹೇಳಿದಾವರ ಮಾತ ಕೇಳಬೇಕಲ್ಲ' ಎಂದು ಅಪ್ಪ ಗೊಣಗಾಡುತ್ತಿದ್ದ. ಅಷ್ಟಕ್ಕೆ ಸುಮ್ಮನಾಗದೆ 'ಹುಟ್ಟಿದ ಕೂಡಲೆ ಕಿತ್ತ ಒಗದುರಾತಿ' ಎಂದೂ ಹೇಳಿದ. ನುಗ್ಗೆ ಎಂದರೆ ಇಷ್ಟೊಂದು ತಿರಸ್ಕಾರ ಯಾಕೆ? ಅದೇ ನುಗ್ಗೆ ಸಾರು ಎಲ್ಲರೂ ಉಣ್ಣುತ್ತಾರಲ್ಲ! ಎಂದು ಆಶ್ಚರ್ಯಪಟ್ಟೆ. ನುಗ್ಗೆಯ ಎಲೆಗಳು ಅದರಲ್ಲೂ ಚಿಗುರೆಲೆಗಳು ಮತ್ತು ಹೂವುಗಳು ಪಲ್ಯ ಮಾಡಲು ಬಳಸುತ್ತಾರೆ. ಕಾಯಿಗಳಂತೂ ಸಾರಿನ ಪರಿಮಳ ಹೆಚ್ಚಿಸುತ್ತವೆ. ನುಗ್ಗೆಯ ಎಲೆ, ನುಗ್ಗೆಯ ಬೇರು, ತೊಗಟೆ, ಎಲ್ಲವೂ ಒಂದಿಲ್ಲಾ ಒಂದು ಔಷಧಿಗೆ ಬಳಸುತ್ತಾರೆ. ಮನುಷ್ಯನ ರೋಗಗಳಿಗೆ ಮದ್ದಾಗಿರುವ ನುಗ್ಗೆಯನ್ನು ಬೆಳೆಸಿದೆ. ನುಗ್ಗೆ ಗಿಡದ ಕೆಳಗೆ ನುಗ್ಗೆ ಹೂವು, ಎಲೆಗಳುದುರುವದರಿಂದ ಸಾವಯವ ಪದಾರ್ಥಗಳು ಕಳಿತು ಉತ್ತಮ ಗೊಬ್ಬರವಾಗುತ್ತದೆ.

ಎಂಟು ತಿಂಗಳಿಗೆ ನುಗ್ಗೆ ಮೊಗ್ಗು ಬಿಟ್ಟು ಟೊಂಗೆ ಟೊಂಗೆಗಳಲ್ಲಿ ಗೊಂಚಲು! ಮುತ್ತಿನ ಗೊಂಚಲಿನಂತೆ ಕಂಗೊಳಿಸಿದವು. ಹೂವುಗಳರಳಿ ದುಂಬಿ, ಜೇನು, ಕರೆದವು.

ನುಗ್ಗೆ ಹೂವಿನ ಪರಿಮಳ ತೋಟದ ತುಂಬ ಹರಡಿತು. ಸಾರಿನ ಗಮಗಮ ವಾಸನೆ ಮೂಗಿಗೆ ಬಡಿಯತೊಡಗಿತು. ಅಂಗಿ ಕಸಿಯಂತಹ ಮಿಡಿಗಳು ಜೋತು ಬಿದ್ದವು. ಕಾಯಿಗಳು ದಪ್ಪ ಆಗಿದ್ದವು. ಒಂದೊಂದು ಗಿಡದಲ್ಲಿ ೩೦೦ ರಿಂದ ೫೦೦ ಕಾಯಿಗಳು! ಅದೂ ಎಷ್ಟುದ್ದ ಎಂದರೆ ಪಡುವಲ ಕಾಯಿಯಂತೆ ಉದ್ದವಾಗಿ ಹೆಬ್ಬೆರಳಿನಷ್ಟು ದಪ್ಪವಾಗಿ ಬೆಳೆದವು. ಸಾಮಾನ್ಯವಾಗಿ ನುಗ್ಗೆ ಕಾಯಿಗಳು ಬಹಳ ಎಂದರೆ ಎರಡೂವರೆ ಅಡಿಯಷ್ಟು ಉದ್ದವಾಗಿರುತ್ತವೆ. ಆದರೆ ನನ್ನ ತೋಟದಲ್ಲಿ ಬೆಳೆದ ನುಗ್ಗೆಯ ಕಾಯಿಗಳು ೩ ಅಡಿ ೪ ಇಂಚಿನಿಂದ ೩.೫ ಅಡಿಯಷ್ಟು ಉದ್ದವಾಗಿ ಬೆಳೆದು ನೆಲವನ್ನು ಮುದ್ದಿಸಿದವು. ಎರಡು ಮೂರು ಗಿಡಗಳಲ್ಲಿ ಇಷ್ಟುದ್ದ ಬೆಳೆದ ನುಗ್ಗೆ ಅಪರೂಪದ ನುಗ್ಗೆ ಎನಿಸಿದೆ. ಇದೇನು ವಿಶೇಷ ಎಂದು ಹುಬ್ಬೇರಿಸದಿರಿ. ಇದರಲ್ಲಿ ಅತಿಶಯೋಕ್ತಿ ಏನೂ ಇಲ್ಲ. ಸಹಜವಾಗಿ ಬೆಳೆದಿವೆ. ನಿಸರ್ಗದಲ್ಲಿರುವ ಶಕ್ತಿ ಸುಸ್ಥಿರವಾಗಿದೆ. ಸಹಜ ಕೃಷಿಯಿಂದ ಸಮೃದ್ಧಿ ಸಾಧ್ಯವಿದೆ ಎಂಬುದಕ್ಕೆ ನಿದರ್ಶನವಾಗಿದೆ.

ಯಾವುದೇ ಬಿ.ಟಿ.ತಳಿಯ ಬೀಜ ನಾನು ಬಳಸಿಲ್ಲ. ಹೈಟೆಕ್ ತಂತ್ರ ಅನುಸರಿಸಲಿಲ್ಲ. ರಾಸಾಯನಿಕ ಗೊಬ್ಬರ ಬಳಸಿಲ್ಲ. ರಾಸಾಯನಿಕ ಕೀಟನಾಶಕವನ್ನಾಗಲಿ ರಾಸಾಯನಿಕ ಟಾನಿಕ್ ಆಗಲಿ ಬಳಸಿಲ್ಲ. ಸಹಜ ಕೃಷಿಯಿಂದ ಇದು ಸಾಧ್ಯವಾಗಿದೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ. ನುಗ್ಗೆ ಬೆಳೆಗೆ ಯಾವುದೇ ಕೀಟ ಹಾಗೂ ರೋಗಗಳ ಕಾಟವಿಲ್ಲ. ವರ್ಷಕ್ಕೊಮ್ಮೆ ಜಂಬಳಿ ಹುಳದಂತಹ ಹುಳ ನುಗ್ಗೆಯ ಎಲೆಗಳನ್ನು ತೂತು ಮಾಡುತ್ತದೆ. ನುಗ್ಗೆ ಗಿಡ ಬೋಳಾಗುತ್ತದೆ. ಆದರೆ ಅದಕ್ಕೆ ಗಾಬರಿಯಾಗಿ ಕೀಟದ ಹತೋಟಿಗೆ ಕೀಟನಾಶಕ ಬಳಸಲು ಆತುರಪಡಬೇಡಿರಿ. ಒಂದು ತಿಂಗಳಿನಲ್ಲಿ ಬೋಳಾದ ಟೊಂಗೆಗಳಲ್ಲಿ ಹೊಸ ಚಿಗುರು ಮುಗುಳ್ನಗುತ್ತದೆ. ಮತ್ತೆ ಪೊರೆ ಕಳಚಿದ ಹಾವಿನಂತೆ ನುಗ್ಗೆ ಗಿಡ ಹಚ್ಚಹಸುರಾಗಿ ಹೊಸ ರೂಪ ಪಡೆದು ನಳನಳಿಸುತ್ತದೆ. ಹೂವಾಗುತ್ತದೆ. ಕಾಯಿ ಆಗುತ್ತದೆ.

ವರ್ಷಕ್ಕೆ ಎರಡು-ಮೂರು ಸಲ ಕಾಯಿಯಾಗುವ ನುಗ್ಗೆ ಮಾವಿನ ತೋಟದಲ್ಲಿ ಉಪಬೆಳೆಯಾಗಿ ಬೆಳೆದರೂ ಯಾವುದೇ ಖರ್ಚಿಲ್ಲದೆ ಎರಡು ಸಾವಿರದಿಂದ ಮೂರುವರೆ ಸಾವಿರ ರೂಪಾಯಿಯಷ್ಟು ಆದಾಯ ಕೊಡುತ್ತದೆ. ತೊಗರಿ ಬೇಳೆಯಲ್ಲಿ ನುಗ್ಗೆಕಾಯಿ ಹಾಕಿ ಸಾರು ಮಾಡಿದರೆ ಮನೆಯಲ್ಲಿ ನುಗ್ಗೆ ಸಾರಿನ ವಾಸನೆಯೇ ವಾಸನೆ. ನುಗ್ಗೆಯಿಂದ ಆರೋಗ್ಯಕ್ಕೆ ಎಷ್ಟೊಂದು ಉಪಯುಕ್ತತೆ ಇದೆ ಎಂದು ತಮಗೆಲ್ಲ ತಿಳಿದ ವಿಷಯವೇ ಆಗಿದೆ. ಒಟ್ಟಿನಲ್ಲಿ ನುಗ್ಗೆ ಬೆಳೆದು ಯಾರೂ ನುಗ್ಗಾವದಿಲ್ಲ. ನುಗ್ಗೆಯೂ ನುಗ್ಗಾಗುವದಿಲ್ಲ. ನುಗ್ಗೆ ಬೆಳೆಸಿ ನನಗೆ ಹಿಗ್ಗಾಗಿದೆ. ನುಗ್ಗೆಯೂ ಹಿಗ್ಗಿನಿಂದ ಬೆಳೆದಿದೆ. ನುಗ್ಗೆ ಬೆಳೆಯುವವರು ಮೂಢನಂಬಿಕೆಗೆ ಬಲಿಯಾಗದೆ ಹಿಗ್ಗಿನಿಂದ ಬೆಳೆಯಿರಿ ಎಂದು ನಾನು ಹೆಮ್ಮೆಯಿಂದ ಮತ್ತು ಹಿಗ್ಗಿನಿಂದ ಹೇಳುತ್ತೇನೆ.

✲

ಬದಲಾದ ಒಕ್ಕಲುತನದ ಪರಿಭಾಷೆ

'ಹುಟ್ಟಿಸಿದ ದೇವರು ಹುಲ್ಲು ಮೇಯಿಸಲಾರ' ಎಂಬುದು ಗಾದೆ ಮಾತು. ಹಡೆದ ತಾಯಿ ತನ್ನ ಮಕ್ಕಳನ್ನು ಉಪವಾಸ ಇಡಲಾರಳು. ಮಣ್ಣಿನ ಮಕ್ಕಳ ನಂಬುಗೆಯ ತಾಯಿ ಹೊಲವೇ ಆಗಿದ್ದಾಳೆ. ಹೊಲವು ತಾಯಿ ಆಗಿರುವಂತೆ ಮಳೆಯು ತಂದೆ ಆಗಿದ್ದಾನೆ. ತಂದೆ ಅಷ್ಟೇ ಅಲ್ಲ 'ಮಳೆರಾಜ' ಆಗಿದ್ದಾನೆ. ಎಲ್ಲ ರಾಜಗಿಂತಲೂ ಶ್ರೇಷ್ಠರಾಜ ಮಳೆರಾಜನೇ ಆಗಿದ್ದಾನೆ. ಆ ಮಳೆರಾಜ ಮಳೆ ಸುರಿಸುತ್ತಲೇ ಇರುತ್ತಾನೆ. ಭೂಮಿತಾಯಿ ಬೆಳೆ ಬೆಳೆಸುತ್ತಾಳೆ. ಇದು ರೈತರ ನಂಬುಗೆಯ ಮಾತು. ಬರೀ ಮಾತಲ್ಲ. ರೈತರಿಗೆ ಕೊಟ್ಟ ವಚನ ಆಗಿದೆ. ಯಾವುದೇ ರೈತರು ಪರಸ್ಪರರು ಭೆಟ್ಟಿಯಾದಾಗ 'ನಿಮ್ಮ ಕಡೆ ಮಳಿ-ಬೆಳಿ ಹೆಂಗರೀ?' ಎಂದೇ ಕೇಳುತ್ತಿದ್ದರು. ಅದೊಂದು ಶಿಷ್ಟಾಚಾರ.

'ಪ್ರತಿಯೊಬ್ಬ ವ್ಯಕ್ತಿ ತಿನ್ನುವ ಆಹಾರದ ಮೇಲೆ ಅಂದರೆ ಒಂದೊಂದು ಕಾಳಿನ ಮೇಲೂ ಆ ವ್ಯಕ್ತಿಯ ಹೆಸರು ಬರೆದಿರುತ್ತದೆ' ಎಂದು ಅನುಭವಿಗಳು ಹೇಳುತ್ತಾರೆ. ಅಂದರೆ ಅವರವರ ಅನ್ನ ಅವರ ಪದರಿನಲ್ಲಿ ಕಟ್ಟಿರುತ್ತದೆ. ನನ್ನಪ್ಪ ಅಜ್ಜಂದಿರು ಇದೇ ಹೊಲದಲ್ಲಿ ನವಧಾನ್ಯಗಳನ್ನು ಬೆಳೆಯುತ್ತಿದ್ದರು. ಅಂತೆಯೇ ರೈತ 'ಅನ್ನದಾತ' ಎನಿಸಿದ್ದ. 'ಒಕ್ಕಲಿಗನೊಕ್ಕದಿದ್ದರೆ ಜಗವೆಲ್ಲ ಬಿಕ್ಕುವದು' ಎಂದು ಸರ್ವಜ್ಞ ಕವಿ ಹೇಳಿರುವಂತೆ ರೈತ ಒಕ್ಕುತ್ತಿದ್ದ. ರಾಶಿ ಮಾಡುತ್ತಿದ್ದ. ತಾನುಂಡು ಉಳಿದದ್ದನ್ನು ಇತರರಿಗೂ ಕೊಡುತ್ತಿದ್ದ. ಅಂತೆಯೇ 'ಅನ್ನದಾತಾ ಸುಖೀಭವ' ಎಂದು ಉಂಡವರು ಹರಸುತ್ತಿದ್ದರು.

ಒಕ್ಕಲುತನದ ವೃತ್ತಿ ಗೌರವದ ವೃತ್ತಿ ಎನಿಸಿತ್ತು. ನೇಗಿಲ ಹೊಡೆಯುವ ರೈತ ನೇಗಿಲಯೋಗಿ ಎನಿಸಿದ್ದ. ತನ್ನ ಹೊಲದಲ್ಲಿ ತಲ್ಲೀನನಾಗಿ ದುಡಿಯುವದು ರೈತನಿಗೆ ಹೆಮ್ಮೆಯ ಕೆಲಸ ಎನಿಸಿತ್ತು. ಬೆಳೆಗಳು ರೈತನೊಡನೆ ಮಾತಾಡುತ್ತಿದ್ದವು. ಬೆಳೆಗಳ ಭಾಷೆ ರೈತನಿಗೆ ಅರ್ಥವಾಗುತ್ತಿತ್ತು. ಮೂಕ ಎತ್ತುಗಳು ಇಂದಿಗೂ ರೈತನ ಮಾತನ್ನು ಕೇಳುತ್ತವೆ. ಹೊಲಕ್ಕೆ ಗೊಬ್ಬರ ಹಾಕುವದು ಬೆಳೆಗಳಿಗೆ ಅಲ್ಲ. ಎರೆಹುಳು ಮತ್ತು ಸೂಕ್ಷ್ಮ ಜೀವಾಣುಗಳ ವಂಶ ವೃದ್ಧಿಗೆ ಹಾಗೂ ಅವುಗಳ ಚಟುವಟಿಕೆ ಹೆಚ್ಚಿಸಲು ಗೊಬ್ಬರ ಆಹಾರವಾಗಿದೆ. ಈ ಸಾವಯವ ಗೊಬ್ಬರ ತಿಂದು ಬೆಳೆದು ಅಲ್ಪಾವಧಿಯಲ್ಲಿ ಸೂಕ್ಷ್ಮಾಣುಜೀವಿಗಳು ನಶಿಸಿ ಬೆಳೆಗಳಿಗೆ ಪೋಷಕಾಂಶಗಳನ್ನು ಒದಗಿಸಬಲ್ಲವು. ಅಂತೆಯೇ ಹೊಲದಲ್ಲಿ ರವದಿ, ಕೋಲಿ, ಕಸ-ಕಡ್ಡಿ ಮತ್ತು ದನಕರುಗಳು ತಿಂದು ಬಿಟ್ಟ ಚಿಪ್ಪಾಡಿಯನ್ನು ಹರಡುತ್ತಿದ್ದರು. ಕಾಲಾಂತರದಲ್ಲಿ 'ಒಕ್ಕಲು ಹಕ್ಕಲಾಗುವದು, ಹಕ್ಕಲು ಒಕ್ಕಲಾಗುವದು' ಸಹಜ ಸಂಗತಿ ಎನಿಸಿತ್ತು.

ರೈತರು ನಿಸರ್ಗದೊಡನೆ ಒಂದಾಗಿ ಬದುಕಿದವರು, ತಮ್ಮ ಉಪಜೀವನಕ್ಕೆ ಹೊಲ, ಗಿಡ ಮರ, ಗಾಳಿ, ಮಳೆ, ಬಿಸಿಲು, ಬೆಳದಿಂಗಳು, ಚಳಿ ಮತ್ತು ಹವಾಮಾನದ ಮೇಲೆ ರೈತರು ಎಷ್ಟು ಅವಲಂಬಿತರಾಗಿದ್ದರೋ, ಅಷ್ಟೇ ಗೌರವ, ಭಕ್ತಿ ಮತ್ತು ವಿಶ್ವಾಸ ರೈತರಲ್ಲಿತ್ತು. ಹೊಲದ ಮಣ್ಣು ಫಲವತ್ತಾಗಿದ್ದರೆ, ಆ ಹೊಲದ ಒಡೆಯ ಶ್ರೀಮಂತನಾಗುವದು ದೊಡ್ಡ ಮಾತಲ್ಲ. ಪಟ್ಟಣದ ಗಾಳಿಗೆ ತಮ್ಮ ಜೀವನದ ಲಯ ತಪ್ಪಿಸಿಕೊಂಡವರಲ್ಲ. ಕೈ ಕೆಸರಾಗದೆ ಬಾಯಿ ಮೊಸರು ಮಾಡಿಕೊಂಡವರಲ್ಲ. ನಿಸರ್ಗದ ಜೊತೆಗೆ ಒಂದಾಗಿ ಬದುಕಿದ ರೈತರು ಬನ್ನಿ, ಆರಿಯಂತಹ ಗಿಡಗಳನ್ನು ದೇವರೆಂದು ಪೂಜಿಸುತ್ತ ಗಿಡ ಮರಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ.

ಹತ್ತಿ ತೊಗರಿ ಹಾಗೂ ಕಡಲೆಯಂತಹ ಬೆಳೆಗಳನ್ನು ಹಿಂಗಾರಿಯಲ್ಲೂ ಕೀಟದ ಕಾಟವಿಲ್ಲದೆ ಹವಾಮಾನದ ಅನುಕೂಲತೆ ಗಮನಿಸಿ ಬೆಳೆ ಮಾಡುತ್ತಿದ್ದರು. ಬೆಳೆಗಳ ಆಯಾ ಹಂತಗಳಲ್ಲಿ 'ಕೆರ್‍ಯಾಂಬಲಿ', 'ಅಳ್ಯಾಂಬಲಿ' ಮತ್ತು 'ಚರಗ' ಚೆಲ್ಲುವ ವಿಧಾನಗಳು ಜೈವಿಕ ಕೀಟ ಹತೋಟಿ ವಿಧಾನಗಳಾಗಿದ್ದವು. ಬೆಳೆಗಳನ್ನು ಬಾಧಿಸುವ ಕೀಟಗಳತ್ತ ಪಕ್ಷಿಗಳನ್ನು ಆಕರ್ಷಿಸುವ ಕ್ರಮಗಳು ಅತ್ಯಂತ ಪರಿಣಾಮಕಾರಿಯಾಗಿದ್ದವು. ಕಳೆ ಕಸಗಳು ವೈರಿಗಳಾಗಿರಲಿಲ್ಲ. ಹುಲ್ಲು, ದನಗಳಿಗೆ ಆಹಾರವಾಗಿದ್ದವು. ಅವು ತಿಂದು ಬಿಟ್ಟ ಕಸ, ಕಡ್ಡಿ, ದಂಟು (ಚಿಪ್ಪಾಡಿ)ಗಳು ಸಾವಯವ ಗೊಬ್ಬರ ತಯಾರಿಸಲು ಕಚ್ಚಾ ವಸ್ತು ಆಗಿದ್ದವು.

ಹೊಲದಲ್ಲಿ ತಾವೇ ಬಿತ್ತಿ ಬೆಳೆದ ಹೂವು ಕಾಯಿ, ಹಣ್ಣು, ಕಾಳು ಯಾವುದೇ ಇರಲಿ ಅದನ್ನು ಕೊಯ್ಲು ಮಾಡುವಾಗ, ಒಕ್ಕುವಾಗ ಪೂಜೆ ಮಾಡಿ ನೈವೇದ್ಯ ಅರ್ಪಿಸಿ ನಂತರ ಕೊಯ್ಲು ಮಾಡುತ್ತಿದ್ದರು. ಮತ್ತು ಒಕ್ಕಣೆ ಮಾಡುತ್ತಿದ್ದರು. ತಾನೇ ದುಡಿದು ಬೆಳೆದ ಪ್ರತಿಫಲವಾಗಿದ್ದರೂ ಅದು ಭೂಮಿತಾಯಿ ಕರುಣಿಸಿದ ಪ್ರಸಾದ ಎಂಬ ಭಾವನೆ ಇತ್ತು. ರಾಶಿಯನ್ನು ಶೃಂಗರಿಸಿದ ಎತ್ತುಗಳನ್ನು ಹೂಡಿ ಚಕ್ಕಡಿಗಳಲ್ಲಿ ತಂದು ಕಣಜ ಹಾಗೂ ಹಗೇವುಗಳಲ್ಲಿ ಸಂಗ್ರಹಿಸಿಡುತ್ತಿದ್ದರು. ಇಂದಿನ ಜನ ಪೂಜೆ ಪುನಸ್ಕಾರ ಮರೆತು, ಕಣ ಮಾಡಿ ಒಕ್ಕದೆ, ರಾಶಿ ಮಾಡದೆ ಯಂತ್ರಗಳಿಂದ ಒಕ್ಕಿ ಗೋಣಿ ಚೀಲಗಳಲ್ಲಿ ತುಂಬಿ ಮಾರುಕಟ್ಟೆಗೆ ಹೇರಿ ಮಾರಾಟ ಮಾಡಿಬಿಡುತ್ತಾರೆ.

ಹಿಂದಿನವರು ದೈವವನ್ನು ನಂಬಿ ಒಕ್ಕಲುತನ ಮಾಡುತ್ತಿದ್ದರು. ಶ್ರಮಪಟ್ಟು ದುಡಿಯುವದು ತನ್ನ ಕರ್ತವ್ಯ, ಬೆಳೆ ಬರಲಿ, ಬಾರದೇ ಇರಲಿ, ಅರ್ಧ ಬರಲಿ, ಪೂರ್ತಿ ಬರಲಿ, ಬಂದದ್ದರಲ್ಲೇ ತೃಪ್ತಿ ಪಡೆಯುತ್ತಿದ್ದರು. ಅತಿಯಾಸೆ ಅವರಲ್ಲಿರಲಿಲ್ಲ. ಮೂರು ತಾಳಿನ ಖೂರಿಗೆಯಿಂದ ಬಿತ್ತಿದ ಬೆಳೆಯಲ್ಲಿ ಒಂದು ತಾಳಿನ ಫಸಲು ಮಾತ್ರ ತನ್ನದು. ಇನ್ನೊಂದು ತಾಳಿನ ಅಥವಾ ಸಾಲಿನ ಬೆಳೆ ಪಶುಪಕ್ಷಿ, ಕ್ರಿಮಿ ಕೀಟಗಳ ಪಾಲು, ಮತ್ತೊಂದು ಸಾಲಿನ ಬೆಳೆ ಕೂಲಿಕಾರರಿಗೆ, ಆಯಗಾರರಿಗೆ ಮತ್ತು ಪ್ರಕೃತಿ ವಿಕೋಪಕ್ಕೆ ಎಂಬ ಭಾವನೆ ಇತ್ತು. ಮೂರು ತಾಳಿನ ಬೆಳೆಯೂ ತನಗೇ ಸೇರಬೇಕು. ಅಷ್ಟಾದರೂ ಇಂದಿನ ರೈತನಿಗೆ ತೃಪ್ತಿ ಎಂಬುದಿಲ್ಲ, ಸಮಾಧಾನ ಇಲ್ಲ. ನೆಮ್ಮದಿ ಇಲ್ಲ. ಎಲ್ಲಕ್ಕೂ ಹೆಚ್ಚಾಗಿ ಆರೋಗ್ಯವಂತ

ಹಾಗೂ ಧೃಡಕಾಯರಾಗಿಲ್ಲ. ಹಿಂದಿನ ರೈತರು ಕಡಿಮೆ ಬೆಳೆದರೂ ಹತ್ತಾರು ಮಾರು ಬಗ್ಗಿದ ನಡ ನೆಟ್ಟಗೆ ಮಾಡದೆ ನಟ್ ಕಡಿಯಬಲ್ಲವರಾಗಿದ್ದರು ಮತ್ತು ಈಗಿನವರಿಬ್ಬರು ಹೊರಲಾಗದಂತಹ ಮೇವಿನ ಹೊರಿ ಹೊತ್ತು ತರಬಲ್ಲವರಾಗಿದ್ದರು. ನೂರು ವರ್ಷ ಬದುಕಿದರೂ ಬಾಯಲ್ಲಿ ಹಲ್ಲುಗಳು ಬಿದ್ದಿಲ್ಲ.

ಮಳೆ ಬೆಳೆ ಕುರಿತ ನಂಬಿಕೆಗಳು :

ಬೆಳೆಯ ಸಮೃದ್ಧಿ ಹಾಗೂ ವಿಫಲತೆ ಕುರಿತು ರೈತರಲ್ಲಿ ತಮ್ಮವುಗಳೇ ಆದ ತರ್ಕಗಳಿದ್ದವು. ನಂಬಿಕೆಗಳಿದ್ದವು. ಮುಂಗಾರಿ ಮಳೆಯಾದಾಗ ಬಿಳಿ ಹೂಲಿಯ ಹಣ್ಣುಗಳು ಬಹಳ ಆದರೆ ಜೋಳದ ಬೆಳೆ ಸಮೃದ್ಧವಾಗುವದು. ಬಿದಿರು ಹೂ ಬಿಟ್ಟರೆ ಆ ವರ್ಷ ಬರಗಾಲ ಖಚಿತ ಎಂಬ ಭಾವನೆ ಇತ್ತು. ಹಿಂಗಾರಿ ಹಂಗಾಮಿನಲ್ಲಿ ಹರಿಶ್ಚಂದ್ರನ (ಉತ್ತರ ದಿಕ್ಕಿನ) ಗಾಳಿ ಬೀಸಿದರೆ ಮಳೆ ಹುಸಿ ಹೋಗದು. ಎಂಬ ನಂಬಿಕೆ ಇತ್ತು. ಒಂದೆರಡು ವರ್ಷ ಬರಗಾಲ ಬಿದ್ದರೂ ಎದುರಿಸಬಲ್ಲ ಸಾಮರ್ಥ್ಯ ಹಿಂದಿನ ರೈತನಲ್ಲಿತ್ತು. ಹಗೇವುಗಳಲ್ಲಿ ಮತ್ತು ಕಣಜಗಳಲ್ಲಿ ಜೋಳ ಮತ್ತು ಭತ್ತವನ್ನು ಎರಡು ಮೂರು ವರ್ಷ ಕೆಡದಂತೆ ಸಂಗ್ರಹಿಸಿಡುತ್ತಿದ್ದರು. ಹಿತ್ತಲುಗಳಲ್ಲಿ ಕಣಿಕೆ ಮತ್ತು ಹೊಟ್ಟಿನ ಬಣವೆಗಳನ್ನು ಒಟ್ಟಿ ದನಕರುಗಳಿಗೆ ಮೇವಿನ ಕೊರತೆಯಾಗದಂತೆ ನೋಡಿಕೊಳ್ಳುತ್ತಿದ್ದರು. ಅಮವಾಸ್ಯೆಯ ದಿವಸ ಬೀಜ ಬಿತ್ತಲು ಹುಣ್ಣಿಮೆ ದಿವಸ ಸಸಿ ನೆಡುವ ಕಾರ್ಯಗಳಿಗೆ ಸೂಕ್ತ ಹಾಗೂ ಉತ್ತಮ ಕಾಲ ಎಂದು ನಂಬಿದ್ದರು. ಬಿತ್ತುವ, ಹೊಸದಾಗಿ ಗಳೆ ಹೂಡುವ, ಕೊಯ್ಲು ಮಾಡುವ ಯಾವುದೇ ಕಾರ್ಯ ಮಾಡಲು ಸೂರ್ಯ 'ಅರೆನಾಲಿಗೆ ಕಚ್ಚುವ' ಸಮಯ ಶುಭ ಹಾಗೂ ಮಂಗಳದಾಯಕ ಎಂಬ ಭಾವನೆ ಇತ್ತು.

'ಆ ವರಸ ಹಂಗಾತಿ ಈ ವರಸ ಹಿಂಗಾತಿ, ಕೋಲಿ ಬಡ್ಯಾಗ ಕೆಲಸಾತಿ'; ಎಂದು ರೈತರು ಒಂದೊಂದು ವರ್ಷ ಏಳು-ಬೀಳು ಸಂಭವಿಸಿದರೂ ಹಿಗ್ಗದೆ ಕುಗ್ಗದೆ ಸಮಭಾವದಿಂದ ಸಂತೃಪ್ತಿಯಿಂದ ಬದುಕು ಸಾಗಿಸುತ್ತಿದ್ದರು. ಹೆಚ್ಚು ಬೆಳೆದು ಪೇಟೆಗೆ ಮಾರಲು ಹೋಗಿ ಕಾಸಿಗೆ ಪಂಚೇರಾದಾಗ ಇಂದಿನವರಂತೆ ಹೆಚ್ಚಿನ ಬೆಲಿ ಬೇಕೆಂದು ಧರಣೆ ಮಾಡಲಿಲ್ಲ. ಬೆಳೆ ನಷ್ಟವಾಗಿ ಮಾಡಿದ ಸಾಲ ಸೂಟ ಬಿಡಿರೆಂದು ಸಂಪು ಮಾಡಲಿಲ್ಲ. ರೈತರಲ್ಲಿ ಒಂದು ಧರ್ಮ ಇತ್ತು. ಅದು ಯಾರಿಂದಲೂ ಸಾಲ ಪಡೆಯಬಾರದೆಂಬುದು. ಒಂದು ವೇಳೆ ಸಾಲ ಪಡೆದರೂ, ಅದನ್ನು 'ಕಡದ ರೂಪದಲ್ಲಿ ಪಡೆದು, ಪಡೆದ ಹಣ ಕಾಳು ಏನೇ ಇರಲಿ, ತಿರುಗಿ ಕೊಡದೆ ತನಗೆ ಮೋಕ್ಷ ಸಿಗದು ಎಂಬ ನೀತಿ ಇತ್ತು. ರೈತ ಯಾರ ರಿಣದಲ್ಲೂ ಬದುಕುತ್ತಿರಲಿಲ್ಲ. ಅದೂ ಅಲ್ಲದೆ ಒಬ್ಬರ ಹೊಲಕ್ಕೆ ಮತ್ತೊಬ್ಬರು ಸುಗ್ಗಿಯ ಸಮಯದಲ್ಲಿ, ಕಳೆ ತೆಗೆಯುವ ಸಮಯದಲ್ಲಿ, ಬಿತ್ತುವ ಸಮಯದಲ್ಲಿ 'ಮುಯ್ಯ'ಕ್ಕೆ ಹೋಗುತ್ತಿದ್ದರು. ಹೀಗೆ ರೈತರಲ್ಲಿ ಒಂದು ರೀತಿಯ ಸಾಮರಸ್ಯ ಇತ್ತು. ಯಾವುದನ್ನು ಹಣದ ರೂಪದಲ್ಲಿ ಅಥವಾ ಲಾಭದ ದೃಷ್ಟಿಯಲ್ಲಿ ಬಡತನ-ಸಿರಿತನದ ದೃಷ್ಟಿಯಲ್ಲಿ ಕಂಡವರಲ್ಲ. ※

ಕಳೆಗಳು ವೈರಿಗಳಲ್ಲ

೧೯೯೮ರಲ್ಲಿ ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ನಮ್ಮೂರಿಗೆ ಬಂದಿದ್ದರು. ಕೃಷಿ ಪದವಿಯ ಅಂತಿಮ ವರ್ಷದ ವಿದ್ಯಾರ್ಥಿಗಳು ಕೃಷಿ ಕಾರ್ಯಾನುಭವ ಶಿಬಿರಕ್ಕೆ ಬಂದಿದ್ದರು. ಅವರೆಲ್ಲ ಹೊಲಗಳಿಗೆ ಭೆಟ್ಟಿ ಕೊಡುತ್ತಿದ್ದರು. ನನ್ನ ತೋಟದಲ್ಲಿ ಬೆಳೆದು ನಿಂತ ಕಸವನ್ನು ನೋಡಿ 'ಏನ್ರೀ ತೋಟದ ತುಂಬ ಪಾರ್ಥೇನಿಯಂ ಬೆಳೆಸೀದೀರೆಲ್ರೀ' ಎಂದರು. ಕೃಷಿ ಕೂಲಿಕಾರರ ಅಭಾವ ಒಂದು ಕಾರಣವಾಗಿದ್ದರೆ, ಇನ್ನೊಂದು ಕಾರಣ ಶೇಂಗಾದ ಸುಗ್ಗಿಯಾಗಿದ್ದರಿಂದ ಕಳೆ ತೆಗೆಸಲು ಆಗಿರಲಿಲ್ಲ. 'ಕಳೆನಾಶಕ ಸಿಂಪಡಿಸಿ ಬಿಡ್ರೀ ಆಳಗೋಳ ದಾರಿ ಯಾಕ ನೋಡತೀರಿ' ಎಂದರು. ಒಂದು ವಾರದಲ್ಲಿ ಶೇಂಗಾ ಸುಗ್ಗಿ ಮುಗಿಯುವದು ಕೂಡಲೇ ಕಳೆ ತೆಗೆಸಿದರಾಯಿತೆಂದು ಬಿಟ್ಟಿದ್ದೆ. ಒಕ್ಕಲುತನದಲ್ಲಿ ಪ್ರತ್ಯಕ್ಷವಾಗಿ ಬರುವ ಅಡಚಣೆಗಳು ಕೃಷಿ ಶಾಸ್ತ್ರವನ್ನು ಅಧ್ಯಯನ ಮಾಡಿ ಪದವಿ ಪ್ರಮಾಣ ಪತ್ರ ಗಿಟ್ಟಿಸುವವರಿಗೆ ಹೊಳೆಯದ ಸಂಗತಿ. ಒಂದು ದೃಷ್ಟಿಯಿಂದ ಅವರು ಹೇಳುವದು ಸರಿ. ಒಂದೇ ದಿನದಲ್ಲಿ ಒಬ್ಬನೇ ವ್ಯಕ್ತಿ ಸ್ಪ್ರೇಪಂಪಿನಿಂದ ಕಳೆನಾಶಕ ಸಿಂಪಡಿಸಬಲ್ಲ, ಕಳೆ ಕಸ ಎಲವೂ ಸುಟ್ಟು ನಾಶವಾಗಬಲ್ಲದು. ಆಳುಗಳಾದರೆ ನಾಲ್ಕೈದು ದಿವಸ ಕೆಲಸ ಮಾಡಬೇಕು. ಆದರೆ ಈ ರಾಸಾಯನಿಕಗಳ ದುಷ್ಪರಿಣಾಮಗಳು ನೂರಾರು.

ತೋಟದ ಬೆಳೆಯಾಗಿದ್ದರಿಂದ ಮಾವು, ಕರಿಬೇವು, ನುಗ್ಗೆ, ಗುಲಾಬಿ, ಟೆಂಗು ಹೀಗೆ ಹಲವಾರು ಜಾತಿಯ ಗಿಡ, ಮರ, ಕಂಟಿಗಳಿವೆ, ಅಲ್ಲಿ ಗಿಡಗಳ ಸಾಲಿನ ನಡುವೆ ಮಾತ್ರ ಗಳೆ ಹೊಡೆಯಬಹುದು. ಹೊಲದಲ್ಲಿ ಕಾಲಿಡಲು ಅಂಜಿಕೆಯಾಗಬೇಕು ಅಷ್ಟು ಕಳೆ ಬೆಳೆದಿತ್ತು. ಎತ್ತುಗಳು ಖಾಲಿ ಇದ್ದಾಗ ಗಳೆ ಹೊಡೆಯಲು ಹದ ಬರುತ್ತಿರಲಿಲ್ಲ. ಹದ ಬಂದಾಗ ಎತ್ತುಗಳಿಗೆ ಬೇರೆ ಹೊಲದಲ್ಲಿ ಗಳೆ ಹೊಡೆಯಬೇಕಾಗಿತ್ತು. ಹೀಗೆ ಹಲವಾರು ತೊಂದರೆಗಳು ಅಂತಹದರಲ್ಲಿ ಸುಗ್ಗಿ ಬೇರೆ ಇತ್ತು. ಶೇಂಗಾ ಕಿತ್ತು ಅದರ ಕಾಯಿಗಳನ್ನು ಕೊಯ್ದು ಒಣಗಿಸಬೇಕು; ಒಣಗಿಸಲು ಮಳೆಯ ಕಾಡಾಟ ಬೇರೆ ಶೇಂಗಾದ ಬಳ್ಳಿಗುಂಪಿ ಹಾಕಬೇಕು. ಅದನ್ನು ತೊಯ್ಯದಂತೆ ಒಣಗಿಸಿ ಬಣಿವೆ ಹಾಕಬೇಕು. ಶೇಂಗಾದ ಬಳ್ಳಿ ದನಗಳಿಗೆ ಒಳ್ಳೇ ಪೌಷ್ಟಿಕ ಮೇವು ಆಗಿದೆ. ಇಂತಹ ಕೆಲಸಗಳಲ್ಲಿ ತೊಡಗಿದ್ದರಿಂದ ಕಳೆಗಳು ಬೆಳೆದು ಹೂವಾಡಿಸುವ ಹಂತ ಮುಗಿದು ಕಾಳು ಆಗುವದರಲ್ಲಿತ್ತು. ನನ್ನದು ಸಾವಯವ

ರೀತಿಯಲ್ಲಿ ಬೆಳೆಸಿದ ತೋಟವಾಗಿದ್ದು ನಾನು ರಾಸಾಯನಿಕಗಳ ವಿರೋಧಿ. ಟೆಂಗಿನ ಗಿಡಗಳನ್ನು ನಾನೊಮ್ಮೆಯೂ ಅಗೆತ ಮಾಡಿಲ್ಲ. ಒಣಗಿದ ಟೆಂಗಿನ ಗರಿಗಳನ್ನು ಕಡಿದು ಗಿಡಗಳ ಬುಡಕ್ಕೆ ಹಾಕಿ ಹೊದಿಕೆ ಮಾಡುತ್ತ ಬಂದಿರುವೆ. ನನ್ನ ತೋಟದಲ್ಲಿ ನನ್ನದೇ ಆದ ವಿಚಾರದಂತೆ ಕೆಲವು ವಿಧಾನಗಳನ್ನು ಅಳವಡಿಸಿರುವೆ, ಅವು ವೈಜ್ಞಾನಿಕವಾಗಿವೆಯೋ ಇಲ್ಲವೋ ಆದರೆ ಖರ್ಚಿನಲ್ಲಿ ಮಿತವ್ಯಯ ಸಾಧ್ಯವಾಗಿದೆ. ಮಿತವ್ಯಯ ಅನ್ನುವುದಕ್ಕಿಂತ ಖರ್ಚಿಲ್ಲದ ಬೇಸಾಯ ನನ್ನದು. ಉಳಿದ ಹೊಲದಲ್ಲಿ ಏನಾದರೂ ಮಾಡಬಹುದು. ತೋಟದಲ್ಲಿ ಮಾತ್ರ ಯಾವುದೇ ರಾಸಾಯನಿಕ ಗೊಬ್ಬರ, ರಾಸಾಯನಿಕ ಕೀಟನಾಶಕ, ಕಳೆ ನಾಶಕಗಳನ್ನು ನಾನು ಬಳಸದೆ, ಇದನ್ನು ಒಂದು ವ್ರತದಂತೆ ಪಾಲಿಸಿಕೊಂಡು ಬಂದಿರುವೆ.

ತೋಟದಲ್ಲಿ ಕೇವಲ ಪಾರ್ಥೇನಿಯಂ ಕಸ ಒಂದೇ ಬೆಳೆದಿರಲಿಲ್ಲ. ಕುದುರೆಮೆಂತೆ ಹನ್ನಿ ಕಸ, ನರಿಬಾಲದ ಹುಲ್ಲು, ಚಿಂಪಿಗ್ಯಾನ ಹುಲ್ಲು, ಕಡಗೋಲ ಮಂಡ್ಯಾನ ಹುಲ್ಲು, ಇಗಳಿ, ಕಿರಕಸಾಲಿ, ಹಕ್ಕರಿಕೆ, ತೀಕಿ ತಪ್ಪಲಿನ ಕಸ ಮೊದಲಾದ ಕಸಗಳೂ ಬೆಳೆದಿದ್ದವು. ಪಾರ್ಥೇನಿಯಂ ಮಾತ್ರ ಇವುಗಳನ್ನೆಲ್ಲ ಮರೆಮಾಚಿ ತಾನೇ ಮಿಗಿಲೆಂದು ಬೆಳೆದು ನಿಂತಿತ್ತು. ಐದು ಜನ ಹೆಂಗಸರು ಆರು ದಿನಗಳಲ್ಲಿ ಎಲ್ಲ ಕಸವನ್ನು ಕಿತ್ತು ಹಾಕಿ ಅಲ್ಲಲ್ಲಿ ಮೆದೆ ಮಾಡಿ ಇಟ್ಟರು. ಮತ್ತು ಮೆದೆ ಮಾಡಿ ಇಟ್ಟ ಕಸವನ್ನೆಲ್ಲಾ ಮಾವು, ಕರಿಬೇವು ನುಗ್ಗೆ ಮೊದಲಾದ ಗಿಡಗಳ ಬುಡದ ಸುತ್ತಲೂ ಹೊದಿಕೆ ಮಾಡಿಸಿದೆ. ಇದಕ್ಕೆ ೪೬೦ ರೂಪಾಯಿಗಳು ಖರ್ಚಾದವು. ಇದನ್ನೆಲ್ಲಾ ಹೇಳುವದರ ಔಚಿತ್ಯ ಏನೆಂದರೆ ಕಳೆ ಕಸಗಳನ್ನು ವೈರಿಗಳಂತೆ ಕಾಣುವದು ತಪ್ಪು. ಪ್ರತಿ ದಿವಸ ಎರಡು ಮೂರು ಹೊರೆಯಷ್ಟು ಹುಲ್ಲು, ಕಸ ಹಸಿರು ಮೇವು ಸಿಕ್ಕಿತು. ಕಿರಕಸಾಲಿ ಮತ್ತು ಹಕ್ಕರಿಕೆಯ ತಪ್ಪಲು ಪಲ್ಯ ಸಿಕ್ಕಿತು. ಉಳಿದ ಕಸವೆಲ್ಲ ಗಿಡಗಳ ಬುಡದಲ್ಲಿ ಹೊದಿಕೆ ಮಾಡಲು ಅನುಕೂಲವಾಯಿತು.

ಗಿಡಗಳ ಬುಡದ ಸುತ್ತ ಕಳೆ ಕಸಗಳ ಹೊದಿಕೆ ಮಾಡಿದ್ದರಿಂದ ನನ್ನ ತೋಟಕ್ಕೆ ಹಲವಾರು ಪ್ರಯೋಜನಗಳಾದವು. ಮೊದಲನೆಯದಾಗಿ ಗಿಡಗಳ ಬುಡದ ಸುತ್ತ ಕಳೆ ಕಸಗಳು ಹುಟ್ಟಲಿಲ್ಲ. ಎರಡನೆಯದಾಗಿ ಗಿಡಗಳ ಬುಡವು ಸೂರ್ಯನ ಬಿಸಿಲಿಗೆ ಒಣಗದಂತಾಗಿ ಗಿಡಗಳ ಬುಡದಲ್ಲಿ ತೇವಾಂಶವು ಕಡಿಮೆಯಾಗಲಿಲ್ಲ. ಮೂರನೆಯದಾಗಿ ಕಳೆಕಸಗಳು ಕಳಿತು ಸಾವಯವ ಚಟುವಟಿಕೆಗಳು ಹೆಚ್ಚಲು ಹಾಗೂ ಸೂಕ್ಷ್ಮಾಣು ಜೀವಿಗಳ ವಂಶವೃದ್ಧಿಗೆ ಕಾರಣವಾಯಿತು. ಐದನೆಯದಾಗಿ ಗಿಡಗಳಿಗೆ ಸತ್ವಯುತವಾದ ಗೊಬ್ಬರವ(ಪೋಷಕಾಂಶಗಳ)ನ್ನು ಒದಗಿಸಿದಂತಾಯಿತು. ಇನ್ನು ಖರ್ಚಿನ ಲೆಕ್ಕಾಚಾರ ಮಾಡಿದರೆ ರಾಸಾಯನಿಕ ಕಳೆನಾಶಕಕ್ಕೆ ಮಾಡುವ ಖರ್ಚಿಗಿಂತ ನೂರು ರೂಪಾಯಿ ಕಡಿಮೆ ಖರ್ಚಾಯಿತು. ಕಳೆನಾಶಕ ಸಿಂಪಡಿಸಿದ್ದರೆ ಕಿರಕಸಾಲಿ, ಹಕ್ಕರಿಕೆಯಂತಹ ಒಳ್ಳೇ ಸತ್ವಯುತ ಹಸಿರು ಪಲ್ಯಗಳು, ಹುಲ್ಲು ಮತ್ತು ಕಸಗಳು (ಮೇವು) ಸುಟ್ಟು ಕರಕಾಗುತ್ತಿದ್ದವು.

ನಮ್ಮ ಹಳ್ಳಿಯ ಜನರಿಗೆ ಉದ್ಯೋಗ ಸಿಗುತ್ತಿರಲಿಲ್ಲ. ಇದೆಲ್ಲದಕ್ಕೂ ಹೆಚ್ಚಾಗಿ ಸಾವಯವ ಕೃಷಿಗೆ ಪೂರಕವಾದ ಸೂಕ್ಷ್ಮಾಣುಜೀವಿಗಳಿಗೆ ಆಹಾರ ದೊರಕುತ್ತಿರಲಿಲ್ಲ.

ಕಳೆಯನ್ನು ಆಳುಗಳಿಂದ ತೆಗೆಸಿದ್ದರಿಂದ ಸ್ವಾವಲಂಬಿ ಒಕ್ಕಲುತನ ಸಾಧ್ಯವಾಯಿತು. ಯಾವುದೋ ಕಂಪನಿಯವರು ಅವರು ಹೇಳಿದ ದರಕ್ಕೆ ಖರೀದಿಸಿ ತಂದು ಕಳೆನಾಶಕ ಸ್ಪ್ರೇ ಪಡಿಸುವುದರಿಂದ ಆ ಕಂಪನಿಗೆ ಲಾಭವಾಗುತ್ತಿತ್ತು. ಈ ಕಂಪನಿಗಳೆಲ್ಲ ವಿದೇಶಿ ಕಂಪನಿಗಳು. ನಮ್ಮ ಬೆವರಿನ ಫಲದ ಲಾಭ ವಿದೇಶಿ ಕಂಪನಿಯ ಪಾಲಾಗದೆ ಇರುವದು ಕಳೆ ತೆಗೆಸಿದ್ದರಿಂದ ಸಾಧ್ಯವಾಯಿತು. ಇದು ನನಗೆ ಹೆಮ್ಮೆ ಹಾಗೂ ಸಂತೋಷದ ಸಂಗತಿಯಾಗಿದೆ. ರಾಸಾಯನಿಕ ದುಷ್ಪರಿಣಾಮದ ಅಪಾಯಗಳಿಂದ ನನ್ನ ತೋಟವನ್ನು ರಕ್ಷಿಸಿದ, ದುಡಿವ ಕೈಗೆ ಕೆಲಸ ಕೊಟ್ಟ, ಪರಿಸರ ರಕ್ಷಣೆ ಮಾಡಿದ ಹಾಗೂ ಪರಾವಲಂಬಿಯಾಗದ ಹಲವಾರು ಪ್ರಯೋಜನಗಳಿಗೆ ಕಳೆಯನ್ನು ಕೈಯಿಂದ ತೆಗೆಸಿದ ಕ್ರಮ ಕಾರಣವಾಗಿದೆ ಎಂಬುದು ಗಮನಾರ್ಹ ಸಂಗತಿ.

❊

ಅಪ್ಪ ಮಾಡುತ್ತಿದ್ದ ಒಕ್ಕಲುತನ

ಅಪ್ಪ ಮಾಡುವ ಒಕ್ಕಲುತನ ಪ್ರಯೋಜನವಿಲ್ಲದ್ದು. ಅಪ್ಪನ ಸಂಪ್ರದಾಯವನ್ನು 'ಮೂಢನಂಬಿಕೆ' ಎಂದೆವು. ಒಂದೇ ಬೆಳೆಯನ್ನು ಬೆಳೆದು ಹೆಚ್ಚು ಹಣ ಗಳಿಸಿ ದಿಢೀರನೆ ಶ್ರೀಮಂತರಾಗುವ ಕನಸು ಕಂಡೆವು. ಕಬ್ಬು, ಹತ್ತಿ ತಂಬಾಕು ಮೊದಲಾದ ವಾಣಿಜ್ಯ ಬೆಳೆಗಳನ್ನು ಬೆಳೆಯತೊಡಗಿದೆವು, ಪರ್ಯಾಯ ಬೆಳೆ ಮಾಡುತ್ತಿದ್ದ ಅಪ್ಪನ ಹೊಲದಲ್ಲಿ ಒಂದೇ ಬೆಳೆಯನ್ನು ಹತ್ತಾರು ವರುಷ ಬೆಳೆಯತೊಡಗಿದೆವು. ಕಾಲಗೈಯಂತಹ ಪದ್ಧತಿ ಅನುಸರಿಸುವುದನ್ನೇ ಬಿಟ್ಟೆವು. ಹೆಚ್ಚು ಹೆಚ್ಚು ನೀರು ಹಾಯಿಸಿ, ಹೆಚ್ಚು ರಾಸಾಯನಿಕ ಗೊಬ್ಬರ ಬಳಸಿ, ರಾಸಾಯನಿಕ ಕೀಟನಾಶಕ ಬಳಸಿ, ಹೆಚ್ಚು ಬೆಳೆ ತೆಗೆಯುವ ಗುರಿ ಸಾಧಿಸಿದೆವು. ಆದರೆ ಸಮೃದ್ಧಿಯ ಬಸಿರಲ್ಲಿ ಸಾವಿರಾರು ಸಮಸ್ಯೆಗಳು ಹುಟ್ಟಿಕೊಂಡಿದ್ದರಿಂದ ನಾವೆಲ್ಲ ಹತಾಸೆಗೊಂಡಿದ್ದೇವೆ. ಹೈಬ್ರಿಡ್ ಬೀಜಗಳ ಇಳುವರಿ ಎರಡು ಮೂರು ವರ್ಷಗಳಲ್ಲಿ ಕಡಿಮೆಯಾಯಿತು. ಅತಿಯಾದ ರಸಗೊಬ್ಬರ ಹಾಗೂ ರಾಸಾಯನಿಕ ಕೀಟನಾಶಕಗಳ ಬಳಕೆಯಿಂದಾಗಿ ಹೊಲದ ಮಣ್ಣು ಕೆಟ್ಟಿತು. ಹೊಲ ಮತ್ತು ರೈತನ ನಡುವೆ ಒಂದು ರೀತಿ ಅನ್ಯೋನ್ಯ ಸಂಬಂಧ ಇತ್ತು.

ಅಪ್ಪ 'ಹೊತ್ತೇರಿ ಹೊಲಕ್ಕೆ ಹೋದವ ರೈತನೇ ಅಲ್ಲ' ಎಂದು ತನ್ನ ದಿನಚರಿಯನ್ನು ಹೊಲದ ಮುಖ ನೋಡಿಯೇ ಆರಂಭಿಸುತ್ತಿದ್ದ. ಬೆಳಕಾಗುವಷ್ಟರಲ್ಲಿ ಹೊಲಕ್ಕೆ ಹೋಗಿ, ಇಂದು ಯಾವ ಕೆಲಸ ಮಾಡಲು ಹದ ಬಂದಿದೆ ಎಂಬುದನ್ನು ನಿರ್ಧರಿಸಿ ಆ ರೀತಿ ಹೊಲದ ಕೆಲಸ ಕಾರ್ಯ ಮಾಡುತ್ತಿದ್ದ. ಅಪ್ಪ ಮತ್ತು ಅಮ್ಮ ಸಹಿತ 'ಬೆಳಗಾಗುತ ಎದ್ದು ಯಾರ್ಯಾರ ನೆನೆಯಲಿ, ಎಳ್ಳು ಜೀರಿಗೆ ಬೆಳೆವಂತ ಭೂಮಿ ತಾಯಿಯ ಎದ್ದೊಂದು ಗಳಿಗೆ ನೆನೆದೇನ' ಎಂದು ಭೂಮಿತಾಯಿಯನ್ನು ನೆನೆಯುತ್ತ, ಪ್ರಾರ್ಥನೆ ಮಾಡುತ್ತ ತನ್ನ ದಿನದ ಕೆಲಸಕ್ಕೆ ತೊಡಗುತ್ತಿದ್ದಳು. ಹೊಲ ಎಂದರೆ ಸಸ್ಯಗಳನ್ನು ಬೆಳೆಸುವ ಯಂತ್ರವಲ್ಲ. ಅದು ಸಕಲ ಜೀವರಾಶಿಗಳಿಗೆ ಆಶ್ರಯಸ್ಥಾನ ಎನಿಸಿತ್ತು. ಅಂತೆಯೆ ಅವರಿಗೆ ಹೊಲದ ಬಗ್ಗೆ ಗೌರವ ಇತ್ತು. ಹೊಲದ ಮೇಲೆ ನಂಬಿಕೆ ಇತ್ತು. ಪೂಜ್ಯ ಭಾವನೆ ಇತ್ತು. ಹೀಗಾಗಿ ಯಾರೂ ಹೊಲದ ಕೆಲಸ ಕಾರ್ಯ ಮಾಡುವಾಗ ಹೊಲದಲ್ಲಿ ಚಪ್ಪಲಿ ಹಾಕಿಕೊಂಡು ಹೋಗುತ್ತಿರಲಿಲ್ಲ. ಹೊಲದಲ್ಲಿರುವ ಸೂಕ್ಷ್ಮ ಜೀವಾಣುಗಳು ನಾಶವಾದಾವು ಅಥವಾ ಹೊಲದ ಮಣ್ಣು ಗಟ್ಟಿಯಾದೀತೆಂಬ ಭಾವನೆಯೂ ಅವರಲ್ಲಿತ್ತು. ಕೊಯ್ಲು ಮಾಡಿದ

ಹೊಲದಲ್ಲಿ ಹಕ್ಕಲು ತೆನೆಗಳನ್ನೋ, ಸಾಸಿವೆಯನ್ನೋ ಬೆಳೆದ ಗುರೆಳ್ಳನ್ನೋ ಆರಿಸುವದರ ಬದಲಾಗಿ ಪ್ಲಾಸ್ಟಿಕ್ ಹಾಳೆಗಳನ್ನೋ ಔಷಧಿ ಸಿಂಪಡಿಸಿದ ಪ್ಲಾಸ್ಟಿಕ್ ಡಬ್ಬಿಗಳನ್ನು ಆರಿಸಿ ತೆಗೆಯುವ ಕೆಲಸ ನನ್ನ ಪಾಲಿಗೆ ಬಂದಿದೆ.

ಹೊಲದೊಡನೆ ನಮಗೆ ಯಾವ ಸಂಬಂಧವೂ ಇಲ್ಲದಾಗಿದೆ. ಒಡನಾಟವೂ ಇಲ್ಲದಾಗಿದೆ. ಹೊಲ ಎಂದರೆ ಅದೊಂದು ನಿರ್ಜೀವ ಯಂತ್ರ ಎಂದು ಭಾವಿಸಿದ್ದೇವೆ. ನಮಗೆ ಯಾವ ಸ್ವಾತಂತ್ರ್ಯವೂ ಇಲ್ಲದಾಗಿದೆ. ಟ್ರಾಕ್ಟರ್‌ನಿಂದ ಗಳೆ ಹೊಡೆಯಲು ಡಿಸಾಯಿಲ್ ತರಲು ಪಟ್ಟಣಕ್ಕೆ ಹೋಗಬೇಕು. ಬೀಜ ತರಲು ಕಂಪನಿಗಳ ಅಂಗಡಿಗೆ ಹೋಗಬೇಕು. ಗೊಬ್ಬರದ ಚೀಲ ತರಲು ಗೊಬ್ಬರದ ಅಂಗಡಿಗೆ ಹೋಗಬೇಕು. ಬೆಳೆಗಳಿಗೆ ರೋಗ ಮತ್ತು ಕೀಟದ ಬಾಧೆ ಆದರೆ ರಾಸಾಯನಿಕ ಕೀಟನಾಶಕ ಮತ್ತು ಔಷಧಿ ತರಲು ಕಂಪನಿಗಳ ಅಂಗಡಿಗೆ ಹೋಗಬೇಕಾಗಿದೆ. ಒಕ್ಕಿದ ಕಾಳನ್ನು ಹಗೇವು ಮತ್ತು ಕಣಜಗಳಲ್ಲಿ ಸಂಗ್ರಹಿಸಿಡದೆ, ಒಕ್ಕಿದ ಕೂಡಲೇ ಹೊಲದಿಂದ ನೇರವಾಗಿ ಮಾರ್ಕೆಟ್ಟಿಗೆ ಹೋಗಿ ಮಾರಾಟ ಮಾಡುತ್ತೇವೆ. ಗಡಿಗೆಯಲ್ಲಿಟ್ಟ ಬೀಜ ಬಿತ್ತಿ, ಹಿತ್ತಲಿನ ತಿಪ್ಪೆಯ ಗೊಬ್ಬರ ಹಾಕಿ, ಎತ್ತಿಲೆ ಗಳೆ ಹೊಡೆದು ಬೆಳೆ ಮಾಡುತ್ತಿದ್ದ ನನ್ನಪ್ಪನಿಗಿದ್ದ ಯಾವ ಸ್ವಾತಂತ್ರ್ಯವೂ ನನಗಿಲ್ಲದಾಗಿದೆ. ಎಲ್ಲವನ್ನು ಕೊಂಡು ತಂದು ಕೊಂಡು ತರಲು ಸಾಲ ಮಾಡಿ, ಬ್ಯಾಂಕಿನ ಬೋಜಾ ಹೊಲದ ಮೇಲೆ ಕೂಡ್ರಿಸಲಾಗಿದೆ.' ಹಾಗೆ ನೋಡಿದರೆ ಹೊಲದ ಮೇಲೆ ನನ್ನ ಅಧಿಕಾರವೂ ಇಲ್ಲ. ಉತಾರದಲ್ಲಿ ಮಾತ್ರ ನನ್ನ ಹೆಸರು ಉಳಿದಿದೆ. ನನಗರಿವಿಲ್ಲದಂತೆ ಮತ್ತೊಬ್ಬರ ನಿಯಂತ್ರಣಕ್ಕೊಳಪಟ್ಟಿರುವೆ. ನನ್ನ ಹೊಲವೂ ಸಹಿತ ಬೇರೆಯವರ ಅಧಿಪತ್ಯದಲ್ಲಿದೆ.

ಹೊಲ-ಎತ್ತು-ಗಳೆ-ಬೆಳೆ-ರೈತ ಮತ್ತು ಗೊಬ್ಬರ ಇವುಗಳದ್ದೇ ಆದ ಒಂದು ಸಾವಯವ ಚಕ್ರ ಹಾಗೂ ಇವುಗಳ ನಡುವೆ ಸಾವಯವ ಸಂಬಂಧವಿತ್ತು. ಎತ್ತು, ಎಮ್ಮೆ, ಆಕಳುಗಳು ಉತ ಷ್ಟವಾದ ಸೆಗಣಿ ಗೊಬ್ಬರ ಕೊಡುತ್ತವೆ. ಎತ್ತುಗಳು ಹೊಲದಲ್ಲಿ ಗಳೆ ಹೊಡೆಯಲು ಬಳಕೆಯಾಗುತ್ತವೆ. ಆಕಳು-ಎಮ್ಮೆಗಳು ಹಾಲು-ಹೈನ ಒದಗಿಸುವುದರ ಜೊತೆಗೆ ಒಕ್ಕಲುತನ ಮಾಡಲು ಹೋರಿ ಮತ್ತು ಕೋಣಗಳಿಗೆ ಜನ್ಮ ಕೊಡುತ್ತವೆ. ಇವೆಲ್ಲ ಹೊಲದಲ್ಲಿ ಬೆಳೆದ ಕಣಿಕೆ, ಹುಲ್ಲು ತಿಂದು ಬದುಕುತ್ತವೆ. ತೆನೆ-ಕಾಳು ನಮಗಾದರೆ ಕಣಿಕೆ-ಹೊಟ್ಟು ದನಗಳಿಗೆ ಹೊಟ್ಟೆ ತುಂಬಿಸುತ್ತದೆ. ನನ್ನ ಅಜ್ಜ ಮತ್ತು ಅಪ್ಪಂದಿರು ಕೇವಲ ತಮ್ಮ ಹೊಟ್ಟೆ ಬಟ್ಟೆಯ ಯೋಚನೆಯಿಂದ ಬೆಳೆ ಮಾಡುತ್ತಿರಲಿಲ್ಲ. ತಮ್ಮ ಉಪಜೀವನದ ಜೊತೆಗೆ ದನಕರುಗಳ ಉಪಜೀವನ ಮಾಡಲು ತಕ್ಕ ಬೆಳೆಗಳನ್ನು ಅಂದರೆ ಸತ್ವಯುತವಾದ ನವಧಾನ್ಯಗಳನ್ನು ಬೆಳೆಯುತ್ತಿದ್ದ. ಹಂಗಾಮಿನಸುಸರಿ ಬೆಳೆ ಮಾಡಿ ರೋಗ ಮತ್ತು ಕೀಟಗಳ ಬಾಧೆಯಿಂದ ಬೆಳೆಗಳನ್ನು ರಕ್ಷಿಸುವ ಜ್ಞಾನ ಅವರಲ್ಲಿತ್ತು.

ಹೈಟೆಕ್ ಕೃಷಿಯ ಬೆನ್ನು ಹತ್ತಿ ಸಾಂಪ್ರದಾಯಿಕ ಜ್ಞಾನವನ್ನು ಮರೆತುಬಿಟ್ಟೆವು. ಹೊಲ ಮತ್ತು ಮಳೆಯ ಮೇಲಿಟ್ಟ ನಂಬಿಕೆ, ಶ್ರದ್ಧೆ ಇಂದಿಲ್ಲದಾಗಿದೆ. ಸಾವಯವ ಕೃಷಿ ನಮಗೆಲ್ಲ ತಿಳಿಯದ ಸಂಗತಿ. ಆದರೆ ನನ್ನಪ್ಪನಿಗೆ ಸಾವಯವ ಕೃಷಿ ರಕ್ತಗತವಾಗಿತ್ತು. ಹತ್ತಾರು ವರುಷ ಮಳೆ, ಚಳಿ, ಗಾಳಿ, ಬಿಸಿಲು ಸಹಿಸಿ ಶ್ರಮವಹಿಸಿ ಒಕ್ಕಲುತನ ಮಾಡಿದ ರೈತನಿಗೆ ಸಾವಯವ ಕೃಷಿ ಸಹಜವೆನಿಸಿತ್ತು. ಕೈಯಳತೆಯಲ್ಲೇ ಸಿಗುವ ಕೃಷಿ ಪರಿಕರ ಗಳಿಂದ ಒಕ್ಕಲುತನ ಮಾಡಿದವರಿಗೆ ಇದೇನು ಹೊಸತಲ್ಲ. ಸರಕಾರವೇ ಸಾವಯವ ಕೃಷಿ ನೀತಿ ರೂಪಿಸುವ ಹಂತಕ್ಕೆ ಬಂದಿದ್ದು ಸಾಯವ ಕೃಷಿ ಅನಿವಾರ್ಯ ಎಂಬುದು ಮನದಟ್ಟಾಗಿದೆ. ಹಂಗಾಮಿಗನುಸರಿಸಿ ಬೆಳೆ ಮಾಡುವದಾಗಲಿ, ಜವಾರಿ ಬೀಜಗಳ ಮಹತ್ವವಾಗಲಿ ನನ್ನಪ್ಪನ ತಲೆಮಾರಿನ ರೈತರಿಗೆ ತಿಳಿಸಿಕೊಡುವ ಅಗತ್ಯವಿಲ್ಲ. ತರಬೇತಿ ಕೊಡುವ ಅವಶ್ಯಕತೆಯಿಲ್ಲ. ನಮಗೆ ಎನ್.ಪಿ.ಕೆ. ಮಾತ್ರ ಗೊತ್ತು. ಬೆಳೆಗಳಿಗೆ ೧೬ ಲಘು ಪೋಷಕಾಂಶಗಳೂ ಬೇಕೆಂಬುದು ತಿಳಿಯದ ಸಂಗತಿಯಾಗಿದೆ. ನಿಸ್ಸಾರಗೊಂಡಿರುವ ಹೊಲದ ಮಣ್ಣನ್ನು ಸುಧಾರಿಸಲು ಅಪ್ಪ ಮಾಡುತ್ತಿದ್ದ ಒಕ್ಕಲುತನ ಅಳವಡಿಸಿಕೊಳ್ಳುವದು ಒಂದೇ ದಾರಿ.

ಬೆಳೆಗಳನ್ನು ಕೀಟಗಳಿಂದ ರಕ್ಷಿಸಲು ವಿಷದ ನೀರನ್ನೆರೆದು ಬೆಳೆಸಿರುವ ನಮಗೆ ನಾವು ಉಣ್ಣುವ ಊಟವು ವಿಷವಾಗಿದೆ ಎಂಬುದರ ಅರಿವೂ ಇಲ್ಲ. ನಾವು ಉಣ್ಣುವ ಊಟ, ಹಣ್ಣು, ತರಕಾರಿ ಎಲ್ಲವೂ ವಿಷ ಮಿಶ್ರಿತ ಆಗಿರುವ ಸಂಗತಿ ನಮಗೆ ಮಹತ್ವದ್ದಾಗಿಲ್ಲ. ಮತ್ತು ನಾವು ಮಾಡುತ್ತಿರುವದು ಕೆಡುಕೆಂಬ ಭಾವನೆಯೂ ನಮ್ಮಲ್ಲಿಲ್ಲ. ಇದರಿಂದ ನಮ್ಮ ಆರೋಗ್ಯದ ಮೇಲೆ ಎಂತಹ ದುಷ್ಪರಿಣಾಮ ಆದೀತೆಂಬ ಅಳುಕೂ ಇಲ್ಲ. ಇದೇ ಸಂಗತಿ ನನ್ನ ಅಪ್ಪನ ತಲೆಮಾರಿನ ಒಕ್ಕಲಿಗರಿಗೆ ಪಾಪದ ಸಂಗತಿಯಾಗುತ್ತದೆ. ತಾನು ಕೀಟಗಳಿಂದ ಬೆಳೆ ರಕ್ಷಿಸಲು ಎಷ್ಟು ಕೀಟಗಳನ್ನು ಕೊಲ್ಲುತ್ತಿರುವೆನೆಂಬ ಪಾಪಪ್ರಜ್ಞೆ ಕಾಡುತ್ತಿತ್ತು. ಯಾವ ಜೀವಿಯನ್ನು ಕೊಲ್ಲದೆ ಅಹಿಂಸಾತ್ಮಕ ಬೇಸಾಯ ಮಾಡುತ್ತಿದ್ದ ಅಪ್ಪನಿಗೆ ವಿಷಮಿಶ್ರಿತ ಅನ್ನ ಉಣ್ಣುವದಾಗಲಿ, ಇತರರಿಗೆ ಉಣಿಸುವದಾಗಲಿ ಅಪರಾಧ ಎನಿಸುತ್ತಿತ್ತು. ನಮಗೆ ಹಣವಷ್ಟೇ ಮುಖ್ಯ ಪರಿಸರ, ಸೂಕ್ಷ್ಮ ಜೀವಾಣುಗಳಾಗಲಿ, ಉಪಕಾರಿ ಕೀಟಗಲಾಗಲಿ, ನಾಶವಾಗುವದು ಪಾಪದ ಸಂಗತಿಯೂ ಅಲ್ಲ. ಅದಕ್ಕಾಗಿ ಪ್ರಾಯಶ್ಚಿತ್ತ ಪಟ್ಟವರೂ ಅಲ್ಲ. ಪಾಪ-ಪುಣ್ಯದ ದೃಷ್ಟಿ ನಮ್ಮಲ್ಲಿಲ್ಲದಾಗಿದೆ. ಪಾಪ ಮಾಡಲು ಅಪ್ಪ ಅಂಜುತ್ತಿದ್ದ. ನಾವು ಅಂಜಲಾರೆವು. ನಾವೆಲ್ಲ ಹಣದ ರೂಪದಲ್ಲಿ ಲಾಭ-ಹಾನಿಯ ಲೆಕ್ಕಾಚಾರದಲ್ಲಿ ಮುಳುಗಿದವರು. ಪುಣ್ಯವನ್ನೇ ಮಾಡಿದ ಅಪ್ಪ ಅನ್ಯರಿಗೂ ಒಳ್ಳೆಯದನ್ನೇ ಬಯಸಿದ್ದಾರೆ. ಒಳ್ಳೆಯದನ್ನೇ ನೀಡಿದ್ದಾರೆ.

ಒಕ್ಕಲುತನದ ಪರಿಭಾಷೆ ಇಂದು ಬದಲಾಗಿದೆ. ಒಕ್ಕಲುತನದ ಪರಂಪರೆಯ ಜ್ಞಾನ ಮತ್ತು ಒಕ್ಕಲುತನದ ಧರ್ಮ ಇಂದು ನಶಿಸಿಹೋಗುತ್ತಿದೆ. ಒಂದು ಬೆಳೆಗೆ, ಒಂದು

ಮನೆಗೆ, ಪಶುವಿಗೆ, ಎತ್ತಿಗೆ, ಯಂತ್ರಕ್ಕೆ ವಿಮೆ ಮಾಡಿಸಿ ಪರಿಹಾರ ಪಡೆಯಬಹುದಾಗಿದೆ. ಆದರೆ ರೈತರ ಒಕ್ಕಲುತನದ ಪರಂಪರೆಯ ಜ್ಞಾನ ಅತ್ಯಮೌಲ್ಯವಾಗಿದ್ದು, ರೈತರ ಪರಂಪರೆಯ ಜ್ಞಾನಕ್ಕೆ, ಒಕ್ಕಲುತನದಲ್ಲಿ ಪಡೆದ ಅನುಭವಕ್ಕೆ ವಿಮೆ ಮಾಡಿಸಿ ಪರಿಹಾರ ಪಡೆಯಲು ಬರಲಾರದು.

ಪ್ರಗತಿಪರರೆನಿಸಿದ ನಾವೆಲ್ಲ ರೈತರು ನಮ್ಮ ಅಪ್ಪನಿಗಿಂತ ಬಹಳಷ್ಟು ಮುಂದುವರೆದಿದ್ದೇವೆ. ಇನ್ನು ಮುಂದೆ ಹೋಗಲಾರೆವು. ಆ ಸಾಮರ್ಥ್ಯವನ್ನು ಕಳೆದುಕೊಂಡಿದ್ದೇವೆ. ಆದರೆ ಹಿಂದೆ ತಿರುಗಿ ಬರಲು ಸಾಧ್ಯವಾದೀತೇ?

❋

ಈರಯ್ಯ ಕಿಲ್ಲೇದಾರ ಅವರು ಕೃಷಿಯನ್ನೇ ನಂಬಿ ಬದುಕುತ್ತಿರುವ ಜೀವ. ಆದರೆ, ಅಧಿಕ ಇಳುವರಿಯ ರಾಸಾಯನಿಕ ಬಳಕೆಯ ಆಧುನಿಕ ಕೃಷಿಗೆ ಜೋತುಬೀಳದೆ, ಸಾಂಪ್ರದಾಯಿಕ ಪದ್ಧತಿಯ ಜೈವಿಕ ಕೃಷಿ ವಿಧಾನವನ್ನು ಅನುಸರಿಸುತ್ತಿರುವವರು. ಪ್ರಯೋಗಗಳ ಮೂಲಕ ಅನುಭವವನ್ನೇ ಜ್ಞಾನವಾಗಿಸಿ ಕೊಂಡಂತೆ ಕೃಷಿಯ ಕಾಯಕವನ್ನು ಬೆಳೆಸುತ್ತಿದ್ದಾರೆ. ಅವರ ಅನುಭವದ ಸಾರ ಈ ಕೃತಿ.

ISBN 81-7713-239-3

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

